
ಸಂಪುಟ 24 ಸಂಚಿಕೆ 45-46
ನವೆಂಬರ್ 17, 2002 ಬೆಲೆ ರೂ. 3.00


# ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ


## ರಾಜ್ಯೋತ್ಸವದ ವಿಶೇಷ ಲೇಖನಗಳು




# ಐ.ಟಿ. ಆಡಳಿತದಲ್ಲಿ ಕನ್ನಡ




## ಸಂದರ್ಶನ :



"ಆಡಳಿತ ಭಾಷೆಯಲ್ಲಿ ಕನ್ನಡದ ಅನುಷ್ಠಾನದ ಪ್ರಗತಿ ಗಮನಾರ್ಹ"
– ಪ್ರೊ. ಬರಗೂರು ರಾಮಚಂದ್ರಪ್ಪ



"ಅನುಷ್ಠಾನದಲ್ಲಿ ಇಚ್ಛಾಶಕ್ತಿಯ ಕೊರತೆ"
– ಪ್ರೊ. ಚಂದ್ರಶೇಖರ ಪಾಟೀಲ್



"ಆಡಳಿತ ಭಾಷೆಯ ಜಾರಿ ವಿಸ್ತಾರಗೊಳ್ಳಬೇಕು"
– ಜಿ.ಎನ್.ನಾಗರಾಜ್

## 'ಕಂಬಾಲಹಳ್ಳಿ' ವ್ಯಕ್ತಿ ತೇಜೋವಧೆ ಚಿತ್ರ

## ಬ್ರೆಜಿಲ್ : ಎಡಪಂಥೀಯರ ರೋಮಾಂಚಕಾರಿ ಗೆಲುವು


# ಬ್ರಿಟಿಷ್ ಸೈನ್ಯದಲ್ಲಿ ಕ್ರಾಂತಿ 'ಕುಡಿ'

## ವಿಮೋಚನಾ ಸಮರದಲ್ಲಿ
## ಮೇಜರ್ ಜಯಪಾಲ್ ಸಿಂಗ್
### ಆತ್ಮಕಥನ

3



ಕಳೆದ ಸಂಚಿಕೆಯಲ್ಲಿ ಸ್ವಾತಂತ್ರ್ಯ ಭಾರತದ ಸರ್ಕಾರ 1947 ರ ಸೆಪ್ಟೆಂಬರ್ 3 ರಂದು ಜಯಪಾಲ್ ಸಿಂಗ್‌ರ ಬಂಧನ, ಗಾಂಧಿಯೇತರ ಸ್ವಾತಂತ್ರ್ಯ ಹೋರಾಟಗಾರರ ಬಗೆಗಿನ ಕಾಂಗ್ರೆಸ್ ನಿಲುವು, ಜಯಪಾಲ್ ಸಿಂಗ್‌ರ ಬಾಲ್ಯ,ಎಮ್ಮೆಯಿಂದ ಬ್ಯಾರಕ್‌ವರೆಗೆ, ತನ್ನ ತಂದೆಯ ಮನೋಭಾವದ ವಿರುದ್ಧವೇ ಅವರ ಮೊದಲ ದನಿ ಮೂಡಿದ್ದು ಈ ಬಗೆ ಓದಿರುವಿರಿ... ಮುಂದೆ ಓದಿ



ಕನ್ನಡಕ್ಕೆ - ವಿಶ್ವ ಕುಂದಾಪುರ

ಬ್ಯಾರಕ್‌ಗಳಲ್ಲಿ, ಕವಾಯತು ಮೈದಾನಗಳಲ್ಲಿ , ಆಟದ ಅಂಗಳಗಳಲ್ಲಿ ಮತ್ತು ಅಂತಿಮವಾಗಿ ಯುದ್ಧದಲ್ಲಿ ಬಾಡಿಗೆ ಬಂಟರ ಸೈನ್ಯವನ್ನು ತುಂಬಾ ಹತ್ತಿರದಿಂದ ನೋಡುವ ಅವಕಾಶ ನನಗೆ ಸಿಕ್ಕಿತು. ತಮ್ಮ ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದುಡಿಯುವ, ಹಳ್ಳಿಗಾಡಿನಲ್ಲಿ ಪ್ರಾಮಾಣಿಕ ದುಡಿಮೆಯ ಜತೆ ಮಾನವೀಯ ಮೌಲ್ಯಗಳನ್ನು ಮಾಂಸ - ರಕ್ತಗಳಲ್ಲಿ ತುಂಬಿಕೊಳ್ಳುವ ಜಾಟ್ ರೈತರು ಯಾವ ರೀತಿಯಾಗಿ ಬ್ಯಾರಕ್‌ಗಳಲ್ಲಿ ಕ್ರೂರವಾದ ಹಾಗೂ ಮಾನವೀಯ ಮೌಲ್ಯ ರಹಿತವಾದ 'ಜೀವಿ'ಗಳಾಗುತ್ತಿರುವ ಪ್ರಕ್ರಿಯೆಯನ್ನು ನೋಡಿದೆ.

**ಸೈನಿಕರ ಕಾಮದಾಹ...**

ಗದ್ದೆಗಳಲ್ಲಿ ಕೆಲಸವಿಲ್ಲ. ಸಾಂಸ್ಕೃತಿಕ ಚಟುವಟಿಕೆಗಳ ಸಂಪರ್ಕವಿಲ್ಲ. ಬ್ಯಾರಕ್‌ಗಳಲ್ಲಿ ಉಸಿರುಗಟ್ಟಿಸುವ ವಾತಾವರಣದಲ್ಲಿ ಕುರಿಮಂದೆಯಂತೆ ಗುಂಪು ಜೀವನ. ಒಂಟಿತನ, ಏಕಾಂಗಿತನ ಇದರ ಮೇಲೆ ಗಾಯದ ಮೇಲೆ ಬರೆ ಎಳೆದಂತೆ ಶಿಕ್ಷಕರು (instructors) ಹಾಗೂ ಜೆ.ಸಿ.ಓ ಗಳಿಂದ ಅಸಹ್ಯ ಹಾಗೂ ಕ್ರೂರ ಹೊಡೆತಗಳು- ಇವೆಲ್ಲದರ ಪರಿಣಾಮ 'ಜಾಟ್ ಮಕ್ಕಳು' ಕ್ರೂರಿಗಳಾದರು. ತಮ್ಮ ಲೈಂಗಿಕ ತೃಷೆಯನ್ನು ತಣಿಸಿಕೊಳ್ಳಲು ರೆಜಿಮೆಂಟ್‌ನ ಜಾಡಮಾಲಿಗಳ ಮೇಲೆ ಅತ್ಯಾಚಾರ ನಡೆಸಿದರು. ಜಾಡಮಾಲಿಗಳು ಸಿಗದಿದ್ದರೆ ರೆಜಿಮೆಂಟಲ್ ಬನಿಯಾ (bania)ಗಳ ಅಪ್ರಾಪ್ತ ಪುತ್ರಿಯರ ಮೇಲೆ ಕಾಮದೃಷ್ಟಿ ಹಾಯಿಸಿದರು. ಕಾಮದಾಹ ತಣಿಸಿಕೊಳ್ಳಲು ಆಗಾಗ ದನ, ನಾಯಿ, ಕರುಗಳನ್ನು ಬಳಸಿಕೊಂಡರು! ಸಲಿಂಗರತಿ ಅಪಾರ ಪ್ರಮಾಣದಲ್ಲಿತ್ತು. ಹಗಲು ಕಳೆದು ಕತ್ತಲಾಗುತ್ತಿದ್ದಂತೆ ಯುವ, ಸುಂದರ ಜಾಟ್ ಹುಡುಗ ನಿಧಾನಕ್ಕೆ ತನ್ನ ಹಾಸಿಗೆಯಿಂದ ಎದ್ದುಹೋಗಿ ಪ್ಲಟೂನ್ ಹವಾಲ್ದಾರನ ಹಾಸಿಗೆ ಸೇರುತ್ತಿದ್ದ. ಸಾಮ್ರಾಜ್ಯಶಾಹಿ ಕ್ರಿಮಿನಲ್‌ಗಳ ಆಣತಿ ಮೇರೆಗೆ ಭಾರತೀಯ ಯುವಕರನ್ನು ಮೃಗಗಳಂತೆ ಕಾಮುಕರು ಬಳಸುತ್ತಿದ್ದರು. ಬ್ರಿಟೀಷ್ ಸಾಮ್ರಾಜ್ಯಶಾಹಿ ನಮ್ಮ ಜನರಿಗೆ ಕಲಿಸಿದ 'ನಾಗರೀಕ ಸಭ್ಯತೆಯಿದು'! ಇದರ ಸೇಡು ತೀರಿಸಿಕೊಂಡೇ ತೀರುತ್ತೇನೆ ಎಂದು ಸಣ್ಣ ಪ್ರಾಯದಲ್ಲೇ ನಾನು ಪ್ರತಿಜ್ಞೆಗೈದೆ.

ಅತ್ತ, ಬ್ಯಾರಕ್‌ಗಳ ಹೊರಗಡೆ, ತೀಕ್ಷ್ಣವಾದ ವೀರೋಚಿತ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ನೂರಾರು ಜನರು ನಗುನಗುತ್ತಾ ಗಲ್ಲು ಕಂಬವೇರಿದರು. ನನ್ನ ಕಾಲೇಜು ಅನುಭವ ನನ್ನ ವರ್ಗಪ್ರಜ್ಞೆಯನ್ನು ಜಾಗ್ರತಗೊಳಿಸಿತು. ರಾಷ್ಟ್ರೀಯ ವಿಮೋಚನಾ ಸಮರದ ಮೇಲ್ಪದರ ಕೆಳಗಡೆ ನಮ್ಮ ಭಾರತೀಯ ಸಮಾಜದ 'ವರ್ಗ ಸಂಘರ್ಷ'ದ ಹೊಳಪು ಇರುವುದನ್ನು ನಾನು ಸ್ಪಷ್ಟವಾಗಿ ಕಂಡೆ.

**ಕಾಲೇಜು ರಂಗದಲ್ಲಿ**

ಆರು ವರ್ಷಗಳಷ್ಟು ದೀರ್ಘ ಕಾಲ ಬ್ಯಾರಕ್‌ಗಳಿಂದ ಕಾಲೇಜಿಗೆ ನಡೆದುಹೋದೆ. ಅಲ್ಲಿದ್ದ ಭಾರತೀಯ ಶ್ರೀಮಂತರ ಪುತ್ರರು ಹಾಗೂ ಪುತ್ರಿಯರು ಮನಸ್ಸಿಲ್ಲದ ಮನಸ್ಸಿನಿಂದ ನನ್ನನ್ನು ಸ್ವೀಕರಿಸುತ್ತಿದ್ದರು. ರೈತಾಪಿ ಮಕ್ಕಳ ಪೈಕಿ ಮೂವತ್ತು ವಯಸ್ಸು ದಾಟಿದ ವಿದ್ಯಾರ್ಥಿಗಳು ಕೆಲವೇ ಕೆಲವರು ಇದ್ದರು. ಈಗ ಭಾರತದ ಆಡಳಿತಗಾರರೆಂದು ಜಂಭ ಕೊಚ್ಚಿಕೊಳ್ಳುತ್ತಿರುವ, ನಗರದ ಶ್ರೀಮಂತರ ಪುತ್ರರು ಹಾಗೂ ಪುತ್ರಿಯರು ನಮ್ಮನ್ನು 'ಸ್ನಾನ ಮಾಡದವರು', 'ಅನಾಗರೀಕರು' 'ಒರಟರು' ಎಂದೆಲ್ಲ ಛೇಡಿಸುತ್ತಿದ್ದರು. ಇದೊಂದು ಸುದೀರ್ಘ ಭಾವನಾತ್ಮಕ ಯಾತನೆಯ ಜೀವನವಾಗಿತ್ತು. ವಿಶ್ವವಿದ್ಯಾಲಯದ ಶಿಕ್ಷಣ ನನಗೆ ಸ್ವಾತಂತ್ರ್ಯ ಹಾಗೂ ಎಚ್ಚರದ ದಿಗಂತವನ್ನು ತೆರೆದಿತ್ತು. ಆದರೆ ಬ್ಯಾರಕ್‌ಗಳಲ್ಲಿನ ನೈತಿಕ ಉಸಿರುಗಟ್ಟಿಸುವಿಕೆ ಹಾಗೂ ಕಾಲೇಜ್ ಜೀವನದಲ್ಲಿ ಸರ್ವವ್ಯಾಪಿಯಾದ 'ವರ್ಗಭೇದಗಳು' ಇದರಿಂದ ತದ್ವಿರುದ್ಧವಾಗಿದ್ದವು.

ನನ್ನ ಹಳ್ಳಿಯಲ್ಲಿ ಸಾಮ್ರಾಜ್ಯಶಾಹಿಯನ್ನು ದ್ವೇಷಿಸುವುದನ್ನು ಕಲಿತೆ. ನನ್ನ ವಿಶ್ವವಿದ್ಯಾಲಯ ದಿನಗಳಲ್ಲಿ ನಗರದ ಶ್ರೀಮಂತರು, ಅವರ ತಿಕ್ಕಲುತನ, ಅಹಂಭಾವ, ನಯವಂಚನೆ, ಐಲುಗಳನ್ನು ದ್ವೇಷಿಸಲು ಕಲಿತೆ. ಅವರ ಪೈಕಿ ನಾನೊಬ್ಬ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿ ಕೊಂಡೆ. ನಾನೊಬ್ಬ ರೈತ, ನಾವು ಬ್ರಿಟೀಷರ ವಿರುದ್ಧ ಹೋರಾಡುತ್ತಿದ್ದಾಗ ನಾವು ಆ ಭೇಧವನ್ನು ನಿವಾರಿಸಿ ಕೊಳ್ಳಬೇಕಿತ್ತು; ಬ್ರಿಟೀಷರು ಹೋದ ನಂತರ ನಮ್ಮ ನಮ್ಮ ನಡುವೆ ಈ ಕೆಲಸ ಆಗಬೇಕಿತ್ತು.

ಆ ಸಮಯದಲ್ಲಿ ರಾಜಕೀಯವಾಗಿ ನನಗೇನೂ ಯಾವುದೇ ಅಭಿಪ್ರಾಯ ಇರಲಿಲ್ಲ. ಗಾಂಧಿವಾದ ನನ್ನ ಜೀವನದ ಆರಂಭಿಕ ಹಂತದಲ್ಲೇ ನನ್ನನ್ನು ನಿರಾಕರಿಸಿತ್ತು. 1930ರಲ್ಲಿ ನನ್ನ ಊರು ಶಾಮ್ಲಿಯಲ್ಲಿ ಉಪ್ಪಿನ ಸತ್ಯಾಗ್ರಹ ಆರಂಭವಾಗಿತ್ತು. ಉಪ್ಪು ತಯಾರಿಸುವ ಸತ್ಯಾಗ್ರಹಿಗಳನ್ನು ನೋಡಲು ಸುಮಾರು 20 ಸಾವಿರ ಜನರು ನೆರೆದಿದ್ದರು. ಹಾಗೆ ಮಾಡುವುದು ಕಾನೂನು ಬಾಹಿರವಾಗಿತ್ತು. ಅಲ್ಲಿ ಐದು ಪೋಲೀಸರು ಪ್ರತ್ಯಕ್ಷರಾದರು, 20 ಸಾವಿರ ಜನರನ್ನು ಸುಲಭವಾಗಿ ಚದುರಿಸಿದರು! ಅಹಿಂಸಾ ಸತ್ಯಾಗ್ರಹಿಗಳನ್ನು ಬಂಧಿಸಿದರು. ನನಗೆ ಆಶ್ಚರ್ಯವಾಯಿತು.

**ಉಕ್ಕೇರಿದ ನದಿಯ ಪ್ರವಾಹ ತನ್ನ ಹಾದಿಯುದ್ದಕ್ಕೆ ಸಿಗುವ ಎಲ್ಲವನ್ನು ಆಪೋಶನ ತೆಗೆದುಕೊಳ್ಳುವಂತೆ ನಮ್ಮ ಸೈನ್ಯಗಳು ಬ್ರಿಟಿಷರನ್ನು ಕೊಚ್ಚಿಕೊಂಡು ಹೋಗಿ ಸಮುದ್ರಕ್ಕೆ ತಳ್ಳಿಬಿಡಬೇಕು ಎಂಬ ಕನಸು ಅರಳಿಸು....**

ಜನರಲ್ಲಿ ಸಿಟ್ಟು ಮಡುಗಟ್ಟಿತ್ತು. ಅವರು ಬಹಳ ಸುಲಭವಾಗಿ ಐದು ಪೋಲೀಸರ ಮೇಲೆ ಮುಗಿಬೀಳಬಹುದಿತ್ತು. ಆದರೆ ಗಾಂಧೀಜಿ ಅವರ ದಾರಿಗೆ ಅಡ್ಡ ಬಂದಿರಬೇಕು. ಐವರು ಸಶಸ್ತ್ರ ಸಿಬ್ಬಂದಿ ಇಪ್ಪತ್ತು ಸಾವಿರ ಜನರನ್ನು ಚದುರಿಸಬಹುದೆಂಬ ವಿಚಾರ ವಿಲಕ್ಷಣವಾಗಿದೆ. ಇಲ್ಲಿ, ಬ್ರಿಟೀಷರ ವಿರುದ್ಧ ಸೆಣಸಲು ನಾವು ಶಸ್ತ್ರಗಳನ್ನು ಕೈಗೆತ್ತಿಕೊಳ್ಳಬೇಕು ಎಂದೇ ನನಗನಿಸಿತು. ಅದಕ್ಕಿಂತ ಹೆಚ್ಚಾಗಿ ರೈತರಿಗಾಗಿ ಗಾಂಧೀಜಿಯಲ್ಲಿ ಯಾವುದೇ ಕಾರ್ಯಕ್ರಮ ಇಲ್ಲದಿರುವುದನ್ನು ಗಮನಿಸಿದೆ.

ಕ್ರಾಂತಿಕಾರಿ ಯುವಜನರತ್ತ ನಾನು ಆಕರ್ಷಿತನಾದೆ. ಕುತೂಹಲಿಗಳಿಗೆ ನಿಷೇಧಿತ ಸಾಹಿತ್ಯ ಸಿಗುತ್ತಿತ್ತು. ಸಾವಿಗೆ ಅಂಜದ ಬಂಗಾಳದ ಯುವಜನರ ಸಾಹಸ ನನ್ನನ್ನು ವಿಶೇಷವಾಗಿ ಸೂಜಿಗಲ್ಲಿನಂತೆ ಸೆಳೆಯಿತು.

ಕಲ್ಪನಾದತ್, ಗಣೇಶ್ ಘೋಷ್ ಮತ್ತು ರಾಮಪ್ರಸಾದ್ ಬಿಸ್ಮಿಲ್ಲರ ಶೌರ್ಯದ ಕತೆಗಳನ್ನು ಕೇಳಿದೆ. ನನ್ನಲ್ಲಿನ ಕ್ರಾಂತಿಕಾರಿ ಯೋಜನೆಯು ಮೂರ್ತರೂಪ ಪಡೆಯತೊಡಗಿದವು. ಸನ್ಯಾಲ್‌ರ 'ಬಂಧಿ ಜೀವನ್' ಕಥಾನಕ ನನ್ನ ಮೇಲೆ ಅಪಾರ ಪ್ರಭಾವ ಬೀರಿತು. ಆಗ್ರಾದ ಸೇಂಟ್ ಜಾನ್ ಕಾಲೇಜಿನ ಕ್ರಾಂತಿಕಾರಿಗಳ ತಂಡದ ಜತೆ ಸಂಪರ್ಕ ಬೆಳೆಸಿದೆ. ನಿಷೇಧಿತ ಕ್ರಾಂತಿಕಾರಿ ಸಾಹಿತ್ಯವನ್ನು ಅಕ್ರಮವಾಗಿ ಬ್ಯಾರಕ್‌ಗಳಿಗೆ ಸಾಗಿಸಿದೆ.

**ಅತ್ತ, ಬ್ಯಾರಕ್‌ಗಳ ಹೊರಗಡೆ, ತೀಕ್ಷ್ಣವಾದ ವೀರೋಚಿತ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ನೂರಾರು ಜನರು ನಗುನಗುತ್ತಾ ಗಲ್ಲು ಕಂಬವೇರಿದರು. ನನ್ನ ಕಾಲೇಜು ಅನುಭವ ನನ್ನ ವರ್ಗಪ್ರಜ್ಞೆಯುನ್ನು ಜಾಗ್ರತಗೊಳಿಸಿತು.**

ಕೊರೆಯುವ ಚಳಿಯಲ್ಲಿ, ಮನೆಯಲ್ಲಿ ತಯಾರಿಸಿದ ಮೆತ್ತೆಯಲ್ಲದ ಮೈ ಹೊದೆದುಕೊಂಡು ರಾತ್ರಿ ಹೊತ್ತು ಅನೇಕ ಗಂಟೆಗಳ ಕಾಲ ಕಾಕೋರಿ ಪ್ರಕರಣದ ಹೀರೋಗಳು, 'ಯುಗಾಂತರ' ಮತ್ತು 'ಅನುಶೀಲನ' ತಂಡಗಳ ಹುಡುಗರ ರೋಮಾಂಚನಕಾರಿ ಕತೆಗಳನ್ನು ಓದುತ್ತಾ ಅವರು ಅನುಭವಿಸಿದ ಕಷ್ಟಗಳನ್ನು ನೆನೆದು ಕಣ್ಣೀರು ಸುರಿಸಿದೆ.

ದೀಪ ಆರಿಸಬೇಕೆಂಬ ಸೂಚನೆ ಬಂತು. ಅನಿವಾರ್ಯವಾಗಿ ಕತ್ತಲನ್ನು ಅಪ್ಪಿಕೊಳ್ಳಬೇಕಾಗಿತ್ತು. ಆದರೆ ಮನಸ್ಸು ಮಾತ್ರ ಕ್ರಾಂತಿಕಾರಿ ಚಟುವಟಿಕೆಗಳನ್ನು ನಡೆಸಬೇಕೆಂಬ ಯೋಜನೆಯಿಂದ ಸದಾ ಎಚ್ಚರವಾಗಿರುತ್ತಿತ್ತು. ಪೂರ್ವದಿಗಂತದಲ್ಲಿ ಸೂರ್ಯೋದಯ ಆಗುವತನಕವೂ ಎಚ್ಚರವಾಗಿಯೇ ಇರುತ್ತಿದ್ದೆ. ಆ ಮುಂಜಾವಿನ ತಂಗಾಳಿಯ ಅಮಲು ಬರಿಸುವ ಆ ವಾತಾವರಣದಲ್ಲಿ ನನ್ನ ಅರಳುಕಣ್ಣುಗಳಲ್ಲಿ ಸಾವಿರಾರು ಕನಸುಗಳು ತುಂಬಿರುತ್ತಿದ್ದವು. ಅವೆಲ್ಲವೂ ಕ್ರಾಂತಿಕಾರಿ ಚಟುವಟಿಕೆಯ ಕನವರಿಕೆಗಳೇ. ವೈರಿ ಪಾಳಯದಲ್ಲೇ ಅಂಥ ಕೆಲಸಗಳಲ್ಲಿ ತೊಡಗಬೇಕೆಂದು ಯೋಜಿಸಿದೆ.

ಒಬ್ಬ ಜಾಟ್, ಸೇನಾನಿಯೊಬ್ಬನ ಪಾತ್ರ ಹಾಗೂ ಸಣ್ಣ ಪ್ರಾಯದಿಂದಲೇ ಬ್ಯಾರಕ್ ಅನುಭವದ ಹುಡುಗನಾದ್ದರಿಂದ ಕ್ರಾಂತಿಕಾರಿ ಯೋಜನೆಯ ನನ್ನ ಕನಸುಗಳು ವ್ಯಕ್ತಿಗತ ಭಯೋತ್ಪಾದನೆಗೆ ಸೀಮಿತವಾಗಲಿಲ್ಲ. ಹಿಮಾಲಯದ ದೂರಪ್ರದೇಶದ ಹಿಮಾಚ್ಛಾದಿತ ಪ್ರದೇಶಗಳಲ್ಲಿ ಸೈನ್ಯಗಳು ಬೆಳೆಯುವುದರ ಕನಸು ಕಂಡೆ. ಈ ಸೈನ್ಯಗಳು, ಉಕ್ಕೇರಿದ ಪ್ರವಾಹದಂತೆ ಬಯಲು ಪ್ರದೇಶಕ್ಕೆ ನುಗ್ಗಿ ಬ್ರಿಟೀಷರನ್ನು ಕೊಚ್ಚಿಕೊಂಡು ಹೋಗಿ ಸಮುದ್ರಕ್ಕೆ ತಳ್ಳುವ ಕನಸು ಅರಳಿತು. ನಾವಿನ್ನೂ ಬೆಟ್ಟಗಳನ್ನು ಕಂಡಿರಲಿಲ್ಲವಾದರೂ ಬಾಲ್ಯದಲ್ಲಿ ನನ್ನ ಹಳ್ಳಿಯಲ್ಲಿ ರಚಿಸಿದ ಬೆಟ್ಟವನ್ನು ನೆನಪಿಸಿಕೊಂಡೆ.

ಎಮ್ಮೆಯನ್ನು ಕರೆದುಕೊಂಡು ಹೋಗುತ್ತಿದ್ದಾಗ ದಾರಿಯುದ್ದಕ್ಕೂ ಕೊಳೆತು ಬಿದ್ದ ಎಲೆಗಳು, ಮಣ್ಣಿನ ಗುಡಿಸಲುಗಳು, ನಾಯಿ ಹಾಗೂ ಮಕ್ಕಳ ಮಲಮೂತ್ರ ಗಳಿಂದ ನಾರುತ್ತಿದ್ದ ಜಾಗ ಇವೆಲ್ಲವೂ ಸುಳಿದಾಡಿದವು.

ಬೆಂಕಿಯುಂಡೆಯಂಥ ಸೂರ್ಯ ಮೇಲೆದ್ದ ಘುಲ್ಲು ಜಾರ್ಟ್ ಮಾವಿನ ತೋಪಿನ ಮರೆಯಿಂದ. ಆ ಶುಭ್ರ ಬೆಳಗಿನಲ್ಲಿ, ದೂರದ ಹರಿದ್ವಾರ ಮತ್ತು ಡೆಹ್ರಾಡೂನ್‌ನಲ್ಲಿ ಹಿಮಾಚ್ಛಾದಿತ ಹಿಮಾಲಯದ ಶಿಖರಗಳು ಕಂಡವು. ಅವು ನೀಲಾಗಸದಲ್ಲಿ ಮೇಯುತ್ತಿರುವ ಭಾರೀ ಗಾತ್ರದ ಎಮ್ಮೆಗಳಂತೆ ಭಾಸವಾಯಿತು.

ಯುದ್ಧದ ಕರಿಛಾಯೆ ಮುಸುಕಿತ್ತು. "ಈ ಅವಕಾಶವನ್ನು ಬಿಡಬಾರದು. ನಾನು ಸೇನೆಗೆ ಸೇರಲೇಬೇಕು" ಎಂದುಕೊಂಡ ನಾನು " ಸಶಸ್ತ್ರ ಪಡೆಗಳ ಒಳಗಿದ್ದುಕೊಂಡೇ ಬ್ರಿಟಿಷರನ್ನು ನಡುಗಿಸಬೇಕು" ಎಂದು ಎಂ.ಎ.ಯಲ್ಲಿದ್ದಾಗ ದೃಢ ನಿರ್ಧಾರ ಮಾಡಿದೆ.

ಸೇನೆ ಸೇರಿ ಕಿಂಗ್ಸ್ ಕಮಿಷನ್ ಗಳಿಸುವುದು ನನಗೆ ಕಷ್ಟವಾಗಲಿಲ್ಲ. ನಾನು ಎಂ.ಎ.ಪಾಸ್ ಮಾಡಿದೆ. 35 ವರ್ಷಕ್ಕೂ ಹೆಚ್ಚು ಕಾಲ ಬ್ರಿಟೀಷರಿಗೆ ವಿಧೇಯನಾಗಿ ಸೇವೆ ಸಲ್ಲಿಸಿದ್ದ ನನ್ನ ತಂದೆಗೆ ಸೇನೆಯಲ್ಲಿ ಬಡ್ತಿ ಸಿಕ್ಕಿತ್ತು. ಸುಬೇದಾರ್ - ಮೇಜರ್ ಹಾಗೂ ಗೌರವ ಕ್ಯಾಪ್ಟನ್ ಹುದ್ದೆಗೆ ಬಡ್ತಿ ಪಡೆದಿದ್ದ ಅವರು ಬ್ರಿಟೀಷ್ ಭಾರತದ ಸೂಪರ್ ನ್ಯೂಮರರಿ ಆರ್ಡರ್‌ಗೆ ಸೇರ್ಪಡೆಗೊಂಡಿದ್ದರು. ಅಷ್ಟೇ ಅಲ್ಲದೆ ಸರ್ದಾರ್ ಬಹಾದೂರ್ ಬಿರುದನ್ನು ಕೂಡ ಅವರಿಗೆ ನೀಡಲಾಗಿತ್ತು.

ಎರಡನೇ ಮಹಾಯುದ್ಧ ಬಂತು. ಅದರ ಜತೆ, 15 ವರ್ಷಕ್ಕೂ ಹೆಚ್ಚು ಕಾಲ ಬ್ಯಾರಕ್ ಹುಡುಗನಾಗಿ ಗುಲಾಮನಾಗಿದ್ದ ಬ್ಯಾರಕ್‌ಗಳಿಗೆ ನಾನೂ ಮರಳಿದೆ. ಆದರೆ ಈ ಬಾರಿ ನನ್ನ ಪಾತ್ರ ಬೇರೆಯಾಗಿತ್ತು ಕೆಳ ಹಂತದ ಸೈನಿಕರನ್ನು ಗುಲಾಮರನ್ನಾಗಿ ನಡೆಸಿಕೊಳ್ಳುವ ಅಧಿಕಾರಿಯಾಗಿದ್ದೆ!

(ಮುಂದುವರಿಯುವುದು)

# ಅಪರಾಧೀಕರಣದ ಬೇರುಗಳು ಸಮಾಜದ ವ್ಯವಸ್ಥೆಯಲ್ಲಿ

**ಹೆಚ್ಚುತ್ತಿರುವ ಅಪರಾಧಿ ಕೃತ್ಯಗಳಲ್ಲಿ ಯುವಜನರ ಪಾಲು ಅಧಿಕವಾಗಿರುವುದು ಆತಂಕದ ವಿಷಯ. ಇದು ಹೀಗೇಕೆ? ಪರಿಹಾರೋಪಾಯಗಳು ಇಲ್ಲವೇ? ಒಟ್ಟು ಅಪರಾಧೀಕರಣದ ಮೂಲ ಸೆಲೆಯಾವುದು? ಎಂಬಂತಹ ಗಹನವಾದ ವಿಚಾರಗಳತ್ತ ಚಿಂತನೆ-ಚರ್ಚೆಗಳ ವಿಚಾರಸಂಕಿರಣ ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿತು- ರಾಯಚೂರಿನಲ್ಲಿ ನಡೆಯಲಿರುವ ಡಿವೈಎಫ್ಐ 7 ನೇ ರಾಜ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಯೋಜಿತಗೊಂಡ ಸಂವಾದದ ಗೋಷ್ಠಿಯ ವರದಿ ಇಲ್ಲಿದೆ.**

ನಮ್ಮ ಭ್ರಷ್ಟ ರಾಜಕೀಯ ವ್ಯವಸ್ಥೆಯು ಅಪರಾಧಿಕರಣಕ್ಕೆ ಕಾರಣವಾಗಿದೆ. 'ರಾಜಕೀಯ' ಮಾಡಲು ಅಪರಾಧಿಕರಣ ಅನಿವಾರ್ಯ ಎನ್ನುವ ಸ್ಥಿತಿ ಇದೆ. ಭ್ರಷ್ಟ ರಾಜಕೀಯ ವ್ಯವಸ್ಥೆ ಎಲ್ಲರನ್ನೂ ಭ್ರಷ್ಟರನ್ನಾಗಿ ಮಾಡುತ್ತಿದೆ 'ರಾಜಕೀಯ' ಕ್ಕೆ ಅನಿವಾರ್ಯವಾಗಿಸಿಕೊಂಡ ಅಪರಾಧಿಕಾರಣವನ್ನು ರಕ್ಷಿಸಲು ಪೋಲೀಸರ ಸಹಾನುಭೂತಿ ಮತ್ತು ಅದಕ್ಕೆ ಬೇಕಾಗಿರುವ ಪೋಲೀಸ್ ವ್ಯವಸ್ಥೆ ಹೀಗೆ ಪ್ರತಿಯೊಂದು ಭ್ರಷ್ಟಗೊಳ್ಳುತ್ತಾ ಬಂದ ಹಾಗೆ ಪೋಲೀಸ್ ಠಾಣೆಗಳು ಉತ್ಪತ್ತಿಯ ಕೇಂದ್ರಗಳಾಗಿವೆ. ಉತ್ಪತ್ತಿ ಹೆಚ್ಚು ಮಾಡಲು ಅಪರಾಧ ಹೆಚ್ಚಳವಾಗಬೇಕು. ಎ.ಸಿ.ಪಿ ಬೆಳ್ಳಿಯಪ್ಪನಂತಹವರನ್ನು ಪೋಲೀಸ್ ವ್ಯವಸ್ಥೆ ಮತ್ತು ಭ್ರಷ್ಟ ರಾಜಕೀಯ ವ್ಯವಸ್ಥೆಯೇ ಸೃಷ್ಟಿ ಮಾಡಿದೆ. ಹಾಗಾಗಿ ಅಪರಾಧಿಗಳೇ ದೇಶವನ್ನಾಳುತ್ತಿದ್ದಾರೆ ಎಂದು ಖ್ಯಾತ ವಕೀಲರು, ವಿಧಾನ ಪರಿಷತ್‌ನ ಮಾಜಿ ಸದಸ್ಯರಾದ ಎ.ಕೆ ಸುಬ್ಬಯ್ಯನವರು ಅಭಿಪ್ರಾಯಪಟ್ಟರು.

DYFI 7ನೇ ರಾಜ್ಯ ಸಮ್ಮೇಳನದ ಅಂಗವಾಗಿ ಬೆಂಗಳೂರು ಜಿಲ್ಲಾ ಸಮಿತಿ ಬೆಂಗಳೂರಿನ 'ಯುವಕ ಕೇಂದ್ರದಲ್ಲಿ' ಏರ್ಪಡಿಸಿದ್ದ **'ಹೆಚ್ಚುತ್ತಿರುವ ಅಪರಾಧ ಹಾಗೂ ಯುವಜನ'** ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ರಾಜಕೀಯ ಅಪರಾಧೀಕರಣದ ಅತ್ಯಂತ ಕರಾಳ ಕೂಪವಾದ ಕೋಮುವಾದದ ಬಗ್ಗೆ ಚರ್ಚಿಸುತ್ತಾ, ಹಿಂದೂ ಫ್ಯಾಸಿಸ್ಟ್ ಶಕ್ತಿಗಳು ಯುವಜನರ ಆಲೋಚನಾಶಕ್ತಿಯನ್ನೇ ನೇರವಾಗಿ ಗುರಿಮಾಡಿಕೊಂಡಿದ್ದಾರೆ. ಧಾರ್ಮಿಕ ಮೂಲಭೂತವಾದ ಸಮಾಜದ ಕಂಟಕವಾಗಿದ್ದು, ಯುವಕರಲ್ಲಿ ಮುಸ್ಲಿಂ ವಿರೋಧಿ ಭಾವನೆಯನ್ನು ಅಂಥ್ರಾಕ್ಸ್ ರೋಗಾಣು ತರಹ ಬಿತ್ತುವ ಮೂಲಕ ಇಲ್ಲಿನ ಮನುವಾದಿ ಪುರೋಹಿತಶಾಹಿ ವ್ಯವಸ್ಥೆಯನ್ನು ರಕ್ಷಣೆ ಮಾಡಿಕೊಳ್ಳುವ ಪಿತೂರಿ ಭಾರೀ ಪ್ರಮಾಣದಲ್ಲಿ ನಡೆಯುತ್ತಿದೆ.

ಬಾಬಾಬುಡನ್‌ಗಿರಿಯಲ್ಲಿ ದತ್ತಮಾಲೆ ಧರಿಸುವ ಕಾರ್ಯಕ್ರಮ ಈ ವರ್ಷ ಪ್ರಾರಂಭವಾಗಿದೆ. ದತ್ತ ಜಯಂತಿ 3 ವರ್ಷದಿಂದ ನಡೆಯುತ್ತಿದೆ. ಸೂಫಿ ಭಕ್ತಿ ಪಂಥದ ಬಾಬಾಬುಡನ್‌ಗಿರಿಯ ದತ್ತ ಪಂಥ ಚಳುವಳಿ ವೈದಿಕ ಪರಂಪರೆ ವಿರುದ್ಧ ನಡೆದಿರುವ ಬಂಡಾಯ. ಅಲ್ಲಿ ಬ್ರಾಹ್ಮಣ ಪ್ರವೇಶ ಎಲ್ಲೂ ಇರಲಿಲ್ಲ. ಚರಿತ್ರೆಯನ್ನು ಪಲ್ಲಟ ಮಾಡಿ ಶೂದ್ರರಿಗೆ ಮುಸ್ಲಿಂ ದ್ವೇಷ ತುಂಬಿ ಪರಂಪರಾ ಪೂಜಾ ವಿಧಾನವನ್ನು ಬದಲಿಸಿ (ಸಂವಿಧಾನ ಬಾಹಿರವಾದ ಕೃತ್ಯ) ದತ್ತಮಾಲೆ ದತ್ತಜಯಂತಿ ಮೂಲಕ ಪುರೋಹಿತಶಾಹಿಯ ಗುಲಾಮರನ್ನಾಗಿಸಿ ಮಾಡಿಕೊಳ್ಳಲಾಗುತ್ತಿದೆ. ಒಂದು ಸಾರಿ ಗುಲಾಮರನ್ನಾಗಿ ಕಾವಿ ತೊಡಿಸಿ ಬೀದಿಗೆ ಬಿಟ್ಟರೆ ಅವರು ಶಾಶ್ವತ ಕೋಮು ಉದ್ದೇಶದ ಕ್ರಿಮಿನಲ್‌ಗಳಾಗುತ್ತಾರೆ. ಗೋದ್ರಾದಲ್ಲಿ ಸತ್ತವರ್‍ಯಾರು? ಸತ್ತವರೆಲ್ಲರೂ ಶೂದ್ರರೇ ಅಯೋಧ್ಯೆಗೆ ಹೋಗಿ ಮಸೀದಿ ಒಡೆದವರು ಶೂದ್ರರೇ, ದೇವಸ್ಥಾನ ಕಟ್ಟಿದ ಮೇಲೆ ಜೀವನ ಮಾಡುವವರು ಯಾರು?

**ಕೋಮುವಾದದ ವಿಷಪ್ರಾಸನದಿಂದ ಹೃದಯಕಠಿಣವಾಗುತ್ತೆ. ಬುದ್ಧಿ ಕುರೂಪ ಆಗುತ್ತದೆ ಅಂತಿಮವಾಗಿ ಆ ವ್ಯಕ್ತಿ ಅಪರಾಧಿ ಆಗುತ್ತಾನೆ.**

ಪ್ರಸ್ತುತ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿ.ಜೆ.ಪಿ ಸರ್ಕಾರ ಒಂದು ಫ್ಯಾಸಿಸ್ಟ್ ಸರ್ಕಾರ ಎಂದ ಅವರು ಎಲ್ಲಾ ಕ್ಷೇತ್ರಗಳನ್ನು ಕೋಮುವಾದೀ ಕರಣಗೊಳಿಸುತ್ತಿದೆ. ಅದರ ಪರಿಣಾಮವಾಗಿಯೇ ಗುಜರಾತ್ ಹತ್ಯಾಕಾಂಡ ನಡೆದಿದ್ದು. ಸಾವಿರಾರು ಸಾವುಗಳು ಮಹಿಳೆಯರ ಮೇಲಿನ ಲೆಕ್ಕವಿಲ್ಲದ ಅತ್ಯಾಚಾರ, ಕೋಟ್ಯಾಂತರ ನಾಗರೀಕರ ಆಸ್ತಿನಾಶವಾಯಿತು. ಗೋವಿನ ಚರ್ಮ ತೆಗೆದ ಕಾರಣಕ್ಕಾಗಿ ಹರ್ಯಾಣದಲ್ಲಿ ವಿಶ್ವಹಿಂದೂಪರಿಷತ್ತು, ಭಜರಂಗದಳದವರು ನಡೆಸಿದ ಐವರು ದಲಿತರ ಕಗ್ಗೊಲೆ ಕೋಮುವಾದದ ಅಪರಾಧಗಳೇ ಆಗಿವೆ ಎಂದರು.

**ಮತಾಂತರ ನಿಷೇಧ**

ಸಂಘ ಪರಿವಾರಕ್ಕೆ ಶೂದ್ರ ಜನಾಂಗ ಬೆಳಕು ನೋಡುವುದು ಬೇಕಾಗಿಲ್ಲ. ದೇವಸ್ಥಾನಕ್ಕೆ ಬರಬೇಡಿ ಅನ್ನುವವರಿಗೆ ಮಸೀದಿ ಚರ್ಚಿಗೆ ಹೋಗಬೇಡಿ ಎನ್ನಲು ಏನು ಅಧಿಕಾರ ಇದೆ. ಮತಾಂತರವನ್ನು ಬಲತ್ಕಾರದಿಂದ ಮಾಡುವುದು ಹೇಗೆ ಅಪರಾಧವೋ ಹಾಗೇ ಬಲತ್ಕಾರದಿಂದ ಮತಾಂತರ ತಡೆಯುವುದು ಅಪರಾಧ. ವಿ.ಹೆಚ್.ಪಿ- ಬಜರಂಗದಳ, ಆರ್.ಎಸ್.ಎಸ್ ನಂತಹ ಕ್ರಿಮಿನಲ್ ಸಂಘಟನೆಗಳಿಗೆ ಅರ್ಥವಾಗಬೇಕೆಂದರು.

**ಆರ್ಥಿಕ- ಸಾಮಾಜಿಕ ಅಂಶಗಳ ಹಿನ್ನೆಲೆಯಲ್ಲಿ ಅಪರಾಧ**

'ಮಾನವ ಸಂಪನ್ಮೂಲವನ್ನು ಸರಿಯಾಗಿ ಬಳಸದೇ ಇರುವುದೇ ಒಂದು ಬಹುದೊಡ್ಡ ಘೋರ ಅಪರಾಧ. ಸುಮಾರು 57 ಕೋಟಿ ದುಡಿಯುವ ಜನರಲ್ಲಿ ಸುಮಾರು 20 ಕೋಟಿಗೂ ಹೆಚ್ಚು ನಿರುದ್ಯೋಗ ಇದೆ. ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳಲ್ಲೇ 9.4ಕೋಟಿ ನೊಂದಣಿಯಾಗಿದೆ. ಇಂತಹ ದೊಡ್ಡ ಸಂಪತ್ತು ಬಳಸಲು ಒಂದು ಸ್ಪಷ್ಟವಾದ ಯುವ ನೀತಿ ಇಲ್ಲಾ. ಈ ಸಂಪನ್ಮೂಲ ಬಳಕೆ ಮಾಡಲಿಲ್ಲ ಅಂದರೆ ಪ್ರಗತಿ ಸಾಧ್ಯವೆ? ಎಂದು ಪ್ರಶ್ನಿಸಿದವರು ಖ್ಯಾತ ವಕೀಲ ಡಿ.ವೈ.ಎಫ್.ಐನ ಮಾಜಿ ರಾಜ್ಯ ಅಧ್ಯಕ್ಷ ನಾಗಮೋಹನ್‌ದಾಸರವರು.

ಸ್ವಾತಂತ್ರ್ಯ ದೊರೆತಾಗ ಪ್ರಜ್ಞಾಪೂರ್ವಕವಾಗಿಯೇ ಉದ್ಯೋಗವನ್ನು ಮೂಲಭೂತ ಹಕ್ಕನ್ನಾಗಿ ಮಾಡಲಿಲ್ಲ. 1990ರಿಂದ ಈಚೆಗೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದ ನಿರುದ್ಯೋಗ ವ್ಯಾಪಕವಾಗಿ ಹೆಚ್ಚಿವೆ. ಕರ್ನಾಟಕ ಒಂದರಲ್ಲೇ 2.5 ಲಕ್ಷ ಸಣ್ಣ ಕಾರ್ಖಾನೆ ಮುಚ್ಚಿವೆ. ಕೃಷಿ ಕ್ಷೇತ್ರದ ಗಂಭೀರ ಒಕ್ಕಟ್ಟಿನಿಂದ ಗ್ರಾಮೀಣ ನಿರುದ್ಯೋಗದಲ್ಲಿ ಹೆಚ್ಚಳ, ಖಾಲಿ ಹುದ್ದೆಗಳ ಮೇಲಿನ ನಿರ್ಭಂದದಿಂದಲೇ 1 ಲಕ್ಷಕ್ಕೂ ಹೆಚ್ಚು ಉದ್ಯೋಗಗಳು ಖಾಲಿ ಇವೆ. ಕಂಪ್ಯೂಟರೀಕರಣ, ಯಾಂತ್ರಿಕರಣ ಮಾಡುವುದರ ಮೂಲಕ, ವಿ.ಆರ್.ಎಸ್ ಯೋಜನೆ ಮುಖಾಂತರ ಉದ್ಯೋಗಗಳನ್ನು ಆಚೆಗೆ ದೂಡುತ್ತಿದ್ದರೆ ಯುವಜನರ ಮುಂದೆ ಏನು ಭವಿಷ್ಯ ಇದೆ? ಇಷ್ಟೊಂದು ದೊಡ್ಡ ಸಂಖ್ಯೆಯ ಶಕ್ತಿಯನ್ನು ರಚನಾತ್ಮಕ ದೇಶ ಕಟ್ಟುವ ಕೆಲಸಕ್ಕೆ ಬಳಸದೇ ಇದ್ದುದರಿಂದ ದೇಶ ಹಾಳು ಮಾಡುವ ಕೆಲಸಕ್ಕೆ 'ಕೆಲವರು' ಬಳಸುತ್ತಾರೆ.

ಕ್ರಿಶ್ಚಿಯನ್, ಮುಸ್ಲಿಂ, ದಲಿತರ ಮೇಲೆ ಹಲ್ಲೆಗಳು ತೀವ್ರವಾಗಿ ಹೆಚ್ಚಿವೆ. ಒಂದು ಅಂದಾಜಿನ ಪ್ರಕಾರ 14-18 ವಯಸ್ಸಿನವರು ಭಯೋತ್ಪಾದಕರ ನೇರ ಪ್ರಭಾವಕ್ಕೆ ಒಳಗಾಗಿದ್ದಾರೆ. ದೊಡ್ಡದೊಡ್ಡ ನಗರಗಳಲ್ಲಿ 'ಗ್ಯಾಂಗ್'ಗಳಾಗಿ ರೂಪಗೊಳ್ಳುತ್ತಿದ್ದಾರೆ. ನಿರುದ್ಯೋಗಕ್ಕೂ ಆತ್ಮಹತ್ಯೆ, ದರೋಡೆ, ಅತ್ಯಾಚಾರ, ಕೊಲೆ ಮಾದಕ ವಸ್ತು ಸೇವನೆ ಮುಂತಾದವುಗಳಿಗೂ ಸಂಭಂಧ ಇದೆ. ಆರ್ಥಿಕ ಸಾಮಾಜಿಕ ಅಂಶಗಳಿಗೆ ಸ್ಪಂದಿಸದೆ 'ಪೋಟಾ' ತರುವುದರಿಂದ, ಪೋಲೀಸ್ ಠಾಣೆಗಳನ್ನು ಹೆಚ್ಚು ಮಾಡುವುದರಿಂದ ಅಪರಾಧದ ಪ್ರಮಾಣ ಕಮ್ಮಿಯಾಗುವುದಿಲ್ಲ ಎಂದು ಸ್ಪಷ್ಟವಾಗಿ ನುಡಿದರು.

**ಜಾಗತೀಕರಣಕ್ಕೂ ಅಪರಾದಕ್ಕೂ ಸಂಬಂಧ ಇದೆ**

ವಿಚಾರ ಸಂಕಿರಣದ ಅದ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ರವರು, ಜಾಗತೀಕರಣ ಪ್ರಕ್ರಿಯೆ ಪ್ರಾರಂಭ ಆದ ಮೇಲೆ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರದ ಪ್ರಕರಣ ಹೆಚ್ಚಿವೆ. ಕೋಟ್ಯಾಂತರ ರೂ.ಗಳ ಷೇರು ಹಗರಣಗಳು, ತೆಹಲ್ಕಾ ಟೆಲಿಕಾಂ ಯೂರಿಯಾ ಬೋಫೋರ್ಸ್ ಹಗರಣಗಳು, ಯು.ಟಿ.ಐ ಬಾಲ್ಕೊಗಳು, ಮಾನವನ ಮೇಲೆ ನಡೆಯುತ್ತಿರುವ ಭಯಂಕರ ಬಾಂಬ್ ದಾಳಿಗಳು, ಸಾಮ್ರಾಜ್ಯಶಾಹಿ ಜಗತನ್ನು ದೋಚಲು ಮಾಡುತ್ತಿರುವ ನಾಗರೀಕ ಹಕ್ಕುಗಳ ಉಲ್ಲಂಘನೆಯ ಅಪರಾಧಗಳು ಇವೆಲ್ಲವೂ ಜಾಗತೀಕರಣದಿಂದ ಹೆಚ್ಚಿವೆ. ಕೋಮುವಾದ ಮತ್ತು ಜಾಗತೀಕರಣದ ವಿರುದ್ಧದ ಹೋರಾಟದಲ್ಲೆ ಯುವಜನರ ಭವಿಷ್ಯದ ಹೊಂಗನಸುಗಳು ಅರಳುತ್ತದೆ. ಹಾಗಾಗಿ ಈ ನೀತಿಗಳ ವಿರುದ್ಧ ದೊಡ್ಡ ಆಂದೋಲನಗಳನ್ನೇ ನಡೆಸಲು ಅವರು ಕರೆ ನೀಡಿದರು.

ಸ್ವಾಗತವನ್ನು ಡಿ.ವೈ.ಎಫ್.ಐ ಬೆಂಗಳೂರು ಜಿಲ್ಲಾ ಶ್ರೀನಿವಾಸ ನೆರವೇರಿಸಿದರೆ, ಜಿಲ್ಲಾ ಅಧ್ಯಕ್ಷ ಲಕ್ಷ್ಮಣಕುಮಾರ್ ವಂದಿಸಿದರು.

ವಿಚಾರ ಸಂಕಿರಣದಲ್ಲಿ ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಉಪಸ್ಥಿತರಿದ್ದರು. ಉದ್ಘಾಟನೆ ಮಾಡಬೇಕಾಗಿದ್ದ ಬಂಧಿಖಾನೆ ಪೋಲೀಸ್ ಮಹಾ ನಿರ್ದೇಶಕ ಹೆಚ್.ಟಿ ಸಾಂಗ್ಲಿಯಾನರವರು ಕಾರ್ಯಕ್ರಮಕ್ಕೆ ಸಂದೇಶ ಕಳಿಸಿದ್ದರು.

ಅಪರಾಧಿ ಕೃತ್ಯಗಳಲ್ಲಿ ಯುವಜನರ ಪಾತ್ರ ಹೆಚ್ಚುತ್ತಿರುವುದಕ್ಕೆ ದಿಗ್ಭ್ರಮೆ ವ್ಯಕ್ತಪಡಿಸಿರುವ ಅವರು ಯುವಜನರನ್ನು ಜಾಗೃತಿಗೊಳಿಸುವ ಇಂತಹ ಕಾರ್ಯಕ್ರಮಗಳು ಶ್ಲಾಘನೀಯ ಎಂದು ತಿಳಿಸಿದ್ದಾರೆ.

ವರದಿ: **ಟಿ.ಯಶವಂತ**



**DYFI**
**7ನೇ ರಾಜ್ಯ ಸಮ್ಮೇಳನದ ಅಂಗವಾಗಿ ಬೆಂಗಳೂರಿನಲ್ಲಿ 'ಅಪರಾಧೀಕರಣ ಮತ್ತು ಯುವಜನ' ವಿಚಾರಸಂಕಿರಣ**




---

ಕೋಮುವಾದದ ವಿಷ ಪ್ರಾಶನದಿಂದ ಹೃದಯ ಕಠಿಣವಾಗುತ್ತೇ. ಬುದ್ಧಿ ಕುರೂಪ ಆಗುತ್ತದೆ. ಅಂತಿಮವಾಗಿ ಆ ವ್ಯಕ್ತಿ ಅಪರಾಧಿಯಾಗುತ್ತಾನೆ.

★★★

ಸಂಘ ಪರಿವಾರಕ್ಕೆ ಶೂದ್ರ ಜನಾಂಗ ಬೆಳಕು ನೋಡುವುದು ಬೇಕಾಗಿಲ್ಲ. ದೇವಸ್ಥಾನಕ್ಕೆ ಬರಬೇಡಿ ಅನ್ನುವವರಿಗೆ ಮಸೀದಿ, ಚರ್ಚ್‌ಗೆ ಹೋಗಬೇಡಿ ಎನ್ನಲು ಏನು ಅಧಿಕಾರವಿದೆ?

**- ಎ.ಕೆ.ಸುಬ್ಬಯ್ಯ,**
ಖ್ಯಾತ ವಕೀಲರು, ಮಾಜಿ ಶಾಸಕರು

★★★

ಆರ್ಥಿಕ, ಸಾಮಾಜಿಕ ಅಂಶಗಳಿಗೆ ಮೂಲಭೂತವಾಗಿ ಸ್ಪಂದಿದೇ POTA(ಪೋಟಾ)ತರುವುದರಿಂದ, ಪೋಲೀಸ್ ಠಾಣೆಗಳನ್ನು ಹೆಚ್ಚಿಸುವುದರಿಂದ ಅಪರಾಧದ ಪ್ರಮಾಣ ಕಡಿಮೆಯಾಗುವುದಿಲ್ಲ.

**- ಹೆಚ್.ಎನ್.ನಾಗಮೋಹನ ದಾಸ್**
DYFI ಮಾಜಿ ಅಧ್ಯಕ್ಷರು

★★★

ಕೋಮುವಾದ, ಜಾಗತೀಕರಣದ ವಿರುದ್ಧದ ಹೋರಾಟದಲ್ಲೇ ಯುವಜನರ ಭವಿಷ್ಯದ ಹೋರಾಟದ ಹೊಂಗನಸು ಅರಳುತ್ತದೆ.

**- ಜಿ.ಎನ್.ನಾಗರಾಜ್**
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

★★★

ಅಪರಾಧಿ ಕೃತ್ಯಗಳಲ್ಲಿ ಯುವಜನರ ಪಾಲು ಹೆಚ್ಚುತ್ತಿರುವುದು ದಿಗ್ಭ್ರಮೆ, ಆತಂಕದ ಸಂಗತಿ. ಯುವಜನರನ್ನು ಜಾಗೃತಗೊಳಿಸುವ ಇಂತಹ ಕಾರ್ಯಗಳು ಶ್ಲಾಘನೀಯ.

**- ಹೆಚ್.ಟಿ.ಸಾಂಗ್ಲಿಯಾನ, IPS**
ಡಿ.ಜಿ. ಕಾರಾಗೃಹ

# ಹಿಂದುತ್ವ ಅಜೆಂಡಾ ಮತ್ತು ದಲಿತರ ಕಗ್ಗೊಲೆ

## ವಿಹೆಚ್‌ಪಿ ಅಟ್ಟಹಾಸ

**ಹಿಂದುಗಳೆಲ್ಲಾ ಒಂದೇ ಎಂದು ಬೊಗಳೆ ಹೊಡೆಯುವ ಆರ್‌ಎಸ್‌ಎಸ್ ಪರಿವಾರ ದಲಿತರನ್ನು ಮನುಷ್ಯರೆಂದು ಪರಿಗಣಿಸಿಯೇ ಇಲ್ಲ. ವರ್ಣಾಶ್ರಮ ಬೇಧವನ್ನು ಇಂದಿಗೂ ಎತ್ತಿಹಿಡಿದಿರುವ ಈ ದುಷ್ಟರು ಗೋವು ಪವಿತ್ರವೆಂದೂ, ಗೋಹತ್ಯೆ ವಿರೋಧಿಸಿದ್ದೇವೆಂಬ ರಕ್ಷಾಕವಚದಲ್ಲಿ ದಲಿತ ದ್ವೇಷಿ ಕ್ರೌರ್ಯವನ್ನು ಮುಚ್ಚಿಡಲು ಬಯಸುತ್ತಿದ್ದಾರೆ. ಹರ್ಯಾಣದಲ್ಲಿನ ದಲಿತರ ಭೀಕರ ಕಗ್ಗೊಲೆ ಕುರಿತು ವಿವರ ವರದಿ ಇಲ್ಲಿದೆ.....**

ಗೋಪಾಲಕೃಷ್ಣ ಅರಳಹಳ್ಳಿ

ಬಡವರು ಸತ್ತರೆ
ಸುಡಲಿಕ್ಕೆ ಸೌದಿಲ್ಲೋ
ಒಡಲ ಬೆಂಕಿಲಿ ಹೆಣ ಬೆಂದೊ
ಶಿವನೇ ಬಡವಂಗೆ ಸಾವ ಕೊಡಬ್ಯಾಡೊ

ಈ ಜನಪದ ಸಾಲುಗಳೇ ಸಾರುವಂತೆ ದಲಿತರ ಸ್ಥಿತಿಯನ್ನು ಬಿಂಬಿಸುತ್ತದೆ. ದಲಿತರ ಮೇಲಿನ ದಬ್ಬಾಳಿಕೆ ಎಷ್ಟೊಂದು ಭೀಕರವಾಗಿ ಶತಶತಮಾನಗಳಿಂದ ನಡೆಯುತ್ತಲೇ ಇದೆ ಎಂಬುದನ್ನು ಕಾಣಬಹುದು.

ಜಾತಿಪದ್ಧತಿ ಭಾರತದ ಎಲ್ಲಾ ಹಳ್ಳಿಗಾಡಿನಲ್ಲೂ ಜೀವಂತವಾಗಿದ್ದು ಇದಕ್ಕೆ ಹರಿಯಾಣದ ಝುಜರ್ ಜಿಲ್ಲೆಯಲ್ಲಿ ನಡೆದಿರುವ ದಲಿತ ಕಗ್ಗೊಲೆ ಸಾಕ್ಷಿಯಾಗಿದೆ. ಸತ್ತ ದನದ ಚರ್ಮ ಸುಲಿದು ಕಾಯಕ ನಡೆಸಿ ಜೀವನ ನಡೆಸುವುದನ್ನು ಸಹಿಸದ ಹಿಂದೂ ಮತಾಂಧರು, ವಿ.ಹೆಚ್.ಪಿ ಗೂಂಡಾಗಳು ದಲಿತರನ್ನು ಕಲ್ಲಿನಿಂದ ಹೊಡೆದು, ಚಚ್ಚಿ ಕೊಲೆ ಮಾಡಿದ್ದಾರೆ. ಜಾತಿಪದ್ಧತಿಯನ್ನು ಬಲವಾಗಿ ಪೋಷಿಸಿಕೊಂಡು ಬಂದ ಹಿಂದೂ ಮನುವಾದಿಗಳು ವರ್ಣಾಶ್ರಮ ಪದ್ಧತಿಯನ್ನು ಪ್ರತಿಪಾದಿಸುತ್ತಾ ಮೇಲು-ಕೀಳು, ಉಳ್ಳವರು - ಇಲ್ಲದವರು, ಬಡವ-ಶ್ರೀಮಂತ ಎಂಬ ತಾರತಮ್ಯ ನೀತಿಯಿಂದ ದಲಿತರನ್ನು ಶೋಷಿಸುತ್ತಲೇ ಬಂದಿದ್ದಾರೆ. ಸ್ವಾತಂತ್ರ್ಯ ಭಾರತದಲ್ಲಿ ಬಂಡವಾಳಶಾಹಿ - ಭೂಮಾಲಿಕರು ಇದಕ್ಕೆ ಮತ್ತಷ್ಟು ನೀರೆರೆದು ಕೋಮುವಾದಿದಳ್ಳುರಿ ಭುಗಿಲೇಳಿಸಲು ಪ್ರಯತ್ನಿಸುತ್ತಿದ್ದಾರೆ.

ಹಿಂದು ನಾವೆಲ್ಲ ಒಂದು ಎಂದು ಹೇಳುವ ಹಿಂದೂ ಕೋಮುವಾದಿಗಳು ದಲಿತರನ್ನು ಊರ ಹೊರಗಿಟ್ಟು, ಹೋಟೆಲ್, ದೇವಸ್ಥಾನ, ನೀರು ಮುಟ್ಟದಂತೆ ನಿಷೇಧಿಸಿ ಈ ದೇಶದ ದಲಿತರನ್ನು ಪ್ರಾಣಿಗಿಂತಲೂ ಕೀಳಾಗಿ ಕಂಡು ಅನಾಗರೀಕವಾಗಿ ವರ್ತಿಸುತ್ತಿರುವುದು ಕಟುಸತ್ಯವಾಗಿದೆ.

### ಹರಿಯಾಣದಲ್ಲಿ ನಡೆದಿದೇನು?

ಹರಿಯಾಣದಲ್ಲಿ ವಿಶ್ವ ಹಿಂದೂ ಪರಿಷತ್ ಗೂಂಡಾಗಳು ನಡೆಸುವ ಹತ್ಯಾಕಾಂಡ ದೇಶದ ನಾಗರೀಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ.

ಹರಿಯಾಣದ **ಝುಜರ್** ಜಿಲ್ಲೆಯ **ದುಲಿನಾ** ಗ್ರಾಮ ದುಲಿನಾ ಪೋಲೀಸ್ ಠಾಣೆ ಎದುರು ಹಸುವಿನ ಚರ್ಮ ವ್ಯಾಪಾರದಲ್ಲಿ ತೊಡಗಿದ್ದ ದಯಾಚಂದ್, ವೀರೇಂದ್ರ, ಟೋಟರಾಮ್, ರಾಜು ಮತ್ತು ಕೈಲಾಸ್ ಈ ಐದು ಮಂದಿ ದಲಿತರನ್ನು ರಾತ್ರಿ 9-10 ಗಂಟೆಯಲ್ಲಿ ಅಕ್ಟೋಬರ್ 15ರಂದು ವಿಶ್ವ ಹಿಂದೂ ಪರಿಷತ್ ಗೂಂಡಾಗಳು ಭೀಕರವಾಗಿ ಕಲ್ಲಿನಿಂದ ಹೊಡೆದು, ಚಚ್ಚಿ ಕೊಲೆ ಮಾಡಿದ್ದಾರೆ.

### ಸಿ.ಪಿ.ಐ(ಎಂ) - ಸಿ.ಪಿ.ಐ ನಿಯೋಗ ಸ್ಥಳಕ್ಕೆ ಭೇಟಿ

ಹರಿಯಾಣದಲ್ಲಿ ನಡೆದ ಈ ಹತ್ಯಾಕಾಂಡ ತಿಳಿದ ಸಿಪಿಐ(ಎಂ) ಮತ್ತು ಸಿ.ಪಿ.ಐ ಜಂಟಿ ನಿಯೋಗ ಸ್ಥಳಕ್ಕೆ ಭೇಟಿ ನೀಡಿ ಈ ಘೋರ ಕೃತ್ಯವನ್ನು ಖಂಡಿಸಿ ಅಪರಾದಿಗಳನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದೆ. ಈ ಘಟನೆ ಬಗ್ಗೆ ಬೇರೆ ಯಾವುದೇ ರಾಜಕೀಯ ಪಕ್ಷ ಧ್ವನಿ ಎತ್ತದೆ ಇರುವುದು ಆಶ್ಚರ್ಯವಾಗಿದೆ.

ಈ ನಿಯೋಗ ಪೋಲೀಸ್ ಅಧಿಕಾರಿಗಳನ್ನು ಕಂಡು ಮಾತನಾಡಿದರು. ನಂತರ ಈ ನಿಯೋಗವು ಹತ್ಯೆಗೊಳಗಾದ ದಯಚಂದ್ ಮತ್ತು ವೀರೇಂದ್ರ ಈ ಇಬ್ಬರ ಮನೆಗೆ ಹೋಗಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಬದಾಶಪುರ್ ಗ್ರಾಮದ ಜನರ ಸಭೆಯನ್ನು ನಡೆಸಲಾಯಿತು.

### ಘಟನೆ ನಡೆದಿದ್ದು ಹೇಗೆ?

### ಪೋಲೀಸರ ಹೇಳಿಕೆ

ಪೋಲೀಸರ ಪ್ರಕಾರ ಅಕ್ಟೋಬರ್ 15ರಂದು ಹಸುವಿನ ಚರ್ಮದ ವ್ಯಾಪಾರಿ ಕೈಲಾಸ್ ಎಂಬ ದಲಿತ, ಬದಾಶಪುರದ ಅದಿಕೃತ ಲೈಸನ್ಸ್‌ದಾರ ದೇವೇಂದ್ರ ಬಳಿ ಚರ್ಮ ತೆಗೆದುಕೊಳ್ಳುತ್ತಿದ್ದ. ಮೊದಲು ಸ್ವಲ್ಪ ಹಣವನ್ನು ಅಡ್ವಾನ್ಸಾಗಿ ಕೊಟ್ಟು ನಂತರ ಚರ್ಮ ಪಡೆಯುವಾಗ ಪೂರ್ತಿ ಹಣ ಕೊಡುವುದು ವಾಡಿಕೆ. ಅದರಂತೆ ದೇವೇಂದ್ರ ಅವನ ತಮ್ಮ ಸಹೋದರ ವಿರೇಂದ್ರ ಅವನ ಸಂಬಂಧಿ ದಯಚಂದ್ ವಾಹನ ಗೊತ್ತುಪಡಿಸಿಕೊಂಡು ಕರ್ನಲ್ ಹತ್ತಿರ ಹೋಗಿ ಚರ್ಮ ತೆಗೆದುಕೊಂಡು ಕೈಲಾಸ್‌ಗೆ ಕೊಟ್ಟು ಬಾಕಿ ಹಣ ಪಡೆಯವುದಿತ್ತು. ಡ್ರೈವರ್ ಟೋಟಾರಾಮ್, ಕಂಡಕ್ಟರ್ ರಾಜು ವಾಹನ ಸಹಿತ ಬೆಳಿಗ್ಗೆ 11 ಗಂಟೆಗೆ ಹೊರಟು ಮೊದಲು ಕಂತಿನ ಚರ್ಮ ಪಡೆಯಬೇಕಾಗಿದ್ದ **ಪರೋಕ್** ನಗರದಲ್ಲಿ ನಿಂತು ಅಲ್ಲಿ ಚರ್ಮ ತೆಗೆದುಕೊಂಡು ಹೊರಟು ದುಲಿನಾ ಚೌಕಿ (ಪೋಲಿಸ್ ಚೌಕಿ)ಯತ್ತ ದಾವಿಸಿದರು. ಈ ಸ್ಥಳದಲ್ಲಿ ಕೊಲೆ ನಡೆದಿರುವುದು.

ಪೋಲೀಸರ ಪ್ರಕಾರವೇ **ಪರೂಕ್** ನಗರದಿಂದ ಸತ್ತ ದನದ ಚರ್ಮ ತೆಗೆದುಕೊಂಡು ಬರುವಾಗ ದುಲಿನ ಚೌಕಿಯ ಬಳಿ ವಾಹನ ನಿಲ್ಲಿಸಿ ಈ ದಲಿತರು ಈ ಮುಖ್ಯ ರಸ್ತೆಯಲ್ಲೇ ಚರ್ಮ ಸುಲಿದರು. ಇದನ್ನು ಗಮನಿಸಿದ ಒಂದು ಗುಂಪಿನ ಜನ ಪಕ್ಕದ ಹಳ್ಳಿಯಿಂದ ಬಂದವರು ಇದನ್ನು ವೀಕ್ಷಿಸಿದರು. ವಾಹನ ತಡೆದು ಸಿಕ್ಕಪಟ್ಟೆ ಹೊಡೆದು ಎದುರುಗಡೆ ಇದ್ದ ಪೋಲೀಸ್ ಚೌಕಿಯ ಪೋಲೀಸ್‌ಗೆ ಒಪ್ಪಿಸಿದರು. ಆಗ ಸಂಜೆ 5ರಿಂದ 5-30 ಆಗಿತ್ತು. ಸುದ್ದಿ ತಿಳಿದ ತಕ್ಷಣ 5-6 ಪೋಲೀಸರು ಸ್ಥಳಕ್ಕೆ ದಾವಿಸಿದರು. ಹಸುವಿನ ಚರ್ಮ ಸುಲಿದ ಸುದ್ದಿ ಹರಡಿತು. ದಸರಾ ಹಬ್ಬ ಮುಗಿಸಿ ಬರುತ್ತಿದ್ದ ಜನರ ಗುಂಪು (ಅದರಲ್ಲಿ ಕೆಲವರು ಕುಡಿದಿದ್ದರು) ತಕ್ಷಣ ರಸ್ತೆ ತಡೆಯೊಡ್ಡಿ ಪೋಲೀಸರ ಸಮ್ಮುಖದಲ್ಲೇ ಹೊಡೆದು ಸಾಯಿಸಿದರು.

ಈ ಸಂದರ್ಭದಲ್ಲಿ 4 ರಿಂದ 5 ಸಾವಿರ ಜನ ಸೇರಿದರು. ಈ ಘಟನೆ ನಡೆದ ಸ್ಥಳಕ್ಕೆ 3 ಜನ ಉಪ ವಿಭಾಗದ ನ್ಯಾಯಾದೀಶರು ಡೆಪ್ಯೂಟಿ ಪೋಲೀಸ್ ಸೂಪರಿಂಟೆಂಡೆಂಟ್ ಹಿರಿಯ ಪೋಲೀಸ್ ಅಧಿಕಾರಿಗಳು ಜೊತೆಗೆ 60-70 ಪೋಲೀಸರು ದಾವಿಸಿದರು. ತಕ್ಷಣ ಈ ಘಟನೆ ನಡೆದ ಸ್ಥಳದಲ್ಲೇ ಪ್ರತ್ಯಕ್ಷದರ್ಶಿಗಳನ್ನು ಸೇರಿದಂತೆ ಪೋಲೀಸ್ ಅಧಿಕಾರಿಗಳ ವಿಚಾರಣೆ ಸಮಿತಿ ರಚಿಸಿತು. ಈ ಸಂದರ್ಭದಲ್ಲಿ ಯಾರನ್ನು ಬಂದಿಸಲಿಲ್ಲ ಯಾವುದೇ ಲಿಖಿತ ವರದಿಯನ್ನು (ಎಫ್.ಐ.ಆರ್) ಮಾಡಲಿಲ್ಲ.

### ಜಂಟಿ ನಿಯೋಗಕ್ಕೆ ದೊರಕಿದ ಮಾಹಿತಿ ಪ್ರಕಾರ

1) ಹತ್ಯೆಗೊಳಗಾದ ಕುಟುಂಬದವರು ಹೇಳಿಕೆ ಪ್ರಕಾರ ಈ ಘಟನೆ ಮುಂದೆ ಪೋಲೀಸು ಈ ಚರ್ಮ ಸುಲಿವ ದಲಿತರಿಂದ ಲಂಚ ಕೇಳಿದ್ದರು. ಲಂಚ ಕೊಡದಿದ್ದಾಗ ಪ್ರಾಣಿಹತ್ಯೆ ಕಾನೂನಿನ ಪ್ರಕಾರ ಬಂಧಿಸಿ ಹೊಡೆದಿದ್ದರೆಂದು ತಿಳಿದುಬಂದಿದೆ. ರಾಜ್ಯದಲ್ಲಿ ಸದ್ಯ ಈ ಕಾನೂನು ಜಾರಿಯಲ್ಲಿದೆ. ಇದರಿಂದ ಪೋಲೀಸ್ ಹೇಳಿಕೆಯಲ್ಲಿ ಸತ್ಯಾಂಶವಿಲ್ಲವೆಂಬುದು ಎದ್ದು ಕಾಣುತ್ತದೆ.

2) ಈ ಘಟನೆಯಲ್ಲಿ ಸತ್ಯವಲ್ಲದ ಹಲವಾರು ಅಂಶಗಳು ಹೊರಬರುತ್ತದೆ. ಚರ್ಮ ಮಾರಾಟ ಮಾಡಿ ಕೈಲಸ್‌ನಿಂದ 40 ಸಾವಿರ ಬಾಕಿ ಹಣ ಪಡೆಯಬೇಕಾಗಿದ್ದ ಈ ದಲಿತ ಚರ್ಮ ಸುಲಿಯುವವರು ಕೇವಲ 200 ರೂಗಳಿಗೆ ಸತ್ತದನ ಖರೀದಿಸಿ, ಮುಖ್ಯರಸ್ತೆಯಲ್ಲೇ ಚರ್ಮ ಸುಲಿಯುವ ಅಗತ್ಯವೇನಿತ್ತು ಎನ್ನುವ ಅಂಶ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಅದು ಮುಖ್ಯರಸ್ತೆಯಲ್ಲಿ ಚರ್ಮ ಸುಲಿಯುವ ಧೈರ್ಯ ಬರಲು ಸಾಧ್ಯವೇ? ಹಾಗಿದ್ದರೆ ಚರ್ಮ ಸುಲಿಯುವಾಗ ಉಪಯೋಗಿಸಿದ ಕತ್ತಿ, ಮತ್ತಿತರ ಸಲಕರಣೆಯನ್ನು ಪೋಲೀಸರು ಏಕೆ ವಶಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ಪ್ರಶ್ನೆಗಳನ್ನು ಕೆದಕಿ ನೋಡಬೇಕಾಗಿದೆ.


ದಲಿತರ ಕಗ್ಗೊಲೆ ಖಂಡಿಸಿ ಬೆಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ

3) ಚೌಕಿ ಹತ್ತಿರ ವಾಹನ ಚರ್ಮಗಳಿಂದ ತುಂಬಿದ್ದು ಓಡಾಡುತ್ತಿದ್ದವರ ಗಮನ ಸೆಳೆದಿರಬಹುದು. ಆದೇ ವಿಶ್ವ ಹಿಂದೂ ಪರಿಷತ್ ಮತ್ತು ಸಂಘ ಪರಿವಾರದವರು ಈ ಗಾಳಿ ಸುದ್ದಿಯನ್ನು ಹಬ್ಬಿಸಿದ್ದಾರೆ. ಕಾರಣ ಈ ಹಿಂದೆ ದಾರಸಿಂಗ್ ಎಂಬ ಒರಿಸ್ಸಾದ ವ್ಯಕ್ತಿ "ಗೋವು ಸಂರಕ್ಷಣದ" ಬಗ್ಗೆ ಪ್ರಚಾರ ನಡೆಸಿದ್ದ. ಈ ಸಂದರ್ಭದಲ್ಲಿ ಮುಸ್ಲಿಂ ವಿರುದ್ಧವೂ ಪ್ರಚಾರ ನಡೆದಿತ್ತು. ಈ ಎಲ್ಲಾ ಹಿನ್ನೆಲೆಯಲ್ಲಿ ವಿಶ್ವ ಹಿಂದೂ ಪರಿಷತ್ ಈ ಘಟನೆಯನ್ನು ನೆಪ ಮಾಡಿಕೊಂಡು ಜನರನ್ನು ಉದ್ರೇಕಗೊಳಿಸಿ ವಿಶ್ವ ಹಿಂದು ಪರಿಷತ್ ಸದಸ್ಯನನ್ನು ಚೌಕಿಯತ್ತ ಕಳೆಹಾಕಿ ಗಲಭೆ ಎಬ್ಬಿಸಿರುವುದು ಕಾಣುತ್ತದೆ. ಇದೇ ಸಂದರ್ಭದಲ್ಲಿ ದುಲಿನಾಪೋಲಿಸ್ ಹಾಗೆ ಮುಸ್ಲಿಂ ಪೋಲೀಸ್ ಅಧಿಕಾರಿಯ ನಾಮಫಲಕವನ್ನು ಹಾಳು ಮಾಡಿದ್ದಾರೆ.

ವಿ.ಹೆಚ್.ಪಿ. ಸದಸ್ಯರು ಹಸುವನ್ನು ಕೊಂದವರ ಹೆಸರನ್ನು ಬಹಿರಂಗ ಪಡಿಸಬಾರದೆಂದು ಪೋಲೀಸರಿಗೆ ಬೆದರಿಕೆ ಹಾಕಿದ್ದರು. ಇದೇ ಸಂದರ್ಭದಲ್ಲಿ ದೆಹಲಿಯಿಂದ ಶಂಕರಚಾರ್ಯ ಎಂಬುವರು ಫೋನ್ ಮೂಲಕ ಪೋಲಿಸ್ ಅಧಿಕಾರಿಗೆ ಬೆದರಿಕೆ ಹಾಕಿ ತಾಕೀತು ಮಾಡಿದರು. ಮಾರನೆ ದಿನ ವಿ.ಹೆಚ್.ಪಿ ಸದಸ್ಯರು ಝುಜರ್‌ನಲ್ಲಿ ಮೆರವಣಿಗೆ ನಡೆಸಿ ಅಪರಾಧಿಗಳನ್ನು ಬಂಧಿಸಬಾರದೆಂದು ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೆಂದರೆ ಮೆಹಾವಾಟ್ ಎಂಬಲ್ಲಿ ಎರಡು ಹಳ್ಳಿಗಳಲ್ಲಿ ವಾಸವಾಗಿರುವ 33 ದಲಿತ ಕುಟುಂಬಗಳು ಇತ್ತೀಚೆಗೆ ಇಸ್ಲಾಂ ಮತಕ್ಕೆ ಮತಾಂತರ ಹೊಂದಿದ್ದರು. ಇವರಿಗೂ ಮತ್ತು ಹತ್ಯೆಗೊಳಗಾದ ದಲಿತರಿಗೂ ಸಂಬಂಧವಿತ್ತೆ ಎಂಬ ತನಿಖೆಯಾಗಬೇಕು. ಆಗ ಸತ್ಯಾಂಶ ಹೊರಬರುತ್ತದೆ.

4) ಠಾಣೆಯ ಹತ್ತಿರ ಗುಂಪು ಸೇರಿದ ಜನಗಳ ಬಗ್ಗೆ ಮಾಹಿತಿ ಸಂಗ್ರಹಿಸಬೇಕಾಗಿದೆ. ಪೋಲೀಸ್‌ನವರೇ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಈ ಜನರನ್ನು ಸೇರಿಸಿದ್ದಾರೆ ಎಂಬ ಅನುಮಾನ ಗೋಚರಗೊಳ್ಳುತ್ತದೆ. ಪೋಲೀಸ್ ಚೌಕಿ ತುಂಬಾ ಚಿಕ್ಕದಾಗಿದ್ದರಿಂದ ಹೆಚ್ಚಿನ ಜನ ಸೇರಿರುವುದನ್ನು ತಡೆಯಲು ಕಡಿಮೆ ಸಂಖ್ಯೆಯಲ್ಲಿದ್ದ ಪೋಲೀಸರಿಗೆ ಸಾಧ್ಯವಾಗಲಿಲ್ಲ ಏಕೆ? 4 ಗಂಟೆಗಳ ಕಾಲ ನಡೆದ ಈ ಘಟನೆಯನ್ನು ತಡೆದುಕೊಂಡು ದಲಿತರನ್ನು ಹೊರಗೆ ಬಿಡದೆ ಘರ್ಷಣೆ ದೊಡ್ಡದಾಗಲು ಏಕೆ ಅವಕಾಶ ಮಾಡಿಕೊಟ್ಟರು.

5) ಈ ಘಟನೆಯನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸದೆ ಇರುವುದು ಬಹಳ ಆಘಾತಕಾರಿ ವಿಷಯವಾಗಿದೆ. ಈ ಸ್ಥಳಕ್ಕೆ ಯಾವುದೇ ಒಬ್ಬ ಮಂತ್ರಿಗಳು ಭೇಟಿ ನೀಡಿರುವುದಿಲ್ಲ. ಸಂತ್ರಸ್ತರಿಗೆ ಸಾಂತ್ವನ ಹೇಳುವ ಸೌಜನ್ಯವನ್ನು ತೋರಿಸಿಲ್ಲ.

6) ಪೋಲೀಸರ ಮುಖ್ಯ ಉದ್ದೇಶವೆಂದರೆ ಈ ಘಟನೆಯ ಬಗ್ಗೆ ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆ ಹದಗೆಡಬಹುದು ಎಂದು ಶಂಕಿಸಿ ಈ ಘಟನೆ ಬಗ್ಗೆ ಬಿಗಿ ನಿಲುವು ತೆಗೆದುಕೊಂಡಿಲ್ಲವೆಂದು ಭಾವಿಸಬೇಕಾಗುತ್ತದೆ. ಕೊಲೆ ಮಾಡಿದ ಅಪರಾಧಿಗಳನ್ನು ರಕ್ಷಿಸಿ ಕೋಮುವಾದಿಗಳ ಮುಂದೆ ತಲೆತಗ್ಗಿಸುವಂತೆ ಮಾಡುವುದೇ ಸರ್ಕಾರದ ಉದ್ದೇಶವಾಗಿದೆ.

ಕಾನೂನಿನ ಪ್ರಕಾರ ಕ್ರಮ ಜರುಗಿಸದೆ ಅಪರಾಧಿಗಳನ್ನು ಶಿಕ್ಷೆಯಿಂದ ಮುಕ್ತಗೊಳಿಸಿ ನೊಂದ ಜನಕ್ಕೆ ನ್ಯಾಯ ಒದಗಿಸಿಲ್ಲವೆಂದು ನಿಯೋಗ ಅಭಿಪ್ರಾಯಪಟ್ಟಿರುತ್ತದೆ.

### ಸಮಗ್ರ ತನಿಖೆಯಿಂದ ಸತ್ಯ ಹೊರಬರುತ್ತದೆ!

ಈ ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ ಆಪಾದಿಕರನ್ನು ತಕ್ಷಣ ಬಂದಿಸಿ ಶಿಕ್ಷಿಸಬೇಕು. ಈ ಘಟನೆಯನ್ನು ಸಿ.ಬಿ.ಐ.ನಿಂದ ತನಿಖೆಗೆ ಒಳಪಡಿಸಬೇಕು. ಈ ಘಟನೆಯ ಹಿನ್ನೆಲೆಯಲ್ಲಿ ವಿ.ಹೆಚ್.ಪಿ ಮತ್ತು ಕೋಮು ಸಂಘಟನೆಗಳು ನಡೆಸಿರುವ ರಾಷ್ಟ್ರ ವಿರೋಧಿ ಚಟುವಟಿಕೆ ಗಮನಿಸಿ

ಪುಟ 8 ಕ್ಕೆ

**ಜಮ್ಮು-ಕಾಶ್ಮೀರದಲ್ಲೀಗ ಹೊಸ ಸರ್ಕಾರ ಕೊನೆಗೂ ರಚನೆಯಾಗಿದೆ. ಪಿಡಿಪಿ-ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಯು ಈ ಸರ್ಕಾರ ಜನರ ಆಶೋತ್ತರಗಳನ್ನು ಗಮನದಲ್ಲಿರಿಸಿ 'ಕನಿಷ್ಟ ಸಾಮಾನ್ಯ ಕಾರ್ಯಕ್ರಮ' ವನ್ನು ಅಂಗೀಕರಿಸಿದೆ. ಇದರ ಸತ್ವ-ದೌರ್ಬಲ್ಯಗಳನ್ನು ಕಾಮ್ರೇಡ್ ಸುರ್ಜಿತ್ ಇಲ್ಲಿ ವಿಶ್ಲೇಷಿಸಿದ್ದಾರೆ.**

ಜಮ್ಮು ಮತ್ತು ಕಾಶ್ಮೀರ

# ಸಮಾನ ಕನಿಷ್ಟ ಕಾರ್ಯಕ್ರಮ ನೂತನ ಆರಂಭದ ಸಂಕೇತ

**ಹರಕಿಶನ್ ಸಿಂಗ್ ಸುರ್ಜಿತ್**

ಪಿ.ಡಿ.ಪಿ. ಮುಖ್ಯಸ್ಥ ಮುಫ್ತಿ ಮಹಮದ್ ಸಯ್ಯದ್ ನೇತೃತ್ವದ ಕಾಂಗ್ರೆಸ್ ಮತ್ತು ಪಿ.ಡಿ.ಪಿ. ಪಕ್ಷಗಳ ಸಮ್ಮಿಶ್ರ ಸರ್ಕಾರ ಶ್ರೀನಗರದಲ್ಲಿ ಅಧಿಕಾರ ಸ್ವೀಕರಿಸಿದೆ. ವಿವಿಧ ಪಕ್ಷಗಳ ನಡುವೆ ದೀರ್ಘ ಸಮಯದ ತೀವ್ರ ಸಂಧಾನದ ನಂತರ ಈ ಸರ್ಕಾರ ರಚನೆಯಾಗಿದೆ. ಅತೀವ ಸಂಕಟಗಳ ಅನುಭವದ ನಡುವೆ ಉತ್ತಮ ಆಶಯಗಳೊತ್ತ ತೀರ್ಮಾನದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಜನತೆ ನೀಡಿದ ಅಭಿಮತದ ಸರ್ಕಾರವಿದು. ಭಾರತದ ಪ್ರಜಾಸತ್ತೆಗೆ ಜನತೆ ಪಾತ್ರ ಒತ್ತಾಸೆಯಾಗಿ ನಿಂತಿದೆ. ಇಂತಹ ನಿರ್ಣಾಯಕ ಪಾತ್ರವಹಿಸಿದ ಜನತೆ ಅಭಿನಂದನಾರ್ಹರು.

**ಚುನಾವಣೆಗಳ ಮಹತ್ವ**

ಜಮ್ಮು- ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಸಾರುವ ಜನಮತವನ್ನು ನೀಡುವ ಮೂಲಕ ಪಾಕಿಸ್ತಾನೀ ಮತ್ತು ಸಾಮ್ರಾಜ್ಯಶಾಹಿ ಪ್ರಚಾರವನ್ನು ಈ ಚುನಾವಣೆ ಸುಳ್ಳಾಗಿರಿಸಿರುವುದು ಒಂದು ಮಹತ್ವದ ಅಂಶ. ಮತ ಚಲಾಯಿಸಲು ಅಲ್ಲಿಯ ಜನತೆ ಎಂಥೆಲ್ಲಾ ಕಷ್ಟ-ಕಾರ್ಪಣ್ಯಗಳನ್ನು ಎದುರಿಸಬೇಕಾಯಿತೆಂಬುದು ಎಲ್ಲರೂ ತಿಳಿದ ಅಂಶ. ಪಾಕೀಸ್ತಾನ ಮತ್ತು ಸಾಮ್ರಾಜ್ಯಶಾಹೀ ಪರ ಮಾಧ್ಯಮಗಳು ಹರಿಬಿಟ್ಟ ಪ್ರಚಾರದ ಜೊತೆಯಲ್ಲೇ ಭಯೋತ್ಪಾದಕರ ಬೆದರಿಕೆಯನ್ನು ಅಲ್ಲಿನ ಜನತೆ ಎದುರಿಸಿ ನಿಂತಿದ್ದಾರೆ. ಮತದಾನ ಕೇಂದ್ರಗಳಿಗೆ ಮತದಾರರು ಹೋಗದಂತೆ ತಡೆಯಲು ಅನೇಕ ಸ್ಥಳಗಳಲ್ಲಿ ಭಯೋತ್ಪಾದಕರು ದಾಳಿಗಳನ್ನು ನಡೆಸಿದ್ದಾರೆ. ತಮ್ಮ ಸುರಕ್ಷತೆಯ ಬಗ್ಗೆ ಖಾತ್ರಿ ಇಲ್ಲದಿದ್ದ ಅನೇಕ ಕಡೆಗಳಲ್ಲಿ ಪ್ರಮುಖವಾಗಿ ಭಾರತ ಪಾಕ್ ಗಡಿಯ ಪ್ರದೇಶಗಳಲ್ಲಿ ಹಳ್ಳಿಗರು ಮನೆಮಠ ತೊರೆದು ಹೋಗಬೇಕಾಗಿ ಬಂದಿತು. ಆದರೂ ಜನತೆ ದೊಡ್ಡ ಪ್ರಮಾಣದಲ್ಲಿ ಮತ ಚಲಾಯಿಸಿದ್ದಾರೆ. ಒಟ್ಟಾರೆಯಾಗಿ ಶೇ. 43 ರಷ್ಟು ಮತದಾನ ನಡೆದಿದೆ. ಅಲ್ಲಿನ ಪರಿಸ್ಥಿತಿಯಲ್ಲಿ ಇದೇನೂ ಸಣ್ಣ ಪ್ರಮಾಣದ್ದಲ್ಲ. ಭಯೋತ್ಪಾದಕ ಸೊಲ್ಲೇ ಇಲ್ಲದ ಇತರ ಕಡೆಗಳಲ್ಲೂ ಇದೇ ಪ್ರಮಾಣದ ಮತದಾನ ನಡೆದಿದೆ ಎಂಬುದನ್ನು ಮರೆಯುವಂತಿಲ್ಲ. ಪ್ರಜಾಪ್ರಭುತ್ವದ ಸ್ವಘೋಷಿತ ಘೋಷಕನಾಗಿರುವ ಅಮೇರಿಕಾದಲ್ಲೂ ಸಹ ಅನೇಕ ಸಂದರ್ಭಗಳಲ್ಲಿ ಇದಕ್ಕಿಂತ ಹೆಚ್ಚಿನ ಮತದಾನವೇನೂ ನಡೆದಿಲ್ಲ.

**ಗೋಸುಂಬೆ ಮುಶ್ರಫ್**

ಕಾಶ್ಮೀರಿಗಳ ಹಿತಾಸಕ್ತಿಯ ಬಗ್ಗೆ ಗೋಸುಂಬೆ ಕಾಳಜಿ ತೋರಿಸುತ್ತಿದ್ದ ಮುಶ್ರಫ್ ಆಡಳಿತ ಪಾಕಿಸ್ತಾನದಲ್ಲಿ ನಡೆದ ಚುನಾವಣೆಗಳಿಗೆ ತದ್ವಿರುದ್ಧವೆಂಬಂತೆ ಜಮ್ಮು ಮತ್ತು ಕಾಶ್ಮೀರದ ಚುನಾವಣೆಗಳು ನಡೆದಿವೆ. ಜನತೆಯ ತೀರ್ಪನ್ನು ಸುಳ್ಳಾಗಿಸಿದ ಮುಶ್ರಫ್ ಏನೆಲ್ಲಾ ನಡೆಸಿದರೂ. ಒಂದು ಹಂತದಲ್ಲಿ ಪದವೀದರರು ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದೆಂದು ಆಜ್ಞೆ ಹೊರಡಿಸುವವರಿದ್ದರೂ, ತೀವ್ರ ವಿರೋಧದ ನಂತರ ವಾಪಸ್ ಪಡೆದರು. ಭವಿಷ್ಯತ್ತಿನ ಆಡಳಿತದಲ್ಲಿ ಸೇನೆಯ ಪಾತ್ರವನ್ನೂ ಅವರು ಖಾತ್ರಿ ಪಡಿಸಿಕೊಂಡರು. ಪಾಕಿಸ್ತಾನಿ ಮುಸ್ಲಿಂ ಲೀಗ್‌ನ ಪರವಾಗಿ ಆಡಳಿತ ಯಂತ್ರವನ್ನು ದುರುಪಯೋಗ ಪಡಿಸಿಕೊಳ್ಳುವುದರ ಜೊತೆಯಲ್ಲೇ ಬೆನಜಿರ್ ಭುಟ್ಟೋ ಮತ್ತು ನವಾಜ್ ಷರೀಫರು ಹಿಂತಿರುಗಿ ಬರುವುದನ್ನು ತಡೆದರು. ಇಂತಹ ಮನುಷ್ಯ ಕಾಶ್ಮೀರಿ ಜನತೆಯ ಭವಿಷ್ಯತ್ತಿನ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

ಜನತೆಯ ಮನಸ್ಥಿತಿಯನ್ನು ಅರಿತ ಸರ್ವ ಪಕ್ಷಗಳ ಹುರಿಯತ್, ಕಾಂಗ್ರೆಸ್ ನಾಯಕರೂ ಸಹಾ ಚುನಾವಣಾ ಬಹಿಷ್ಕಾರದ ಕರೆ ನೀಡುವುದರಿಂದ ಹಿಂದೆ ಸರಿದರು. ಪ್ರಸ್ತುತ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಮುಕ್ತ ಮತ್ತು ಶಾಂತಿಯುತ ಮತದಾನ ನಡೆಯಲು ಸಾಧ್ಯವಿಲ್ಲ, ತಮ್ಮ ಮಧ್ಯ ಪ್ರವೇಶಿಕೆಗೆ ಕಾರಣ ಸಿಗಲಿದೆ ಎಂದು ಹೊಂಚು ಹಾಕಿ ಕುಳಿತಿದ್ದ ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಆಟವನ್ನೂ ಜನತೆ ಭಗ್ನಗೊಳಿಸಿದ್ದಾರೆ.

**ಫಲಿತಾಂಶದ ಸ್ವರೂಪ**

ನ್ಯಾಷನಲ್ ಕಾನ್ಫರೆನ್ಸ್ ಮತ್ತು ಬಿ.ಜೆ.ಪಿ. ವಿರುದ್ಧ ಜನತೆಯ ಮತ ಎಂಬುದನ್ನು ಎಲ್ಲರು ಒಪ್ಪಿದ್ದಾರೆ. ಪರ್ಯಾಯ ರೂಪುಗೊಳ್ಳದಂತೆ. ನ್ಯಾಷನಲ್ ಕಾನ್ಫರೆನ್ಸ್ ನಡೆಸಿದ ಎಲ್ಲಾ ಪ್ರಯತ್ನಗಳೂ ವಿಫಲವಾಗಿವೆ. ಅಬ್ದುಲ್ಲಾ ಮನೆತನದ ಎಲ್ಲರಿಗೂ ಜನತೆ ಮಣ್ಣು ಮುಕ್ಕಿಸಿದ್ದಾರೆ. ಬಿಜೆಪಿ ಪಾಡಂತೂ ಹೀನಾಯ, ತನ್ನ ಹಿಂದಿನ 8 ಸ್ಥಾನವನ್ನು ಕಳೆದುಕೊಂಡು ಬೇರೆಡೆ ಒಂದು ಸ್ಥಾನ ಗಳಿಸಿದೆ. 87 ಸ್ಥಾನಗಳಲ್ಲಿ 58 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸುವ ಮೂಲಕ ಎರಡನೇ ಮೂರರಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ ಕೇವಲ ಶೇ. 2.5. ರಷ್ಟು ಮತಗಳಿಸಿದೆ.

ತನ್ನ ಸೀಮಿತ ಸಂಪನ್ಮೂಲದ ನಡುವೆ ಸಿಪಿಐ(ಎಂ) ಹಿಂದೆ ಇದ್ದ ಒಂದು ಸ್ಥಾನದ ಜೊತೆಗೆ ಮತ್ತೊಂದು ಸ್ಥಾನ ಗಳಿಸಿದೆ. ಉಳಿದ ಎರಡು ಕ್ಷೇತ್ರಗಳಲ್ಲಿ ಅತ್ಯಲ್ಪ ಮತಗಳಿಂದ ಸೋತಿದೆ. ಭಯೋತ್ಪಾದಕತೆಯ ವಿರುದ್ಧ ಸಿಪಿಐ(ಎಂ) ತಳೆದ ತಾತ್ವಿಕ ನಿಲುಮೆ ಹಾಗೂ ಭಯೋತ್ಪಾದಕ ವಿರೋಧಿ ಪ್ರಚಾರಾಂದೋಲನದಲ್ಲಿನ ತ್ಯಾಗವನ್ನು ಪರಿಗಣಿಸಿದ ಜನತೆ ಸಿಪಿಐ(ಎಂ)ಗೆ ಈ ಬೆಂಬಲವನ್ನು ನೀಡಿದ್ದಾರೆ. 20 ಸ್ಥಾನಗಳನ್ನು ಪಡೆದ ಕಾಂಗ್ರೆಸ್ ಮತ್ತು 16 ಸ್ಥಾನಗಳನ್ನು ಪಡೆದ ಪಿ.ಡಿ.ಪಿ. ಮೊದಲಿಗೆ ತಮ್ಮದೇ ಆದ ಹಿತಾಸಕ್ತಿಗಳಿಗೆ ಜೋತುಬಿದ್ದಿದ್ದರು. ಜನತೆಯ ಅಭಿಮತವನ್ನು ಸಕಾರಗೊಳಿಸುವಲ್ಲಿ ವಿಫಲರಾದಲ್ಲಿ ಜನತೆ ಕ್ಷಮಿಸುವುದಿಲ್ಲ ಎಂಬುದನ್ನು ಅರಿತು ಸರ್ಕಾರ ರಚನೆಗೆ ಮುಂದಾಗಿದ್ದಾರೆ. ಸಿಪಿಐ(ಎಂ) ತನ್ನ ಇಬ್ಬರು ಶಾಸಕರೊಂದಿಗೆ, ಇತರೆ ಐದು ಶಾಸಕರ ಜೊತೆ ಗೂಡಿ ರಚಿಸಿರುವ ಪೀಪಲ್ಸ್ ಡೆಮಾಕ್ರಟಿಕ್ ಫೋರಮ್ (ಜನತಾ ಪ್ರಜಾಸತ್ತಾತ್ಮಕ ವೇದಿಕೆ) ಈ ಸರ್ಕಾರ ರಚನೆಯ ಅಂಶ ರೂಪುಗೊಳ್ಳುವುದರಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಈ ಏಳೂ ಶಾಸಕರು ಭಯೋತ್ಪಾದಕತೆ ಎದುರಿಸುವಲ್ಲಿ ಪ್ರಜಾಸತ್ತಾತ್ಮಕ ಅರ್ಹತೆ ಉಳ್ಳವರಾಗಿದ್ದಾರೆ. ಇತರೆ ಅನೇಕ ಗುಂಪುಗಳು ಮತ್ತು ಸ್ವತಂತ್ರ ಶಾಸಕರ ಬೆಂಬಲವನ್ನು ಈ ಸರ್ಕಾರ ಹೊಂದಿದೆ. ಸರ್ಕಾರದ ಸುಭದ್ರತೆಯನ್ನು ಖಾತ್ರಿ ಪಡಿಸಲು ಅಗತ್ಯವಿರುವ ಅಂಶಗಳನ್ನು ರೂಪಿಸಲಾಗಿದೆ.

ಅದರಲ್ಲಿನ ಪ್ರಮುಖ ಅಂಶವೆಂದರೆ ಮೊದಲನೆಯದು ಸಮಾನ ಕನಿಷ್ಠ ಕಾರ್ಯಕ್ರಮವನ್ನು ರೂಪಿಸುವುದು (CMP) ಮತ್ತು ಎರಡನೆಯದು ಅದರ ಜಾರಿಗೆ ಉಸ್ತುವಾರಿ ವಹಿಸಲು ಸಮನ್ವಯ ಸಮಿತಿ ರಚಿಸುವುದು ರಾಜ್ಯದ ಪ್ರಮುಖ ಮೂರು ಪ್ರದೇಶಗಳಾದ ಜಮ್ಮು ಕಾಶ್ಮೀರಿ ಕಣಿವೆ, ಮತ್ತು ಲಡಾಕಗೆ ಸೂಕ್ತ ಪ್ರಾತಿನಿಧ್ಯ ನೀಡಲಾಗಿದೆ. ಒಟ್ಟಾರೆಯಾಗಿ ಈ ಸರ್ಕಾರ ಸುಭದ್ರವಾಗಿ ತನ್ನ ಪೂರ್ಣ ಅವಧಿಯನ್ನು ಪೂರ್ಣಗೊಳಿಸಲಿದೆ ಎಂಬ ಭರವಸೆ ಇದೆ.

**ಶಾಂತಿಯುತ್ತ ಗೌರವದೊಂದಿಗೆ**

ಈ ಮೈತ್ರಿ ಕೂಟವು ಹೊರಡಿಸಿರುವ 31 ಅಂಶಗಳ CMP ಹೊಸ ಸರ್ಕಾರದ ದೃಷ್ಟಿಕೋನವನ್ನು ಸೂಚಿಸುತ್ತದೆ. ಇತರೆ ಅನೇಕ ಅಂಶಗಳೊಂದಿಗೆ, ಕಾರ್ಯಕ್ರಮದ ದಸ್ತಾವೇಜು ಅತ್ಯಂತ ಸಕಾರಾತ್ಮಕ ಉದ್ದೇಶದೊಂದಿಗೆ ಪ್ರಾರಂಭವಾಗಿದೆ. "ಕಳೆದ 14 ವರ್ಷಗಳ ಭಯೋತ್ಪಾದಕತೆಯಿಂದ ಉಂಟಾಗಿರುವ ದೈಹಿಕ, ಮಾನಸಿಕ, ಹಾಗೂ ಭಾನವಾತ್ಮಕ ಗಾಯಗಳನ್ನು -ನೋವನ್ನು ಗುಣಪಡಿಸುವುದಕ್ಕಾಗಿ ಸರ್ಕಾರ ಕಾರ್ಯವಹಿಸಲಿವೆ. ಎಂಬ ಸಾಲುಗಳಿಂದ ದಸ್ತಾವೇಜು ಪ್ರಾರಂಭವಾಗಿದೆ. ಜನತೆಯ ವಿಶ್ವಾಸಗಳಿಸಿ ರಾಷ್ಟ್ರವಿರೋಧಿಗಳನ್ನು ಮೂಲೆಗುಂಪು ಮಾಡಲು ಇದು ಅತ್ಯಂತ ಅವಶ್ಯಕ ಪೂರ್ವ ಅಗತ್ಯತೆಯಾಗಿದೆ.

ನೂತನ ಸರ್ಕಾರದ ಅವಶ್ಯಕ ಹೊಣೆಗಾರಿಕೆ ಎಂದರೆ, ರಾಜ್ಯವನ್ನು ಭಯೋತ್ಪಾದಕತೆಯಿಂದ ಮುಕ್ತಗೊಳಿಸುವುದರೊಂದಿಗೆ, ಪೊಲೀಸ್ ಮತ್ತು ಮಿಲ್ಟ್ರಿ ಹಿಂಸೆಯಿಂದಲೂ ಮುಕ್ತಿಗೊಳಿಸುವುದು. ಈ ವಿಷಯದಲ್ಲಿ ಜನತೆಯನ್ನು ಭಯೋತ್ಪಾದಕತೆಯಿಂದ ರಕ್ಷಿಸುವ ವಾಗ್ದಾನವನ್ನು CMP ನೀಡುವುದರೊಂದಿಗೆ, ಸಂಬಂಧಿತ ಎಲ್ಲರೊಂದಿಗೆ, ಮಾತುಕತೆ ಆರಂಭಿಸಲು, ಮಾಜಿ ಭಯೋತ್ಪಾದಕರಿಗೆ ಪುನರ್‌ವಸತಿ ಒದಗಿಸಲು ಮತ್ತು ಭಯೋತ್ಪಾದಕತೆಯಲ್ಲಿ ತೊಡಗಿರುವವರನ್ನು ಮುಖ್ಯವಾಹಿನಿಗೆ ಮರಳುವಂತೆ ಉತ್ತೇಜಿಸಲು ಕೇಂದ್ರವನ್ನು ಒತ್ತಾಯಿಸುವ ಅಂಶವನ್ನು ಒಳಗೊಂಡಿದೆ. ಭಯೋತ್ಪಾದಕತೆಗೆ ಬಲಿಯಾದವರಿಗೆ ಹಾಗೂ ದಿಕ್ಕು ತಪ್ಪಿ ಭಯೋತ್ಪಾದಕತೆಯ ದಾರಿ ತುಳಿದವರಿಗ ಸಮಗ್ರ ಪರಿಹಾರ ಮತ್ತು ಪುನರ್ ವಸತಿ ರೂಪಿಸುವ ಹೊಣೆಯನ್ನು ಸಿ.ಎಂ.ಪಿ. ಸರ್ಕಾರದ ಮೇಲೊರೆಸಿದೆ.

ವಿಚಾರಣೆ ಇಲ್ಲದೆ, ಜೈಲುಗಳಲ್ಲಿ ಕೊಳೆಯುತ್ತಿರುವವರ ಮೊಕದ್ದಮೆಗಳನ್ನು ಪರಾಮರ್ಶಿಸಲು ಮತ್ತು ಲಾಕಪ್ ಸಾವುಗಳ ಪ್ರಕರಣಗಳು, ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗಳ ತನಿಖೆ ನಡೆಸುವ ಆಶ್ವಾಸನೆಯನ್ನು ಸಿಎಂಪಿ ನೀಡಿದೆ. ನಿರ್ದಿಷ್ಟವಲ್ಲದ ಹಾಗೂ ಗಂಭೀರ ಆರೋಪವಿಲ್ಲದ ಎಲ್ಲಾ ಬಂಧಿತರನ್ನು ಮತ್ತು ಕಾನೂನಾತ್ಮಕವಾಗಿ ನೀಡಬಹುದಾದ ಕಾರಾಗೃಹವಾಸಕ್ಕಿಂತ ಹೆಚ್ಚೆಚ್ಚು ಜೈಲು ಶಿಕ್ಷೆ ಅನುಭವಿಸಿರುವವರನ್ನು ಬಿಡುಗಡೆ ಮಾಡಲಾಗುವುದು. ರಾಜ್ಯ ಮಾನವ ಹಕ್ಕುಗಳ ಆಯೋಗ ಮತ್ತು ಇತರೆ ಕುಂದುಕೊರತೆ ನಿವಾರಣಾ ಮಂಡಳಿಗಳನ್ನು ಗಟ್ಟಿಗೊಳಿಸಲಾಗುವುದು.

ಸಿಎಂಪಿಯ ಪ್ರಮುಖ ಘೋಷಣೆ ಎಂದರೆ, "ಕಾಶ್ಮೀರೀಯತ್' ಅಂದರೆ, ತಮ್ಮ ತಾಯ್ನಾಡಿಗೆ ಕಾಶ್ಮೀರಿ ಪಂಡಿತರು ಮರಳಿ ಹಿಂತಿರುಗುವುದು. ಅವರ ಮರಳಿ ಬರುವಿಕೆಗೆ ಸೂಕ್ತ ಪರಿಸರ ನಿರ್ಮಿಸಲು ಸಮಾಜದ ಎಲ್ಲಾ ಶಕ್ತಿಗಳ ಸಹಕಾರವನ್ನು ಸರ್ಕಾರ ಪಡೆಯಲಿದೆ. ಅವರ ಸುರಕ್ಷತೆ, ಪುನರ್ವಸತಿ, ಮತ್ತು ಉದ್ಯೋಗಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಿದೆ. ಭಯೋತ್ಪಾದಕರು ಹಾಳುಗೆಡವಿರುವ ಅವರ ಮನೆಗಳನ್ನು ಪುನರ್ ನಿರ್ಮಿಸಲು ಅಥವಾ ಕಾನೂನು ಬಾಹಿರವಾಗಿ ಅವರ ಆಸ್ತಿಗಳನ್ನು ಆಕ್ರಮಿಸಿಕೊಂಡಿರುವವರಿಂದ ಅವರವರ ಆಸ್ತಿಗಳನ್ನು ವಾಪಸ್ ಕೊಡಿಸಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿದೆ ಎಂಬುದನ್ನು ಊಹಿಸಬಹುದು.

ಜಮ್ಮುಮತ್ತು ಲಡಾಕ್‌ನಲ್ಲಿರುವ ಗಲಭೆಪೀಡಿತ ಪ್ರದೇಶಗಳಿಂದ ವಲಸೆಬಂದಿರುವವರ ಪುನರ್‌ವಸತಿಗೆ ಸಮರ್ಪಕ ಹಣಕಾಸು ನೆರವನ್ನು ಪಡೆಯಲು ಕೇಂದ್ರವನ್ನು ಕೋರುವ ಉದ್ದೇಶವನ್ನು ಸರ್ಕಾರ ಹೊಂದಿದೆ. ನಿಯಂತ್ರಣಾ ರೇಖೆಯ ಹತ್ತಿರದಲ್ಲಿ ವಾಸಿಸುತ್ತಿರುವವರಿಗೆ ಗಡಿಯಾಚೆಗಿನ ಹಿಂಸೆಗಳಿಂದ ರಕ್ಷಿಸಲು ಸೂಕ್ತ, ಕಾಯಂ ವಸತಿ ಒದಗಿಸಲು ಕ್ರಮ ವಹಿಸಲಾಗುವುದು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಡೆ, ಸುರಕ್ಷಿತ ವಲಯಗಳಲ್ಲಿ ಅವರ ವಾಸ್ತವ್ಯಕ್ಕೆ ಅನುವುಗೊಳಿಸುವುದು ಹಿಂಸೆಯ ವಿಕೋಪಗಳಿಂದ ಕಳೆದೊಂದು ದಶಕದ ಬಲಿಪಶುಗಳಾಗಿರುವ ಮಹಿಳೆಯರಿಗೆ ವಿಶೇಷ ಯತ್ನಗಳ ಮೂಲಕ ಪರಿಹಾರ ಒದಗಿಸುವ ಭರವಸೆ ನೀಡಲಾಗಿದೆ.


ಭಯೋತ್ಪಾದಕತೆಯೊಂದಿಗೆ ವ್ಯವಹರಿಸಲು ಸಾಕಷ್ಟು ಕಾನೂನುಗಳಿರುವ ಕಾರಣ ನಿರಂಕುಶ ಕಾಯ್ದೆ ಪೋಟೋವನ್ನು ಜಮ್ಮು ಮತ್ತು ಕಾಶ್ಮೀರದ ಬಳಸದಿರಲು, ವಿಶೇಷ ಕಾರ್ಯಾಚರಣೆ ಪಡೆಯನ್ನು ವಿಸರ್ಜಿಸಿ ಅಲ್ಲಿನ ಸಾಮಾನ್ಯ ಪೋಲೀಸ್ ಪಡೆಯೊಂದಿಗೆ, ಅದನ್ನು ಸೇರಿಸುವ ಭರವಸೆಯನ್ನು ನೀಡಲಾಗಿದೆ. ಜನತೆ ಈ ಕ್ರಮವನ್ನು ಎಲ್ಲಾ ಕ್ರಮಗಳಿಗಿಂತಾ ಉತ್ತಮ ಕ್ರಮವೆಂದು ಸ್ವಾಗತಿಸಿದ್ದಾರೆ. ಬಿ.ಜೆ.ಪಿ. ಪ್ರಾಬಲ್ಯದ ಕೇಂದ್ರಕ್ಕೆ ಒಪ್ಪಿಗೆಯೇ ಎಂದು ಕಾದು ನೋಡಬೇಕು. ಒಟ್ಟಾರೆಯಾಗಿ ಸಿ.ಎಂ.ಪಿ.ಯ ಒತ್ತಾಸೆ ಗೌರವ - ಘನತೆಗಳೊಂದಿಗೆ, ರಾಜ್ಯದಲ್ಲಿ ಶಾಂತಿಯುತ ನೆಲೆಯೂರಿಸುವುದಾಗಿದೆ."

**ದೈನಂದಿನ ವಿಷಯುಗಳು :**

ಸರ್ಕಾರ ನಡೆಸುವ ದೈನಂದಿನ ವಿಷಯ ಕುರಿತಂತೆ, 'ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ರಹಿತ ಆಡಳಿತ ಸರ್ಕಾರದ ಮೊದಲ ಆದ್ಯತೆ ನೌಕರಿಗೆ ಆಯ್ಕೆ, ಕಾಂಟ್ರಾಕ್ಟ್ ನೀಡುವಿಕೆ, ಮ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೇಮಕಾ ವಿಷಯಗಳಲ್ಲಿ ಜನತೆ ನ್ಯಾಷನಲ್ ಕಾನ್ಫರೆ ಸರ್ಕಾರದಿಂದ ಕಹಿ ಅನುಭವ ಪಡೆದಿದ್ದ ಕಾರ ವಿಶೇಷ ಎಚ್ಚರಿಕೆ ವಹಿಸುವ ಮತ್ತು ಆಯ್ಕೆಯ ಪಾರದರ್ಶಕಗೊಳಿಸುವ ಭರವಸೆ ನೀಡಲಾಗಿ

ಮುಖ್ಯಮಂತ್ರಿ, ಮಂತ್ರಿಗಳು, ಶಾಸ ವ್ಯವಹಾರಗಳ ಮೇಲೆ ನಿಗಾ ಇಡಲು, ಅ 'ವಿರುದ್ಧದ ದೂರನ್ನು ಸ್ವೀಕರಿಸಲು 'Ehtisab' ( ccountability -ಲೋಕಾಯುಕ್ತರ) ಸಂಸ್ಥೆಯ

ಪುಟ 8



ಸರ್ಕಾರ ರಚನೆಯ ಪ್ರಕಟಣೆ : ಮುಫ್ತಿಮಹಮದ್, ಮನಮೋಹನ ಸಿಂಗ್, ಅಜಾದರೊಂದಿಗೆ ಕಾಂ. ತರಿಗಾಮಿ

# ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನದ ಪ್ರಗತಿ ಗಮನಾರ್ಹ – ಪ್ರೊ. ಬರಗೂರು

**ಭಾಷೆ-ಸಂಸ್ಕೃತಿ ಮತ್ತು ಜನತೆಯ ಬದುಕಿನ ಅವಿನಾವಭಾವ ಸಂಬಂಧಗಳ ಬಗ್ಗೆ ಸದಾ ಚಿಂತಿಸುತ್ತಾ, ಭಾಷಾ ಪ್ರಶ್ನೆಯನ್ನು ಪ್ರಜಾಪ್ರಭುತ್ವದ ಮಹತ್ವದ ಪ್ರಶ್ನೆಯನ್ನಾಗಿ ಪರಿಗಣಿಸಿ, ಪ್ರತಿಪಾದಿಸುತ್ತಾ ಬಂದಿರುವ ನಾಡಿನ ಖ್ಯಾತ ಬಂಡಾಯಸಾಹಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಬರಗೂರು ರಾಮಚಂದ್ರಪ್ಪನವರ ವಿಶೇಷ ಸಂದರ್ಶನವನ್ನು ಇಲ್ಲಿ ನೀಡಲಾಗಿದೆ. ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನದ ಹೋರಾಟ ಮತ್ತು ಆ ದಿಕ್ಕಿನಲ್ಲಿ ಸಾಧನೆಗಳನ್ನು ನಿಖರವಾಗಿ ಗುರುತಿಸಿರುವ ಬರಗೂರರು, ಆಡಳಿತದೊಂದಿಗೆ ಜನತೆಯ ದೂರ ಇಲ್ಲವಾಗಿಸುವ ವಿಚಾರ ಲಹರಿಯಿಂದ ಆರಂಭಗೊಂಡು ನಾಡಿನ ಹಲವಾರು ಜ್ವಲಂತ ವಿಷಯಗಳತ್ತ ಹೊಸ ಆಯಾಮಗಳಲ್ಲಿ ಹರಿದಿದೆ. ಈ ಸಂದರ್ಶನದ ಮೊದಲ ಭಾಗ ಇಲ್ಲಿದೆ.**

ಸಂದರ್ಶನ: **ಎಸ್.ವೈ.ಗುರುಶಾಂತ್**
ಲೇಖನಕ್ಕೆ: **ಟಿ.ಎಲ್.ಕೃಷ್ಣೇಗೌಡ**
ಫೋಟೋ: **ಚಂದ್ರು**

ಕನ್ನಡ ಆಡಳಿತ ಭಾಷೆ ಆಗಬೇಕು ಎನ್ನುವುದು ಅಭಿಮಾನದ ಪ್ರಶ್ನೆಯಲ್ಲ. ಒಂದು ಭಾಷೆಯನ್ನು ಕುರಿತು, ಆ ಭಾಷೆಯನ್ನಾಡುವ ಅವರ ಸಾಂಸ್ಕೃತಿಕ ಪರಂಪರೆಯನ್ನು ಕುರಿತು ಅಭಿಮಾನ ಎನ್ನುವುದು ಭಾವನಾತ್ಮಕ ನೆಲೆಯಲ್ಲಿರುತ್ತದೆ. ಅದಿಷ್ಟೇ ಅದೆಷ್ಟೋ ಕಾರಣದಿಂದ ಒಂದು ಭಾಷೆ ರಾಜ್ಯದ ಆಡಳಿತ ಭಾಷೆಯಾಗಬೇಕು ಅಂತ ಅಂದುಕೊಂಡವನು ನಾನಲ್ಲ. ವಾಸ್ತವವಾಗಿ ಆಡಳಿತ ಭಾಷೆ ಕನ್ನಡ ಇರಬೇಕು ಅನ್ನೋದರ ಹಿಂದಿರೋದು ಅದೊಂದು ಪ್ರಜಾಸತ್ತಾತ್ಮಕವಾದಂತಹ ಮೌಲ್ಯ. **'ಪ್ರಜಾಪ್ರಭುತ್ವ ಮತ್ತು ಪಾರದರ್ಶಕತೆ'** ಇವೆರಡೂ ಒಂದು ರಾಜ್ಯದ ಅಧಿಕೃತ ಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡಬೇಕು ಅನ್ನುವುದರ ಹಿಂದಿರುವ ಒಂದು ತತ್ವ ಇದು ಎಂದು ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನದ ಕುರಿತು ಮಾತನ್ನಾರಂಭಿಸಿದ ಬರಗೂರರು. ಇದು ದೂರವನ್ನು ಸಮೀಪಗೊಳಿಸುವ ಕ್ರಿಯೆ ಎಂದು ಗುರುತಿಸಿದರು.

***ಐಕ್ಯರಂಗ: ದೂರವನ್ನು ಸಮೀಪಗೊಳಿಸುವುದು ಎಂದರೆ...?***


ಪ್ರಜಾಪ್ರಭುತ್ವ ಅಂದರೆ 'ದೂರನ್ನು ಸಮೀಪಗೊಳಿಸುವುದು' ನನ್ನ ದೃಷ್ಟಿಯಲ್ಲಿ, ದೂರವನ್ನು ಸಮೀಪಗೊಳಿಸುವುದು ಅಂತ ಅಂದರೆ, ಯಾವುದು ದೂರ, 'ಆಡಳಿತ ಮತ್ತು ಜನತೆ' ಇವುಗಳ ನಡುವೆ ಒಂದು ಕಂದಕ ಇಲ್ಲದಿರೋ ಹಾಗೆ.. ದೂರ ಇಲ್ಲದಿರೋಹಾಗೆ ಪರಸ್ಪರ ಹತ್ತಿರಕ್ಕೆ ತರತಕ್ಕಂತಹ, ಸಮೀಪಗೊಳಿಸುವ ಒಂದು ಪ್ರಕ್ರಿಯೆ ನಡೀಬೇಕು.

ಹಾಗೆ ನಡೀಬೇಕಾದ್ರೆ ಜನಗಳ ಭಾಷೆ ಯಾವುದಾಗಿರುತ್ತೇ ಅದು ಆಡಳಿತದ ಭಾಷೆಯಾಗಬೇಕು, ಜನಗಳ ಭಾಷೆ ಅಂತ ಅಂದಾಗ, ಜನಗಳಲ್ಲೇನೆ, ಅನೇಕ ಅಲ್ಪಸಂಖ್ಯಾತರ ಭಾಷೆಗಳು ಇರುತ್ತವೆ. ಆದರೆ ಒಟ್ಟಾರೆ ಒಂದು ಅಧಿಕೃತವಾಗಿ ರಾಜ್ಯದ ಭಾಷೆ ಅಂತ ಎಲ್ಲಾ ರಾಜ್ಯಗಳೂ ಒಂದು ನಿರ್ಧಾರ ಮಾಡುತ್ತವೆ. ಆ ಬಹುಸಂಖ್ಯಾತರು ಆಡುವ ಈ ಭಾಷೆ, ಅಲ್ಪಸಂಖ್ಯಾತರು ಇದ್ದರೂ, ಅವರಿಗೂ ಈ ಬಹುಸಂಖ್ಯಾತರ ಭಾಷೆ ಗೊತ್ತಿರುತ್ತೆ. ಹಾಗಾಗಿ ಈ ಕನ್ನಡ ಅನ್ನೋದು ಈ ರಾಜ್ಯದ ಒಂದು ಅಧಿಕೃತ ಭಾಷೆಯಾದದ್ದರಿಂದ ಕನ್ನಡದ ಮೂಲಕ ಆಡಳಿತವನ್ನು ಜನಸಾಮಾನ್ಯರ ಹತ್ತಿರ ಒಯ್ಯುವ ಕ್ರಿಯೆ, ಜನಸಾಮಾನ್ಯರು ಆಡಳಿತದ ಹತ್ತಿರಕ್ಕೆ ಬರೋ ಕ್ರಿಯೆ ಇದು. ಪ್ರಜಾಪ್ರಭುತ್ವ ಅನ್ನೋದೇನೆ ದೂರವನ್ನು ಸಮೀಪಗೊಳಿಸೋದು. ಇದಕ್ಕೆ ಅನೇಕ ವಿಧಾನಗಳಿವೆ. ಅದರಲ್ಲೂ ಬಹುಮುಖ್ಯವಾಗಿ ಒಂದು ವಿಧಾನ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡೋದು.

ಎರಡನೆಯದು **ಪಾರದರ್ಶಕತೆ**, ಈಗ ಜನಗಳಿಗೆ ಅರ್ಥ ಆಗಬೇಕು ಅಂದರೆ ಹೇಗೆ, ಏನು ಆಡಳಿತ ನಡೆಸುತ್ತಿದ್ದಾರೆ, ಇದು ಯಾವ ಭಾಷೆಯಲ್ಲಿ ಮಾತಾಡುತ್ತಾರೆ, ಯಾವ ಭಾಷೆಯಲ್ಲಿ ಬರೀತಾರೆ, ಆಡಳಿತಗಾರರಿಗೆ ಅದು ಬಹಳ ಮುಖ್ಯ. ಜನಗಳಿಗೆ ಯಾವ ಭಾಷೆ ಅರ್ಥವಾಗುತ್ತೋ, ಈ ರಾಜ್ಯದ ಭಾಷೆ ಯಾವುದೋ ಅದರ ಮುಖಾಂತರ ಆಡಳಿತ ನಡೆಸೋದರಿಂದ ಒಂದು ಪಾರದರ್ಶಕತೆ ಅನ್ನೋದು ಇರುತ್ತೆ. ಜನಗಳಿಗೆ ಏನ್ ನಡೀತಿದೆ, ದೈನಂದಿನ ಆಡಳಿತದಲ್ಲಿ ಅನ್ನೋದು ಗೊತ್ತಾಗುತ್ತಾ ಹೋಗುತ್ತದೆ. ಹಾಗಾಗಿ ನಾನು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು, ಅನ್ನೋದರ ಹಿಂದಿನ ನಿಜವಾದ ತತ್ವದ ದೃಷ್ಟಿಲೀ ಪ್ರಜಾಪ್ರಭುತ್ವ ಮತ್ತು ಪಾರದರ್ಶಕತೆ ಅಂತ ಹೇಳಿದೆ.

# ಐಟಿ ಆ

**ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ... ಏಕೀಕರಣದ 47ನೇ ವಾರ್ಷಿಕೋತ್ಸವ ... ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾ... ಹೋರಾಟಗಳು ಮೂಡಿಬಂದಿವೆ. ಈ ... ಎಡರು ತೊಡರುಗಳೇನು? ಅದರ ವಿಸ್ತಾ...**




# ಕರ್ನಾಟಕ ಏಕೀಕರಣ, ಪ್ರಜಾಪ್ರಭುತ್ವ ಮತ್ತು ಆಡಳಿತ ಭಾಷೆ

**ಕರ್ನಾಟಕ ಏಕೀಕರಣದ ಐತಿಹಾಸಿಕ ಹಿನ್ನೆಲೆ, ಸಮಸ್ಯೆಗಳು - ಅದರ ಸೈದ್ಧಾಂತಿಕ ಪ್ರಶ್ನೆಗಳನ್ನು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಇಲ್ಲಿ ವಿಶ್ಲೇಷಿಸಿದ್ದಾರೆ. ಹಾಗೆಯೇ ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನ ಮತ್ತು ಜಾರಿಯಾಗಬೇಕಾದ ವ್ಯಾಪ್ತಿಯ ಹಲವಾರು ಕ್ಷೇತ್ರಗಳನ್ನು ಗುರುತಿಸಿದ್ದಾರೆ.**

*'ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ*
*ಕನ್ನಡದ ತಾಯಗೆಲ್ಗೆ, ಬಾಳ್ಗೆ"*
*"ತನು ಕನ್ನಡ, ಮನ ಕನ್ನಡ, ನುಡಿ*
*ಕನ್ನಡವೆಮ್ಮವು"*
*ಜಯ, ಜಯ, ಜಯ ಕರ್ನಾಟಕ ಎನುತ*
*"ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು"*
*ಹಾಡುವ ನಾವೆಲ್ಲರೂ ಕೂಡಿ"*


ಕರ್ನಾಟಕ ಏಕೀಕರಣಕ್ಕೆ ಮೊದಲು ಕರ್ನಾಟಕದಲ್ಲಿ ಮೊಳಗುತ್ತಿದ್ದ ಘೋಷಗಳಿವು. ವಿದ್ಯಾಭ್ಯಾಸದ ಹರಡುವಿಕೆ, ಅದರೊಡನೆಯೇ ಪ್ರಜಾಪ್ರಭುತ್ವದ ತತ್ವ, ವಿಚಾರಗಳ ಹರಡುವಿಕೆ ಇವುಗಳ ಫಲವಾಗಿ ಕರ್ನಾಟಕದ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳನ್ನು ಮೀರಿ ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳನ್ನು ಆವರಿಸಿದ ಕರ್ನಾಟಕದ ನವೋದಯ ಇವೆಲ್ಲವೂ ಸೇರಿ ಕರ್ನಾಟಕದ ಏಕೀಕರಣ ಇಡೀ ಕರ್ನಾಟಕದ ಜನತೆಯ ಬಯಕೆಯಾಯಿತು. ಇಂತಹ ಹಿನ್ನೆಲೆಯಲ್ಲಿ 1924ರಲ್ಲಿ ಬೆಳಗಾಂನಲ್ಲಿ ಜರುಗಿದ ಕಾಂಗ್ರೆಸ್ ಮಹಾಧಿವೇಶನದಲ್ಲಿಯೇ ಭಾಷಾವಾರು ಪ್ರಾಂತ್ಯಗಳ ರಚನೆಗೆ ಕರೆ ನೀಡಿದ್ದು ನಂತರ ಕಾಂಗ್ರೆಸ್‌ನ ಪ್ರಾಂತೀಯ ಸಮಿತಿಗಳನ್ನು ಭಾಷಾವಾರು ಆಧಾರದಲ್ಲಿ ಪುನರ್‌ರಚನೆ ಮಾಡಿದ್ದು ಭಾಷಾವಾರು ಪ್ರಾಂತ್ಯಗಳ ಬೇಡಿಕೆಯ ಚಳುವಳಿ ಭಾರತದ ಸ್ವಾತಂತ್ರ್ಯ ಚಳುವಳಿಯ ಒಂದು ಪ್ರಮುಖ ಪ್ರವಾಹವಾಯಿತು. 1905ರಲ್ಲಿ ಒಂದೇ ಭಾಷೆ ಮಾತನಾಡುತ್ತಿದ್ದ ಬಂಗಾಳವನ್ನು ಒಡೆದು ಪಶ್ಚಿಮ ಬಾಗೂ ಪೂರ್ವಭಾಗಗಳೆಂದು ಎರಡು ಭಾಗಗಳನ್ನಾಗಿ ಮಾಡಿದ್ದು ವಂಗಭಂಗ ಚಳುವಳಿಯಾಗಿ ಇಡೀ ದೇಶದ ಸ್ವಾತಂತ್ರ್ಯ ಚಳುವಳಿಗೆ ನಾಂದಿ ಹಾಡಿತೆಂಬುದನ್ನು ನೆನಪಿಸಿಕೊಳ್ಳೋಣ.

ಹೀಗೆ ಸ್ವಾತಂತ್ರ್ಯದ ವಿಚಾರಗಳು ಜನಸಮುದಾಯದಲ್ಲಿ ಹರಡಬೇಕಾದರೆ, ಸ್ವಾತಂತ್ರ್ಯ ಹೋರಾಟಕ್ಕೆ ಅವರನ್ನು ಸೆಳೆಯ ಬೇಕಾದರೆ ಜನರ ಭಾಷೆಯಲ್ಲಿ ಮಾತನಾಡುವುದು ಅವಶ್ಯ ಎಂಬುದನ್ನು ಸ್ವಾತಂತ್ರ್ಯ ಚಳುವಳಿಯ ಎಲ್ಲಾ ನಾಯಕರು ಮನಗಂಡಿದ್ದರು.

ಇದೇ ನಮ್ಮ ದೇಶದಲ್ಲಿ ಪ್ರಜೆಗಳೇ ಪ್ರಭುತ್ವ ಎಂತಹುದಿರಬೇಕೆಂಬುದನ್ನು ನಿರ್ಧರಿಸುವ ಪ್ರಜಾಪ್ರಭುತ್ವದ ನಾಂದಿಕ್ರಿಯೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯೇ ಪ್ರಜಾಪ್ರಭುತ್ವ ಕ್ರಾಂತಿ ಪ್ರಕ್ರಿಯೆಯ ಭಾಗವಾಯಿತು. ರಾಜ, ಸಾಮ್ರಾಟರುಗಳು, ನವಾಬ, ಸುಲ್ತಾನರುಗಳ ಆಳ್ವಿಕೆಗೆ ಕೊನೆ ಹಾಡಿತು.

ಯುರೋಪಿನಲ್ಲಿ ಬ್ರಿಟನ್, ಫ್ರೆಂಚ್ ಕ್ರಾಂತಿಗಳೂ, ನಂತರದ 1848ರ ಕ್ರಾಂತಿಕಾರಿ ಹೋರಾಟಗಳೂ ಕೂಡ ಆಯಾ ಜನರ ನಡುವೆ ರಾಜ ಪ್ರಭುತ್ವಗಳನ್ನು ನಿರ್ನಾಮ ಮಾಡಿ ಅಥವಾ ಬ್ರಿಟನ್ನಿನಲ್ಲಿಯಂತೆ ಮೂಲೆಗುಂಪು ಮಾಡಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದರ ಜೊತೆಗೆ ಅಂದಿನ ಯುರೋಪಿನ ಭೂಪಟವನ್ನು ಸಂಪೂರ್ಣವಾಗಿ ಬದಲಿಸಿ ಭಾಷಾವಾರು ಆಡಳಿತ ಪ್ರದೇಶಗಳನ್ನು, ದೇಶಗಳನ್ನು ರೂಪಿಸಿತು.

ಭಾರತದಲ್ಲಿಯೂ ಕೂಡ ಭಾಷಾವಾರು ಪ್ರಾಂತ್ಯಗಳ ಬೇಡಿಕೆ ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಎತ್ತಿದ ದನಿಯಾಗಿತ್ತು. ಆದರೆ ಈ ಮಹತ್ವದ ಪ್ರಕ್ರಿಯೆಯಲ್ಲಿ ಅಂದಿನ ಹಾಗೂ ಇಂದಿನ ಕನ್ನಡ ಚಳುವಳಿಕಾರರು ತಮಗೆ ಅರಿವಿಲ್ಲದೆ (ಅಪ್ರಜ್ಞಾಪೂರ್ವಕವಾಗಿ) ಕ್ರಿಯಾಶೀಲವಾಗಿದ್ದರು. ನಾವೆಲ್ಲರೂ ಕನ್ನಡಿಗರು ಎಂಬ ಭಾವನೆ, ಕನ್ನಡತನ, ಕರ್ನಾಟಕತ್ವದ ಪರಿಕಲ್ಪನೆಗಳು ಮೂಡುವ ಮುನ್ನ 'ಕನ್ನಡ ಮಾತನಾಡುವ ಜನ ತಮ್ಮನ್ನು' ಗುರುತಿಸಿಕೊಳ್ಳುತ್ತಿದ್ದರು. ಒಂದು ತಾವು ಆ ಜಾತಿ ಈ ಜಾತಿಯವರೆಂದು ಮಾತ್ರ ಆ ಮತ ಈ ಮತದವರೆಂದು ಮಾತ್ರ ಗುರುತಿಸಿ ಕೊಳ್ಳುತ್ತಿದ್ದರು. ಈ ಜಾತಿ ಪ್ರಜ್ಞೆ ಮತ ಪ್ರಜ್ಞೆಯೇ ಅವರ ಗುರುತಾಗಿರುತ್ತಿತ್ತು. ಇದನ್ನು ಮೀರಿದರೆ ಮೈಸೂರು ಸಂಸ್ಥಾನದವರು, ಕೆಳದಿ ಸಂಸ್ಥಾನದವರು, ಚಿತ್ರದುರ್ಗ, ಹರಪನಹಳ್ಳಿ, ಸಿರಾ, ಸವಣೂರು, ಸಂಡೂರು, ನರಗುಂದ, ವಿಜಾಪುರ, ಧಾರವಾಡ, ಕೊಡಗು ಎಂದು ಆಯಾ ಪಾಳೆಯಗಾರ, ನವಾಬರ ಆಳ್ವಿಕೆಯ ಪ್ರದೇಶಗಳಿಂದ ಗುರುತಿಸಿಕೊಳ್ಳುತ್ತಿದ್ದರು. ಆದರೆ ಅಪರೂಪವಾಗಿ ಈ ಪ್ರದೇಶದ ವರೆಂಬ ಗುರುತು ಕೆಲ ಪ್ರದೇಶಗಳಲ್ಲಿ ಮಾತ್ರ ಸ್ವಲ್ಪ ಹೆಚ್ಚಾಗಿ ಉಳಿದೆಡೆ ದುರ್ಬಲವಾಗಿದ್ದ ಪ್ರಜ್ಞೆಯಾಗಿತ್ತು.


ಜಿ.ಎನ್.ನಾಗರಾಜ್


'ನಾವೆಲ್ಲ ಒಂದೆ ಮನೆಯವರೂ ತಮ್ಮಂದಿರು ನಮ್ಮೆಲ್ಲರನ್ನು ಪಡೆದುದೊಂದೇ ನಾಡಿನ ಬಸಿರು ಎಂದು ನಾವರಿದಿದ್ದೆವೆ ನಮಗೆ ಇನ್ನಾರೆದುರು ಎಂಬ ಭಾವನೆ ಜಾತಿ, ಮತಗಳನ್ನು ಮೀರಿದ ಅವುಗಳ ಕಟ್ಟುಗಳನ್ನು ಹರಿದುಹಾಕುವ ಒಂದು ಸಶಕ್ತವಾದ ಪ್ರಗತಿಪರವಾದ, ಭಾವನೆಯಾಗಿತ್ತು, ವಿವಿಧ ರಾಜ್ಯ ಪಾಳೆಯಗಾರಿ ಪ್ರಭುತ್ವಗಳ ಮೇರೆಗಳನ್ನು ಮೀರಿ ಒಂದು ನಾಡಾಗಿ ಬದುಕು ಅರಳುವ ಆ ಕಲ್ಪನೆಯೇ ಜಾತಿ ಮತಗಳ ಸಂಕುಚಿತ ಭಾವನೆಗಳ ಮೇಲಿನ ಧಾಳಿಯಾಯಿತು.

*"ಮಾನವ ಜಾತಿಯು ಜೀವಾಳ*
*ಭಾಷದೇವಿಯೊಳಿಲ್ಲೇನು? ಏನಿದು?*
*ಐಕ್ಯದ ನಿಜ ಬೀಜ*
*ತಾಯ್ನುಡಿಯೊಲವಿನೊಳಿಲ್ಲೇನು?*

ಪುಟ 10 ಕ್ಕೆ

# ಳಿತದಲ್ಲಿ ಕನ್ನಡ

**ದಾನಗಳ ಚಳುವಳಿಯ ಫಲವಾಗಿ ಒಂದುಗೂಡಿ ಮೂಡಿದ ಕರ್ನಾಟಕದ ನೆ. ಅಂದಿನಿಂದ ಇಂದಿನವರೆಗೆ ಆಶಯಗಳು, ಕನಸುಗಳು ಹಲವಾರು. ಅದರಲ್ಲಿ ೀಕು. ಇದು ಪ್ರಜಾಪ್ರಭುತ್ವದ ಪ್ರಾಥಮಿಕ ಅಗತ್ಯವೆಂದು ಅನೇಕ ಮಜಲಿನ ಯಲ್ಲಿ ಆಡಳಿತದಲ್ಲಿ ಕನ್ನಡದ ಅನುಷ್ಠಾನ ಹೇಗೆ? ಏನಾಗಿದೆ? ಸಾಧನೆಗಳೇನು? ಂಬುದರತ್ತ ಬೆಳಕು ಚೆಲ್ಲುವ ಲೇಖನ – ವಿಶೇಷ ಸಂದರ್ಶಗಳು ಇಲ್ಲಿವೆ.**



ವಾಳದಾರರತ್ತಲೋ?

***ಕ್ಯರಂಗ: ಈ ದಿಕ್ಕಿನಲ್ಲಿ ಸರ್ಕಾರ ಕೈಗೊಂಡ ಮಗಳೇನು?***

ಈ ಪ್ರಯತ್ನ ಬಹಳ ಹಿಂದಿನಿಂದ ನಡೆದಿದೆ. ಗ ಮೊದಲು 1963 ರಲ್ಲಿ ಕನ್ನಡವೇ ಆಡಳಿತ ಷೆ ಅಂತ ಒಂದು ಅಧಿಕೃತವಾದ ನಿರ್ಣಯವನ್ನು ಗೊಂಡರು. ಇದು ಸಂವಿಧಾನದತ್ತವಾಗಿರುವ ಧಿಕಾರವನ್ನು ಬಳಸಿಕೊಂಡು, ಸಂವಿಧಾನದಲ್ಲೇ ದಕ್ಕೊಂದು ಅವಕಾಶವಿದೆ, ಈ ಂವಿಧಾನದತ್ತವಾದ 'ಅವಕಾಶ ಮತ್ತು ಅಧಿಕಾರ' ರಡನ್ನು ಬಳಸಿಕೊಂಡು ರಾಜ್ಯದ ಉಭಯ ದನಗಳೂ ಕನ್ನಡವನ್ನು ಆಡಳಿತ ಭಾಷೆ ಅಂತ ರ್ಣಯ ಕೈಗೊಂಡಿದ್ದು 1963 ರಲ್ಲಿ. ಆನಂತರ 0 ರ ದಶಕದಲ್ಲಿ ದೇವರಾಜು ಅರಸು ುಖ್ಯಮಂತ್ರಿಗಳಾಗಿರುವಾಗ ಈ ನಿರ್ಣಯಕ್ಕೆ ಂದು ಚಾಲನೆ ಹೆಚ್ಚು ಸಿಗಲು ಪ್ರಾರಂಭವಾಯ್ತು ಂತ ನನಗನ್ನಿಸುತ್ತೆ. ಏಕೆಂದರೆ ಅಲ್ಲಿಯವರೆಗೆ ಾಲ್ಲೂಕು ಮಟ್ಟದಲ್ಲಿ ಮಾತ್ರ ಕನ್ನಡವನ್ನು ಆಡಳಿತ ಾಷೆಯಾಗಿ ಬಳಸುವಂತಹ ಒಂದು ಪ್ರಕ್ರಿಯೆ ಾಲನೆಯಲ್ಲಿತ್ತು. ಮತ್ತು ಸಾಕಷ್ಟು ನಡೀತಾ ಇತ್ತು. ದರೆ 70 ರ ನಂತರದಲ್ಲಿ ದೇವರಾಜ ರಸೂರವರು ಇದನ್ನು ಜಿಲ್ಲಾ ಮಟ್ಟಕ್ಕೆ ತಂದರು, ಂದರೆ 70 ರ ದಶಕ ಮುಗಿದ 80 ರ ದಶಕದ ಳಗಡೆ, ಸುಮಾರು ಹತ್ತುವರ್ಷ ಜಿಲ್ಲೆ ಮತ್ತು ಭಾಗ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಾಷೆಯಾಗಿ ತರೋಕೆ ಪ್ರಯತ್ನ ನಡೀತು. 1983 ೆಬ್ರವರಿ 10ನೇ ತಾರೀಖು ಇರಬೇಕು, ಚಿವಾಲಯ ಮಟ್ಟದವರೆಗೆ, ಅಂದರೆ ಇಡೀ ಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಾಡಬೇಕು ಅನ್ನೋ ತೀರ್ಮಾನವನ್ನು ತೆಗೆದು ೊಂಡರು. ಇದರ ಜೊತೆಜೊತೆಗೆ ತೀರ್ಮಾನ ೆಗೆದುಕೊಳ್ಳೋದು ಬಹಳ ಸುಲಭ. ಅದಕ್ಕೆ ೇಕಾದ ಪೂರ್ವ ಸಿದ್ಧತೆ ಸಹ ನಡೀಬೇಕು. ಾಗಾಗಿ ಪ್ರಾರಂಭದ ದಿನಗಳಲ್ಲಿ ಯಾವುದು ನ್ನಡದಲ್ಲಿರಬೇಕು, ಯಾವುದು ಂಗ್ಲೀಷಿನಲ್ಲಿರಬೇಕು ಅಂತ ವಿಂಗಡನೆ ಸಹಾ ಾಡಿಕೊಂಡಿದ್ದರು. ಅಂದರೆ ಕನ್ನಡವನ್ನು ಳಸೋದಕ್ಕೆ ಬೇಕಾದಂತಹ ಸಿದ್ಧತೆಗಳು ರ್ಣವಾಗಿ ಆಗಿಲ್ಲ ಅಂದ್ಕೊಂಡು. ಆದರೆ 83 ಫೆ. 0 ರ ನಂತರದಲ್ಲಿ ಸಚಿವಾಲಯದ ಟ್ಟದವರೆಗೂ ಕನ್ನಡವನ್ನು ಬಳಸಬೇಕು ಎನ್ನುವ ತೀರ್ಮಾನ ತಗೊಂಡ ನಂತರ ರಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ತರಬೇಕು ಎಂಬ ಪ್ರಯತ್ನಗಳು ನಡೆದಿವೆ. ಇದಕ್ಕಾಗಿ ಏನಾಗಿದೆ ಅಂದರೆ ಕೆಲವು ತರಬೇತಿ ಶಿಬಿರಗಳನ್ನು ಮಾಡಿದ್ದಾರೆ, ಅಧಿಕಾರಿಗಳಿಗಾಗಿ ಚಿಕ್ಕ, ಚಿಕ್ಕ ಕೆಲವು ಇಲಾಖೆಗಳಿಗೆ ಸಂಬಂಧಪಟ್ಟಂತೆ ಪದಕೋಶಗಳನ್ನು ತಂದಿದ್ದಾರೆ. ಹೀಗೆ ಪೂರಕವಾದ ಒಂದು ಸಾಹಿತ್ಯವನ್ನು ಒದಗಿಸಿದರು. ಆದರೆ ಮುಖ್ಯವಾಗಿ ನನಗೆ ಅನ್ನಿಸೋದು, ಅಗತ್ಯ ಪ್ರಮಾಣದ ಇಚ್ಛಾಶಕ್ತಿ ಬರಲಿಲ್ಲಾ ಅಂತ್ಲೇ ನಾನಂದ್ಕೊಂಡಿದ್ದೇನೆ.

***ಐಕ್ಯರಂಗ: ಈ ಇಚ್ಛಾಶಕ್ತಿ ಎಲ್ಲಿಂದ ಬರಬೇಕು?***

ಈ ಅಗತ್ಯ ಪ್ರಮಾಣದ ಇಚ್ಛಾಶಕ್ತಿ ಎಲ್ಲಿಂದ ಬರಬೇಕೆಂದರೆ ಎರಡು ನೆಲೆಯಲ್ಲಿ ಬರಬೇಕು. ಒಂದು ಆಡಳಿತ ಭಾಷೆ ವಿಷಯಕ್ಕೆ ಬಂದಾಗ ಸರ್ಕಾರದ ಕಡೆಯಿಂದ ಬರಬೇಕು, ಸರ್ಕಾರದ ಕಡೆಯಿಂದ ಅಂತ ಅಂದಾಗ ಒಂದು ಮಂತ್ರಿ ಮಂಡಳ, ಇನ್ನೊಂದು ನೌಕರ ಶಾಹಿ. ಈ ಎರಡೂ ಕಡೆಯಿಂದ ಬರಬೇಕು. ಆ ಇಚ್ಛಾಶಕ್ತಿ ಎಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಕಟ ಆಗಬೇಕಿತ್ತೋ ಅಷ್ಟು ದೊಡ್ಡ ಪ್ರಮಾಣದಲ್ಲಿ ಆಗಲಿಲ್ಲ. ಆದರೆ ಬರ್ತಾ, ಬರ್ತಾ ಹೌದು ಕನ್ನಡವನ್ನು ಬಳಸಬೇಕಾಗಿದೆ ಅಂತ ಮನವರಿಕೆ ಆಗೋದಕ್ಕೂ ಶುರುವಾಯ್ತು. ಈಗ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾಕಷ್ಟು



ಅಂತಾನೇ ಕರೀಬಹುದು. ಒಂದು ಶೇ 90 ರಷ್ಟರ ವರೆಗೂ ಬಳಕೆ ಆಗ್ತಾ ಇದೆ. ಸಚಿವಾಲಯದಲ್ಲೂ ಸಹ ಸಾಕಷ್ಟುಬಳಕೆ ಆಗ್ತಾ ಇದೆ.

***ಐಕ್ಯರಂಗ: ಆಡಳಿತ ಭಾಷೆಯ ಪ್ರಶ್ನೆಯನ್ನು ಕೇವಲ ಕಛೇರಿಗಳಿಗೆ ಮಾತ್ರ ಸೀಮಿತಗೊಳಿಸಲಾಗುತ್ತಿದೆಯಲ್ಲ. ಕಾರ್ಖಾನೆಗಳು, ತಂತ್ರಜ್ಞಾನ-ವಿಜ್ಞಾನದ ಉನ್ನತ ಪದವಿಗಳವರೆಗೂ ವಿಸ್ತಾರಗೊಳ್ಳುತ್ತಿಲ್ಲ ಯಾಕೆ?***

ಅಲ್ಲಿ ಕಡಮೆಯಿರುವುದಕ್ಕೆ ಬಹುಶಃ ಇಷ್ಟು ಕಾರಣವಿರಬಹುದು. ನಮ್ಮಗಮನವೆಲ್ಲ ಯಾವುದು ಹೆಚ್ಚು ಜನಸಾಮಾನ್ಯರ ಜೊತೆ ಸಂಪರ್ಕಕ್ಕೆ ಬರುತ್ತೋ ಅಂತ ಕಛೇರಿಗಳ ಕಡೇನೇ ಹೆಚ್ಚು ಇದ್ದದ್ದರಿಂದ ಬಹುಶಃ ಈ ಕೊರತೆ ಉಂಟಾಗಿದೆ. ಈಗ ಕೈಗಾರಿಕೆಗಳದ್ದು ಏನಾಗುತ್ತದೆ ಅಂದರೆ ಕೈಗಾರಿಕೆಗಳಲ್ಲಿ ನಡೆಯುವ ವ್ಯವಹಾರಗಳು ಅಲ್ಲಿರುವ ಕಾರ್ಮಿಕರ ಜೊತೆ ನಡೆಯೋದು ಕಡಿಮೆ. ಆದರೂ ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಅಲ್ಲೂ ಪ್ರಯತ್ನವನ್ನು ಮಾಡ್ತೀದ್ದೀವಿ. ಈಗ ಯಾವುದು ಸೂಚನಾ ಫಲಕಗಳಲ್ಲಿ ಕನ್ನಡ ಬರಬೇಕು ಅನ್ನೋದ್ದರಿಂದ ಹಿಡಿದು ಇಂಗ್ಲೀಷ್ ಭಾಷೆ ಇದ್ದರೂ, ಅದರ ಜೊತೆಗೆ ಕೇಂದ್ರ ಸರ್ಕಾರದ್ದಾದರೆ, ಕೇಂದ್ರ ಸರ್ಕಾರದ್ದರಲ್ಲೂ ಇಂಗ್ಲೀಷಿನ ಜೊತೆ ಕನ್ನಡ ಬಳಸಬೇಕು ಎಂಬ ಪ್ರಯತ್ನಗಳು ನಡೀತಾ ಇವೆ. ಆ ಕೊರತೆ ಇರೋದ್ ನಿಜ, ಅದನ್ನು ನಾ ಇಲ್ಲ ಅನ್ನೋದಿಲ್ಲ. ಕಾರಣ ಇಷ್ಟೇ ಅಂತ ನಾನಂದುಕೊಂಡಿದ್ದೇನೆ. ದೈನಂದಿನ ಆಡಳಿತ ಇದೆಯಲ್ಲ, ದೈನಂದಿನ ಆಡಳಿತದ ಬಗ್ಗೆ ಹೆಚ್ಚು ಕೇಂದ್ರೀಕೃತ ಆಯ್ತು ಇದು ಅಂತ...

***ಐಕ್ಯರಂಗ: ಈ ಬಗೆಗೆ ನೆರೆಯ ರಾಜ್ಯಗಳಲ್ಲಿ ಪರಿಸ್ಥಿತಿ ಹೇಗಿದೆ?***

ದಕ್ಷಿಣ ಭಾರತದ ಬೇರೆ ಯಾವುದೇ ರಾಜ್ಯ-ತಮಿಳುನಾಡನ್ನು ಒಳಗೊಂಡಂತೆ ರಾಜ್ಯದ ಆಡಳಿತದಲ್ಲಿ ಅವರವರ ಭಾಷೆ ಎಷ್ಟು ಬಳಕೆಯಾಗಿದೆ ಅಂತ ಸಮೀಕ್ಷೆ ಮಾಡಿದರೆ ಕರ್ನಾಟಕದಲ್ಲಿ ಕನ್ನಡ ಅದಕ್ಕಿಂತ ಚೆನ್ನಾಗಿ ಬಳಕೆಯಾಗಿದೆ, ಇದು ಸತ್ಯ. ಸತ್ಯವನ್ನು ಜನ ನಂಬಲ್ಲ, ಸುಳ್ಳು ಸುಂದರವಾಗಿರ್ತದೆ ಜನ ನಂಬ್ತಾರೆ. ಏಕೆಂದರೆ ಇದನ್ನು ನಾನು ತಮಿಳುನಾಡು, ಆಂಧ್ರಪ್ರದೇಶ, ಕೇರಳದವರ ಸಂಪರ್ಕದಿಂದ ಹೇಳ್ತಾಯಿದ್ದೀನಿ. ಎಲ್ಲಾ ರಾಜ್ಯಗಳಲ್ಲೂ ಅವರವರ ಭಾಷೆಗಳ ಅನುಷ್ಠಾನಕ್ಕೆ ಬೇರೆ, ಬೇರೆ ಹೆಸರಿನಲ್ಲಿ ಕೆಲವು ಸಂಸ್ಥೆಗಳು ಇದ್ದೇ ಇದೆ. ಸರ್ಕಾರದ ಅಂಗಸಂಸ್ಥೆಗಳು. ಕೆಲವರು ಕರ್ನಾಟಕದಲ್ಲಿ ಮಾತ್ರಏನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇಂಥದ್ದೆಲ್ಲ ಬೇಕಾ? ಕಾವಲು ಸಮಿತಿ ಬೇಕಾ ಅಂತ ಮಾತಾಡ್ತಾರೆ, ಸಾಮಾನ್ಯವಾಗಿ. ಆದರೆ ಹಾಗಲ್ಲ, ಪ್ರಜಾಪ್ರಭುತ್ವದ ಒಳಗಡೆ ಒಂದು ಸರ್ಕಾರ ತನ್ನ ನೀತಿಗಳ ಅನುಷ್ಠಾನಕ್ಕೂ ಮತ್ತು ತನ್ನ ನೀತಿಗಳಿಗೆ ಬೇಕಾದ ಒಂದು ಕಾವಲು ಕಾಯೋದಿಕ್ಕೆ ಕೆಲವು ಸಂಸ್ಥೆಗಳನ್ನು ನಿಯಮಿಸಿಕೊಳ್ಳೋದೇನೇ ಒಂದು ಸರಿಯಾದ ನಿಯಮ. ಯಾರೇ ವೈಜ್ಞಾನಿಕ ಸಮೀಕ್ಷೆ ನಡೆಸಿದರೂ ಕಾನೂನು ಆಡಳಿತದಲ್ಲಿ ಕನ್ನಡದ ಬಳಕೆ ಏನಿದೆ? ಅದು ಬೇರೆ ರಾಜ್ಯಗಳಿಗಿಂತ, ಆ ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯ ಭಾಷೆಗಳ ಬಳಕೆ ಏನಾಗಿದೆ, ಅದಕ್ಕಿಂತ ನಮ್ಮ ನಾಡಿನಲ್ಲಿ ಖಂಡಿತ ಚೆನ್ನಾಗಿ ಆಗಿದೆ. ಇದು ಒಂದು ಅಂಶ, ಇನ್ನೊಂದು ಅಂಶ ಇಂತಹವರಿಗೆ ನಾನು ಉತ್ತರ ಕೊಡಲೇಬೇಕಾಗಿದೆ. ಆದ್ದರಿಂದ ಹೇಳ್ತಿದ್ದೀನಿ.

**"ಕನ್ನಡ ಮಾಧ್ಯಮದಲ್ಲಿ ಓದಿ ಅಂತ ಹೇಳೋದು ಅಷ್ಟೇ ಅಲ್ಲ, ಕನ್ನಡ ಮಾಧ್ಯಮದಲ್ಲಿ ಓದಿದವರು ಬದುಕೋದಕ್ಕೆ ಬೇಕಾದ ಪರಿಸರ ನಿರ್ಮಾಣ ಮಾಡಬೇಕು ನಾವು"**

***ಐಕ್ಯರಂಗ: ಈ ದಿಕ್ಕಿನಲ್ಲಿ ಪ್ರಾಧಿಕಾರದ ತೀರ್ಮಾನಗಳ ಅನುಷ್ಠಾನ ಹೇಗಾಗಿದೆ? ಭಾಷೆ ಮತ್ತು ಬದುಕಿನ ಸಂಬಂಧಗಳನ್ನು ಸದಾ ಗಮನದಲ್ಲಿರಿಸಿರುವ ನೀವು ಹೇಗೆ ಹೆಜ್ಜೆ ಇಡಬಯಸಿದ್ದೀರಿ?***

ಕರ್ನಾಟಕದಲ್ಲಿ ಇತ್ತೀಚಿಗೆ ತೆಗೆದುಕೊಂಡ ಕೆಲವು ನಿರ್ಣಯಗಳು ಅಥವಾ ತೀರ್ಮಾನಗಳು ಮತ್ತು ಅದರ ಅನುಷ್ಠಾನ, ಬರೀ ತೀರ್ಮಾನ ಅಲ್ಲ. ಅನುಷ್ಠಾನ ಇದೆಯಲ್ಲ ಅದು ಒಂದು ಜನ ಭಾಷೆಯನ್ನು ಹೇಗೆ ತರಬೇಕು ಅನ್ನೋದಕ್ಕೆ ಮಾದರಿ ಅಂತಲೇ ನಾನಂದ್ಕೊಂಡಿದ್ದೇನೆ. ಇದನ್ನು ಕೆಲವರು ತನ್ನ ಕೆಲಸ ತಾನೇ ಹೇಳ್ಕೋತ್ತಾನೆ ಅಂತ ಯಾರಾದರೂ ತಿಳ್ಕೊಂಡ್ರೆ....., ಹಾಗಲ್ಲ ಬಹಳ ಸಂಕೋಚದಿಂದಲೇ ಈ ಮಾತನ್ನು ಹೇಳ್ತಿದ್ದೇನೆ. ಅದಕ್ಕೆ ಕಾರಣ ಇಷ್ಟೇ ನೋಡಿ. ಈಗ ಕನ್ನಡ ಮಾಧ್ಯಮದಲ್ಲಿ ಓದಿ ಅಂತ ಹೇಳೋದು ಬಹಳ ಸುಲಭ. ಆದರೆ 20 ವರ್ಷದಿಂದ ನಾನು ಹೇಳ್ತಿದ್ದೀನಿ, ಕನ್ನಡ ಮಾಧ್ಯಮದಲ್ಲಿ ಓದಿ ಅಂತ ಹೇಳೋದು ಅಷ್ಟೇ ಅಲ್ಲ, ಕನ್ನಡ ಮಾಧ್ಯಮದಲ್ಲಿ ಓದಿದವರು ಬದುಕೋದಕ್ಕೆ ಬೇಕಾದ ಪರಿಸರ ನಿರ್ಮಾಣ ಮಾಡಬೇಕು ನಾವು. ಈ ಎರಡೂ ಏಕಕಾಲದಲ್ಲೂ ನಡೀತಾ ಇರಬೇಕು. ಅದಕ್ಕೆ ಒಂದು ಪ್ರಯತ್ನವಾಗಿ ಕನ್ನಡ ಮಾಧ್ಯಮದಲ್ಲಿ ಓದಿದಂತವರಿಗೆ ಮೆಡಿಕಲ್ ಮತ್ತು ಇಂಜನಿಯರಿಂಗ್‌ನಲ್ಲಿ, ಡೆಂಟಲ್ ಕೋರ್ಸುಗಳಲ್ಲಿ ಶೇ 5 ರಷ್ಟು ಒಳಮೀಸಲಾತಿಯನ್ನು ನೀಡುವಂತೆ ತೀರ್ಮಾನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಒತ್ತಾಯದಿಂದಲೇ ಸರ್ಕಾರ ತೆಗೆದುಕೊಂಡಿರೋದು.

ಇದರಿಂದ ಪ್ರತಿವರ್ಷ ಸುಮಾರು 1500 ಬಡ ಮಕ್ಕಳಿಗೆ ಉಚಿತವಾಗಿ ಸೀಟುಗಳು ಸಿಗ್ತಾ ಇವೆ. ನನಗೆ ಆಟೋ ಡ್ರೈವರುಗಳು, ಕೂಲಿ ಮಾಡೋರು ಪತ್ರ ಬರೆದಿದ್ದಾರೆ, ನನ್ನತ್ರ ಇದೆ. ಅವರಲ್ಲಿ ಸಂತೋಷ ಇದೆ. ಅಂದರೆ ಈ ಕ್ರಮ ಇದೆಯಲ್ಲ ಇದರಿಂದ ಎಲ್ಲಾ ವಿಭಾಗಗಳಿಗೂ ಸ್ಪರ್ಧೆ ನೀಡಲಾಗದೇ, ಅಲ್ಲೆಲ್ಲೂ ಸಿಗದಿದ್ದಾಗ ಕನ್ನಡ ಮಾಧ್ಯಮವನ್ನು ಕೊನೆಯಲ್ಲಿ ಪರಿಗಣಿಸುತ್ತಾರೆ. ಹಾಗಾಗಿ ಬಡ ಹುಡುಗರೂ, ಸ್ವಲ್ಪ ಕಡಿಮೆ ಅಂಕ ಪಡೆದಿರುವವರಿಗೆ ಸಹಾ ಇಂಜಿನಿಯರಿಂಗ್ ಸೀಟು, ಮೆಡಿಕಲ್ ಸೀಟು, ಡೆಂಟಲ್ ಸೀಟು ಸಿಕ್ಕಿರೋದು. ಈ ತರದ ಒಂದು ನೀತಿ ಅನುಷ್ಠಾನಕ್ಕ ಬಂದು ಬಿಟ್ಟಿದೆ. ಅನುಷ್ಠಾನಕ್ಕೆ ಬರದೇ ಇರೋ ತೀರ್ಮಾನ ಅಲ್ಲ ಅದು. ಈ ಎರಡು ವರ್ಷದಿಂದ ಅನುಷ್ಟಾನಕ್ಕೆ ಬಂದಿದೆ. ಈ ರೀತಿಯ ದೇಶದ ಯಾವುದೇ ಭಾಗದಲ್ಲಿಲ್ಲ. ಇದನ್ನು ಮತ್ತೆ ನಾವೇನು ಮಾಡಿದ್ವಿ, ಇತರೆ ಎಲ್ಲಾ ಕೋರ್ಸುಗಳಿಗೂ ಅನ್ವಯಿಸಬೇಕು ಅಂತ ತೀರ್ಮಾನ ಆಯ್ತು ಇತ್ತೀಚಿಗೆ. ಈ ವರ್ಷ ಇತರ ಎಲ್ಲಾ ಕೋರ್ಸುಗಳಿಗೂ ಅನ್ವಯಿಸಿದರು. ನೀವು ಎಂ.ಎ., ಎಂ.ಎಸ್ಸಿ.ಗೆ ಹೋಗಿ, ಎಂ.ಟೆಕ್‌ಗೆ ಹೋಗಿ ಅಲ್ಲೆಲ್ಲಾ ಕನ್ನಡ ಮಾಧ್ಯಮದವರಿಗೆ ಇಂತಿಷ್ಟು ಸೀಟು ಅಂತ ಇಟ್ಟಿದ್ದಾರೆ. ಇದು ಸಹಾ ದೇಶದ ಯಾವುದೇ

ಪುಟ 8 ಕ್ಕೆ

# ಕನ್ನಡ ಅನುಷ್ಠಾನದ ಪ್ರಗತಿ ಗಮನಾರ್ಹ - ಬರಗೂರು

ಪುಟ 7 ರಿಂದ

ಭಾಗದಲ್ಲೂ ಅವರ ಭಾಷೆಗೆ ಈ ಥರದ ಮಾನ್ಯತೆ ಇಲ್ಲ. ಇನ್ನು ಮೂರನೆಯದು ಇತ್ತೀಚಿಗೆ ತೀರ್ಮಾನ ಆಗಿದೆ, ಇನ್ನು ಮುಂದೆ ಅನುಷ್ಠಾನಕ್ಕೆ ಬರುತ್ತೇ ಅದು. ಉದ್ಯೋಗದಲ್ಲೂ ಕನ್ನಡ ಮಾಧ್ಯಮದವರಿಗೆ ಮೀಸಲಾತಿ ನೀಡುವುದು. ಈ ಮೂರು ಬಹಳ ಮುಖ್ಯವಾದ ಕ್ರಮಗಳು. ಇದು ಜೊತೆಗೆ ಇನ್ನೊಂದು ಮುಖ್ಯವಾದ ಕ್ರಮ ನನಗನ್ನಿಸೋದು ಇಂಜಿನಿಯರಿಂಗ್ ಮತ್ತು ಮೆಡಿಕಲ್‌ಗಳಲ್ಲೂ ಒಂದು ವರ್ಷದವರೆಗೆ ಕನ್ನಡವನ್ನು ಕಲಿಯೋದಕ್ಕೆ ಬೇಕಾದಂತಹ ನೀತಿಯನ್ನು ರೂಪಿಸಿ ಈ ವರ್ಷದಿಂದ ಅದನ್ನು ಅನುಷ್ಠಾನಕ್ಕೆ ತಂದಿದೆ. ಅನೇಕ ಜನ ಕನ್ನಡ ಎಂ.ಎ. ಓದಿದವರಿಗೆ ಕೆಲಸ ನೀಡ್ತಾ ಇದೆ ಅನ್ನೋದು ಒಂದಂಶ ಅಷ್ಟೆ. ಆದರೆ ಹೊರ ರಾಜ್ಯದಿಂದ ಬಂದವರು ಕನ್ನಡ ಕಲಿಯೋದಕ್ಕೆ ಏನು ಬೇಕೋ ಆ ತರದ ಪಠ್ಯ. ಈ ರಾಜ್ಯದವರು ಒಂದು ಸಾಂಸ್ಕೃತಿಕ ಕನ್ನಡ ಕಲಿಯಬೇಕಾದ ಪಠ್ಯ. ಈ ಎರಡೂ ಪ್ರತ್ಯೇಕವಾಗಿ ಇಟ್ಟಿದ್ದೇನೆ. ಹೊರ ರಾಜ್ಯದವರಿಗೆ ಯಾಕೆ ಅಂತ ಕೇಳಬಹುದು. ನಾವೇಳೋದು ಒಂದು ಭಾಷೆ ಜನರನ್ನು ದೂರ ಮಾಡೋ ಬದಲು ಜನರನ್ನು ಹತ್ತಿರ ಮಾಡಬೇಕು. ಹೊರ ರಾಜ್ಯದ ವಿದ್ಯಾರ್ಥಿಗಳು ಕನ್ನಡ ಕಲಿಯೋದರ ಮುಖಾಂತರ ಇಲ್ಲಿ ಏನು ಐದು ವರ್ಷ ಇರ್ತಾರೆ ಇಲ್ಲಿ ಜನಕ್ಕೆ ಹತ್ತಿರ ಆಗ್ತಾರೆ. ಒಬ್ಬ ವೈದ್ಯಕೀಯ ವಿದ್ಯಾರ್ಥಿ ತಾನು ಹೌಸ್ ಸರ್ಜನ್ಶಿ ಮಾಡೋವಾಗ ಆಸ್ಪತ್ರೆಗೋದ್ರೆ ರೋಗಿಗಳನ್ನು ಕನ್ನಡದಲ್ಲಿ ಮಾತಾಡಿಸಲಿಕ್ಕೆ ಸಾಧ್ಯ ಆಗಬೇಕು. ಇಂಜಿನಿಯರಿಂಗ್ ವಿದ್ಯಾರ್ಥಿ ಫೀಲ್ಡ್ ವರ್ಕ್‌ಗೆ ಹೋದಾಗ ಅಲ್ಲಿರತಕ್ಕಂತಹ ಕೆಲಸಗಾರರ ಜೊತೆ ಕನ್ನಡದಲ್ಲಿ ಮಾತಾಡೋದಿಕ್ಕೆ ಸಾಧ್ಯವಾಗಬೇಕು. ಇದರಿಂದ ಒಂದು ಸಾಮರಸ್ಯ ಬೆಳೆಯುತ್ತದೆ. ಈ ತರದ ಕ್ರಮ ಇಂಜಿನಿಯರಿಂಗ್, ಮೆಡಿಕಲ್‌ಗಳಲ್ಲಿ, ದೇಶದ ಯಾವುದೇ ಭಾಗದಲ್ಲಿ ಅವರವರ ಭಾಷೆಯನ್ನು ಪಠ್ಯ ವಿಷಯವಾಗಿಟ್ಟಿಲ್ಲ.



ಕರ್ನಾಟಕದಲ್ಲಿಟ್ಟಿದ್ದೇವೆ. ಇದನ್ನೆಲ್ಲಿ ಕನ್ನಡದ ಕೆಲಸ ಅಲ್ಲಿ ಅಂತ ಯಾರಾದರೂ ಹೇಳೋದಾದರೆ ಇವರ ಕನ್ನಡ ಅಭಿಮಾನದ ಬಗ್ಗೇನೇ ಬಹಳ ದೊಡ್ಡ ಅನುಮಾನ ಹುಟ್ಟುತ್ತೆ. ಹಾಗಾಗಿ ಕನ್ನಡದ ಕೆಲಸ ಅನ್ನೋದು ರಚನಾತ್ಮಕವಾಗಿರಬೇಕು. ರಚನಾತ್ಮಕವಾಗದದ್ದೇ ನಿಜವಾದ ಕನ್ನಡದ ಕೆಲಸ. ಕನ್ನಡದ ಬಗ್ಗೆ ಬಹಳ ಮಾತಾಡಿದ್ದೀವಿ. ಈ ತರದ ಕೆಲಸಗಳಲ್ಲಿ ಅನೇಕವನ್ನು ನಾವು ಹೀಗೇ ಯೋಜಿಸಬೇಕು ಅಂತ ನನಗನ್ನಿಸುತ್ತೆ. ಬರಿ ಓದಿ ಅಂತ ಹೇಳೋದಲ್ಲ. ಓದಿದರೂ ನಿನಗೊಂದು ಬದುಕಿದೆ, ಇಲ್ಲೇಲ್ಲೋ ನಿನಗೂ ಒಂದು ಆತ್ಮವಿಶ್ವಾಸವಿದೆ, ನಿನಗೆ ಕೀಳರಿಮೆ ಪಡಬೇಕಾಗಿಲ್ಲ, ಅನ್ನೋ ಅಂತಹ ವಾತಾವರಣ. ಇನ್ನು ಜಾಗತೀಕರಣ ಬಗ್ಗೆ ಹೇಳದಿರಲ್ಲ, ಜಾಗತೀಕರಣದ ನಂತರದಲ್ಲಿ ಕನ್ನಡ ಅಷ್ಟೇ ಅಲ್ಲ, ದೇಶದ ಎಲ್ಲಾ ಪ್ರಾದಶಿಕ ಭಾಷೆಗಳೂ ಆ ಸವಾಲನ್ನು ಎದುರಿಸುತ್ತಾ ಇವೆ. ಆಮೇಲೆ ಇಂಗ್ಲೀಷ ಲ್ಲದೆ ಬದುಕೋದಕ್ಕೆ ಸಾಧ್ಯವಿಲ್ಲವೇನೋ ಎಂಬಂತಹ ಭ್ರಮೆಯನ್ನು ಹಿಂದೆ ಬೆಳೆಸುತ್ತಾ ಇದ್ದರು, ಜಾಗತೀಕರಣದ ಪ್ರಭಾವದಿಂದಲಂತೂ ಹೆಚ್ಚೆಚ್ಚು ಬೆಳೆಸುತ್ತಾ ಇದ್ದಾರೆ. ಅದರಲ್ಲೂ ನಮ್ಮ ಮಾಹಿತಿ ತಂತ್ರಜ್ಞಾನದ ಅಧ್ವರ್ಯರುಗಳು ಎನಿಸಿದ್ದಾರೆ, ಅಧ್ವರ್ಯರು ಅಂತ ಕರೀಬಾರ್‍ದು ಈ ಉದ್ಯಮಿಗಳೇನಿದ್ದಾರೆ, ಆ ಉದ್ಯಮಿಗಳು ಇಂಗ್ಲೀಷಿನಲ್ಲೇ ಇದಾರೆ. ಮಾಹಿತಿ ತಂತ್ರಜ್ಞಾನವೇ ಇಲ್ಲವೇನೋ ಅನ್ನುವಂತಹ ಒಂದು ವಾತಾವರಣ ಮೂಡಿಸೋದಕ್ಕೆ ಪ್ರಯತ್ನ ಮಾಡಿದ್ದಾರೆ. ಇವತ್ತು ನನಗೀಗ ಅನ್ನಿಸ್ತ್ತೆ, ಜಾಗತೀಕರಣ ಬಂದ ಮೇಲೆ ಭಾಷೆ ಸಂಸ್ಕೃತಿ ಈ ವಿಚಾರಗಳಷ್ಟೇ ಅಲ್ಲ, ಪ್ರಧಾನವಾಗಿ ಆರ್ಥಿಕ ನೀತಿಗಳನ್ನು ಆಡಳಿತದ ಕೆಲವು ಮುಖ್ಯವಾದ ಅಂಶಗಳನ್ನು, ಪ್ರಜಾಸತ್ತಾತ್ಮಕ ಸರ್ಕಾರಗಳಿಗಿಂತ ಉದ್ಯಮಪತಿಗಳು ನಿಯಂತ್ರಿಸುತ್ತಾ ಇದ್ದಾರೆ ಅನ್ನಿಸ್ತ್ತೆ.

ಈ ಉದ್ಯಮಪತಿಗಳು ಭಾಷಾ ನೀತಿ ಏನಿರಬೇಕು ಅಂತ ಹೇಳೋಕೆ ಶುರುಮಾಡಿದ್ದಾರೆ. ಆಮೇಲೆ ಈ ಜಾಗತೀಕರಣದಿಂದ ಸಾಂಸ್ಕೃತಿಕವಾಗಿ ತನ್ನದೇ ಆದ ಒಂದು ಬೇರೆ ರೀತಿಯ ಪರಿಣಾಮ ಉಂಟಾಗುತ್ತಿದೆ. ಆರ್ಥಿಕ ನೀತಿ ಹೇಗಿರಬೇಕು ಅಂತ ಹೇಳೋಕೆ ಶುರುಮಾಡಿದ್ದಾರೆ. ಹಾಗಾದರೆ ಪ್ರಜಾಸತ್ತಾತ್ಮಕವಾದ ಸರ್ಕಾರಗಳ ಪ್ರಸ್ತುತತೆ ಏನು ಅನ್ನೋದೆ ನನಗೆ ಇಲ್ಲಿ ಪ್ರಶ್ನೆ. ಇದು ಒಂದು ಸಾಮಾನ್ಯವಾದ ಗಟ್ಟಿಯಾದ ಪ್ರಶ್ನೆ. ಆದರೆ ಭಾಷೆ ವಿಷಯಕ್ಕೆ ಬಂದಾಗ ಅವರೇಳೋದು ಇದೆಯಲ್ಲ ಅದು ಅಪ್ಪಟ ಸುಳ್ಳು. ನಾನು ಕನ್ನಡದ ಪರವಾಗಿ ಮಾತಾಡ್ತೀವಿ ಅಂತಾ ಇಂಗ್ಲೀಷನ್ನು ವಿರೋಧಿಸೋದಿಲ್ಲ. ನನ್ನ ನಿಲುವೇನೆಂದರೆ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮ ಅಥವಾ ಮಾತೃಭಾಷೆ ಮಾಧ್ಯಮ, ಮುಸ್ಲಿಮರು ಅವರ ಉರ್ದು ಭಾಷೆಯಲ್ಲಿ ಪ್ರಾಥಮಿಕ ಹಂತದಲ್ಲಿ ಕಲೀಬೇಕು. ಕನ್ನಡ ಮಾತೃಭಾಷೆಯಾಗಿರುವವರು ಕನ್ನಡದಲ್ಲಿ ಅವರ ಪ್ರಾಥಮಿಕ ಹಂತದಲ್ಲಿ ಕಲೀಬೇಕು. ಆದರೆ ಅದರಜೊತೆಗೆ ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲೀಬೇಕು ಅನ್ನೋದು ನನ್ನ ನಿಲುವು. ನಾನು ಅದನ್ನೇ ಪ್ರತಿಪಾದಿಸುತ್ತಾ ಇದ್ದೇನೆ.

# ಜಮ್ಮು ಮತ್ತು ಕಾಶ್ಮೀರ..............

ಪುಟ 5 ರಿಂದ

ರೂಪಿಸಲಾಗುವುದು. ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಮತ್ತು ವಿರೋಧ ಪಕ್ಷದ ನಾಯಕರೊಂದಿಗೆ ಚರ್ಚಿಸಿ, ಈ ನೇಮಕ ಆಗಲಿದೆ. ಪೋಲಿಸ್ ಇಲಾಖೆ ಮತ್ತು ಆಡಳಿತ ಸುಧಾರಣೆಯ ಕ್ರಮ ಜರುಗಿಸಲಾಗುವುದು.

ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಉಲ್ಲೇಖಿಸಲಾಗಿರುವ ಇತರೆ ಅಂಶಗಳೆಂದರೆ ರಾಜ್ಯದ ಮೂರು ಪ್ರದೇಶಗಳಿಗೂ ಅಭಿವೃದ್ಧಿ ಸಂಪನ್ಮೂಲಗಳನ್ನು ಸಮಾನಾಂತರವಾಗಿ ರಾಜ್ಯ ಹಣಕಾಸು ಆಯೋಗದ ಮೂಲಕ ಹಂಚುವುದು. ಪ್ರತಿಯೊಂದು ಕುಟುಂಬಕ್ಕೂ ಕನಿಷ್ಟ ಒಂದು ಉತ್ಪಾದಕ ಉದ್ಯೋಗ ಒದಗಿಸುವ ಮೂಲಕ ಉದ್ಯೋಗಾವಕಾಶಗಳ ಸೃಷ್ಟಿ, ಸಾಂಪ್ರದಾಯಿಕ ಕೈಗಾರಿಕೆ ಮತ್ತು ಪ್ರವಾಸೋದ್ಯಮ ಪುನರುಜ್ಜೀವನಗೊಳಿಸುವುದು, ವಿದ್ಯುತ್ ಸಂಪನ್ಮೂಲಗಳ ಅಭಿವೃದ್ಧಿ, ಸಾರ್ವತ್ರಿಕ ಸಾಮಾನ್ಯ ಶಿಕ್ಷಣ ಒದಗಿಸಲು ಕ್ರಮ, ಹಿಂದುಳಿದ ವಿಭಾಗಗಳಾದ ಗುಜ್ಜಾರ್, ಬಕರ್‌ವಾಲ್ಸ್, ಗದ್ದಿಸ್ ಮತ್ತಿತರ ಜನ ವಿಭಾಗಗಳ ಕಲ್ಯಾಣ, ಮತ್ತು ಕನಿಷ್ಟ ಮಾನವ ಅಗತ್ಯತೆಗಳನ್ನು ಒದಗಿಸುವುದಾಗಿದೆ.

'ಲೆಹ್ ಪ್ರದೇಶದ ಸ್ವಾಯತ್ತ ಗುಡ್ಡಗಾಡು ಮಂಡಳಿ'ಯ ನ್ಯಾಯಬದ್ಧ ಅಧಿಕಾರಗಳನ್ನು ಮೊಟಕುಗೊಳಿಸಲಾಗಿರುವುದನ್ನು ಪರಿಗಣಿಸಿದ ಸಿಎಂಪಿಯು ಪೂರ್ಣ ಅಧಿಕಾರ ಒದಗಿಸುವ ಭರವಸೆ ನೀಡಿದೆ. ಕಾರ್ಗಿಲ್ ಪ್ರದೇಶದ ಜನತೆಯನ್ನು ಸಹಾ ಅಂತಹದೇ ಮಂಡಳಿ ರಚನೆಯನ್ನು ಅಂಗೀಕರಿಸಲು ಉತ್ತೇಜಿಸಲಾಗುವುದು. ಈ ಘೋಷಣೆಗಳ ಜೊತೆಯಲ್ಲೆ ಡೋಗ್ರಿ ಪ್ರದೇಶವನ್ನು ಎಂಟನೇ ಶೆಡ್ಯೂಲ್‌ಗೆ ಸೇರಿಸಲು ಕೇಂದ್ರವನ್ನು ಒತ್ತಾಯಿಸುವ ಅಂಶಗಳು ಜಮ್ಮು ಮತ್ತು ಲಡಾಕ್ ಜನತೆಯ ಭಾವನೆಗಳನ್ನು ಗೌರವಿಸುವಲ್ಲಿ ದೊಡ್ಡ ಪಾತ್ರ ವಹಿಸಲಿದೆ.

**ಮೂಲಭೂತ ದೌರ್ಬಲ್ಯಗಳು**

ಸಿಎಂಪಿಯಲ್ಲಿ ಘೋಷಿಸಲಾಗಿರುವ, ಈ ಎಲ್ಲಾ ಅಂಶಗಳು ಖಂಡಿತವಾಗಿಯೂ ಸಕಾರಾತ್ಮಕವಾದವು, ಸಿಪಿಐ(ಎಂ) ಇವುಗಳಿಗಾಗಿ ಒತ್ತಾಯಿಸುತ್ತಾ ಬಂದಿರುವ ಕಾರಣ ಅದನ್ನು ಸ್ವಾಗತಿಸುತ್ತದೆ. ಈ ಅಂಶಗಳನ್ನು ಪ್ರಾಮಾಣಿಕವಾಗಿ ಅದು ಜಾರಿ ಮಾಡಿದಲ್ಲಿ ಜನತೆ ಬೆಂಬಲ ಹಾಗೂ ವಿಶ್ವಾಸವನ್ನು ಮೈತ್ರಿಕೂಟ ಪಡೆಯಲಿವೆ. ಹಿಂದಿನ ಸರ್ಕಾರದ ಕಹಿ ಅನುಭವಗಳಿಂದ, ನೂತನ ಸರ್ಕಾರ ಪಾಠ ಕಲಿಯುತ್ತದೆಯೆ ಎಂಬುದು ಇಲ್ಲಿ ಪ್ರಮುಖ.

ಅಕ್ಟೋಬರ್ 29ರ 'ಏಷ್ಯನ್ ಏಜ್' ಪತ್ರಿಕೆಯ ಪ್ರಕಾರ ಹುರಿಯತ್ ನಾಯಕರಾದ ಮಿರ್‌ವೈಜ್ ಮೌಲ್ವಿ ಓಮರ್ ಫರೂಕ್ ಸಹಾ ಎಚ್ಚರಿಕೆಯೊಂದಿಗೆ ಸಿಎಂಪಿಯನ್ನು ಸ್ವಾಗತಿಸಿದ್ದಾರೆ. ಇದು ಸಿಎಂಪಿಯ ಶಕ್ತಿಯನ್ನು ತೋರಿಸುತ್ತದೆ. ಸಿಎಂಪಿಯ ಪ್ರಾಮಾಣಿಕ ಜಾರಿಗೊಳಿಸುವಿಕೆ ಶಾಂತಿ ಪ್ರಕ್ರಿಯೆ ಹಳಿ ತಪ್ಪದಂತೆ ಖಾತ್ರಿ ಪಡಿಸಲಿದೆ ಎಂಬ ಮಾತುಗಳನ್ನು ಮಿರ್ ವೈಜ್ ಸರಿಯಾಗಿಯೆ ಹೇಳಿದ್ದಾರೆ.

**ಆದರೂ ಸಹಾ ಸಿಎಂಪಿ ಒಂದು ಪ್ರಮುಖ ದೌರ್ಬಲ್ಯದಿಂದ ಸೊರಗಿದೆ. ನೂತನ ಸರ್ಕಾರ ಏನೆಲ್ಲಾ ಸಾಧಿಸಿದರೂ ಸಹಾ ಆ ದೌರ್ಬಲ್ಯದಿಂದಾಗಿ ಎಲ್ಲಾ ಸಾಧನೆಗಳು ಗೌಣವಾಗಲಿವೆ. ಕಾಶ್ಮೀರ ಸಮಸ್ಯೆಯ ಮೂಲದಲ್ಲಿರುವ 'ಸ್ವಾಯತ್ತತೆಯ ಪ್ರಶ್ನೆಯನ್ನು' ಪೂರ್ಣವಾಗಿ ಸಿಎಂಪಿ ನಿರ್ಲಕ್ಷಿಸಿದೆ.** ಸ್ವಾಯತ್ತತೆ ಎಂಬ ಪದ ಬರುವುದು ಕೇವಲ ಪ್ಯಾರಾ 2ರಲ್ಲಿ ಮಾತ್ರ, ಅದೂ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾರ್ಯವಿಧಾನ ಸ್ವಾಯತ್ತತೆಗೆ ಸಂಬಂಧಿಸಿದಂತೆ ಮಾತ್ರ.

ರಾಜ್ಯಕ್ಕೆ ಒಟ್ಟಾರೆಯಾಗಿ ಕನಿಷ್ಠ ಸ್ವಾಯತ್ತತೆಯಿಲ್ಲದಿರುವಾಗ, ಸ್ಥಳೀಯ ಸಂಸ್ಥೆ ಹೇಗೆ ತಾನೆ ಹೆಚ್ಚು ಪಡೆಯಲು ಸಾಧ್ಯ? ಕಳೆದ ಐವತ್ತು ವರ್ಷಗಳಲ್ಲಿ ಸಂವಿಧಾನದ ಪರಿಚ್ಛೇದ 370 ತನ್ನ ಪ್ರಾಮುಖ್ಯತೆಯನ್ನೆ ಕಳೆದುಕೊಳ್ಳುವಷ್ಟು, ಯಾವ ಸ್ವಾಯತ್ತತೆಯನ್ನು ರಾಜ್ಯ ಕಳೆದುಕೊಂಡಿದೆ. ಅದನ್ನು ಗರಿಷ್ಠ ಪ್ರಮಾಣದಲ್ಲಿ ಮರು ಪಡೆಯುವುದಕ್ಕೆ ಶ್ರೀನಗರದಲ್ಲಿ ರಚಿಸಲಾಗುವ ಯಾವುದೇ ಸರ್ಕಾರ ಯತ್ನಿಸಬೇಕು. ವಾಸ್ತವದಲ್ಲಿ ಸಾಧ್ಯವಿರುವ ಪೂರ್ಣಪ್ರಮಾಣದ ಸ್ವಾಯತ್ತತೆಯನ್ನು ರಾಜ್ಯಕ್ಕೆ ನೀಡಿ, ಅದನ್ನು ರಾಜ್ಯದ ಮೂರು ಪ್ರದೇಶಗಳಿಗೆ ಸಮರ್ಪಕವಾಗಿ ಕೊಡಮಾಡುವುದರ ಮೂಲಕ ಭಾರತ ಒಕ್ಕೂಟ ಕುರಿತಂತೆ ಜನತೆಯಲ್ಲಿರುವ ಪರಕೀಯತೆಯನ್ನು ತೊಡೆದುಹಾಕಿ ಅವರ ವಿಶ್ವಾಸ ಗಳಿಸಿ ಆ ಮೂಲಕ, ಪ್ರಸ್ತುತ ಸಮಸ್ಯೆಗೆ ದೀರ್ಘಾವಧಿ ಪರಿಹಾರ ರೂಪಿಸಬೇಕಿದೆ.

1993 ರಲ್ಲಿ ನ್ಯಾಷನಲ್ ಕಾನ್ಫರೆನ್ಸ್‌ನೊಂದಿಗೆ ಮಾತುಕತೆ ಮುರಿದುಬಿದ್ದದು ಬೇರೆಯೇ ಕಥೆ ನಡೆಸುವಾಗ ಅಂದಿನ ಪ್ರಧಾನಿ ನರಸಿಂಹರಾಯರು ಸ್ವಾಯತ್ತತೆ ಕುರಿತಂತೆ 'ಅಕಾಶ ಮಾತ್ರವೇ ಮಿತಿ' ಎಂಬ ಭರವಸೆ ನೀಡಿದ್ದನ್ನು ಕಾಂಗ್ರೆಸ್ ಕೂಡ ಮರೆತಂತಿರುವುದು ವಿಪರ್ಯಾಸವೇ ಸರಿ.

ರಾಜ್ಯಕ್ಕೆ ಸ್ವಾಯತ್ತತೆ ನೀಡುವಿಕೆ ಕಾಶ್ಮೀರದ ಕಣಿವೆಗೆ ಮಾತ್ರ ಹೆಚ್ಚು ಲಾಭ ಒದಗಿಸುವುದು ಎಂಬ ಉದ್ದೇಶಪೂರ್ವಕ ಪ್ರಚಾರವನ್ನು ಜಮ್ಮು ಮತ್ತು ಕಾಶ್ಮೀರದ ನೂತನ ಸರ್ಕಾರವನ್ನು ಒಳಗೊಂಡಂತೆ ಎಲ್ಲಾ ದೇಶಪ್ರೇಮಿಗಳು ಎದುರಿಸಬೇಕಿದೆ. ವಾಜಪೇಯಿ, ಅಡ್ವಾನಿ ಮತ್ತಿತರೆ ಬಿಜೆಪಿ ನಾಯಕರನ್ನು ರಾಜ್ಯ ಸರ್ಕಾರವು, ಕಾವಿ ಪಡೆಗಳ ತ್ರಿಭಜನಾ ಸೂತ್ರದ ಮಾತುಗಳಿಗೆ ಕಡಿವಾಣ ಹಾಕುವಂತೆ ಕೇಳಬೇಕಿದೆ. ಆ ಮೂಲಕ ಅಲ್ಲಿನ ಜನತೆಯ ಆತಂಕಗಳನ್ನು ನಿವಾರಿಸಬೇಕಿದೆ. ವಿಚ್ಛಿದ್ರಕಾರಿ ಶಕ್ತಿಗಳನ್ನು ತಹಬಂದಿಗೆ ತರಲು, ಕೋಮುವಾದಿ ಶಕ್ತಿಗಳನ್ನು ದೇಶದಲ್ಲಿ ಅಡಗಿಸಬೇಕಿದೆ.

# .....ಐದು ದಲಿತರ ಕಗ್ಗೊಲೆ

ಪುಟ 4 ರಿಂದ

ಅವುಗಳನ್ನು ನಿಷೇಧಿಸಬೇಕು ಅದರ ಮುಖಂಡರನ್ನು ದಸ್ತಗಿರಿ ಮಾಡಬೇಕೆಂದು, ಈ ಕೊಲೆ ನಡೆಯುವಾಗ ಸ್ಥಳದಲ್ಲೇ ಇದ್ದ ಪೋಲೀಸ್ ವರಿಷ್ಠಾಧಿಕಾರಿಗಳು ದಲಿತರ ರಕ್ಷಣೆ ಒದಗಿಸದೆ, ಕಂಡು ಕಾಣದಂತೆ ಮೌನವಾಗಿದ್ದುದನ್ನು ತನಿಖೆಗೆ ಒಳಪಡಿಸಬೇಕು, ಈ ಘಟನೆಯಲ್ಲಿ ಹತ್ಯೆಗೀಡಾದ ಕುಟುಂಬಗಳಿಗೆ ತಲಾ 5 ಲಕ್ಷ ಪರಿಹಾರ ನೀಡಬೇಕೆಂದು ಸಿ.ಪಿ.ಐ(ಎಂ) - ಸಿ.ಪಿ.ಐ ಜಂಟಿ ನಿಯೋಗ ಒತ್ತಾಯಿಸಿದೆ.

ಬದಾಶಯ ಗ್ರಾಮಕ್ಕೆ ನಿಯೋಗ ಭೇಟಿ ನೀಡಿದಾಗ, ಸತ್ತವರ ಬಗೆಗೆ ಜನರಲ್ಲಿ ತುಂಬಾ ಒಳ್ಳೇ ಅಭಿಪ್ರಾಯ ಕಂಡು ಬಂದಿದೆ. ಅವರು ಚರ್ಮದ ವ್ಯಾಪಾರ ಮಾಡುತ್ತಿದ್ದು ಸರ್ಕಾರದಿಂದ ಅಧಿಕೃತ ಪರವಾನಗಿ ಪಡೆದವರಾಗಿದ್ದಾರೆ. ಭಿಡಿಓ ದಿಂದ ಪ್ರಶಸ್ತಿ ಸಹ ಸಿಕ್ಕಿದೆ.

ಹತ್ಯೆಗೊಳಗಾದವರ ಸಹೋದರ ಹೇಳುವಂತೆ 'ತಮ್ಮ ಅಣ್ಣಂದಿರು ಅಪಘಾತದಲ್ಲಿ ಸತ್ತರೆಂದು ಪೋಲೀಸರು ಸುದ್ದಿ ಮುಟ್ಟಿಸಿದರು. ಜಿಲ್ಲಾ ಆಸ್ಪತ್ರೆಗೆ ಹೋದಾಗ ಹೊಡೆದು ಸಾಯಿಸಿದ್ದು ಕಂಡುಬಂತು.. ನೀವು ಕ್ರಿಮಿನಲ್ ಕಡೆಯವರೆಂದು ಬೈಯ್ದು ಹೆಣ ಮುಟ್ಟಲೂ ಬಿಡಲಿಲ್ಲ.... ಹೆಣ ಸಾಗಿಸುವಾಗ FIR ಅಥವಾ ಯಾವುದೇ ಪತ್ರ ನೀಡದೆ ಹೊರಗಟ್ಟಿದರು' ಎನ್ನುತ್ತಾರೆ. ಇಂತಹ ಭೀಕರ, ಬರ್ಬರ ದಲಿತರ ಕೊಲೆಗಳನ್ನು ಮುಚ್ಚಲು, ಅಧಿಕಾರಸ್ಥರು ನಡೆಸುತ್ತಿರುವ ಸಂಚುಗಳೇನು ಎಂಬುದು ಗೊತ್ತಾಗುತ್ತದೆ. ಗೋವುಗಳನ್ನು ರಕ್ಷಿಸುವೆವು ಎಂದು ಉದಾತ್ತ ಸಂಸ್ಕೃತಿಯ ಮಾತನಾಡುವವರ ಮನುಷ್ಯ ದ್ವೇಷಿ-ದಲಿತಕಡುವಿರೋಧದ ಅಮಾನವೀಯ ಮುಖ ಬಯಲಾಗುತ್ತದೆ.

ಈ ಘಟನೆ ಖಂಡಿಸಿ ದೆಹಲಿಯಲ್ಲಿ ಬೆಂಗಳೂರಿನಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಪ್ರತಿಭಟಿಸಿದೆ.

# "ಆಡಳಿತ ಭಾಷೆ ಅನುಷ್ಠಾನದಲ್ಲಿ ಬದ್ಧತೆಯಿಲ್ಲ"

- ಪ್ರೊ. ಚಂದ್ರಶೇಖರ್ ಪಾಟೀಲ

**ಕನ್ನಡದ ಖ್ಯಾತ ಬಂಡಾಯ ಸಾಹಿತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಹರಿತ ಮಾತಿಗೆ ಹೆಸರಾದ ಪ್ರೊ. ಚಂದ್ರಶೇಖರ್ ಪಾಟೀಲರು ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನ ಕುರಿತು ಐಕ್ಯರಂಗಕ್ಕಾಗಿ ಸಂದರ್ಶನ ನೀಡಿದರು. ಆ ಸಂದರ್ಶನದ ಪ್ರಮುಖ ಅಂಶಗಳು ಇಲ್ಲಿ ನೀಡಲಾಗಿದೆ.**

**ಸಂದರ್ಶನ-ಲೇಖನ: ಎಂ.ಜಯರಾಮು**

ಭಾರತ ದೇಶವನ್ನು ಭಾಷೆ ಮತ್ತು ಸಂಸ್ಕೃತಿಯ ಆಧಾರದಲ್ಲಿ ಮರು ವಿನ್ಯಾಸಗೊಳಿಸಲು 1956 ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಯಾಯಿತು. ಅರ್ಥಾತ್ ವಿಕೇಂದ್ರೀಕರಣದತ್ತ ಇಟ್ಟ ಹೆಜ್ಜೆ ಅದು. ಅದಕ್ಕಾಗಿ ಹಲವು ಹೋರಾಟಗಳು ನಡೆದವು. ಅದರ ತಾತ್ವಿಕ ಉದ್ದೇಶ ಅಲ್ಲಲ್ಲಿಯ ಭಾಷೆ ಆಡಳಿತ ಮಧ್ಯಬಿಂದುವಾಗಬೇಕು ಎನ್ನುವುದಾಗಿತ್ತು. ನಿಜವಾದ ಪ್ರಜಾಪ್ರಭುತ್ವ ಅರ್ಥಪಡೆಯಬೇಕೆಂದರೆ ಆಳುವವರ ಮತ್ತು ಆಳಲ್ಪಡುವವರ ನಡುವೆ ನೇರ ಸಂವಹನ ಬೇಕು. ಪಾರದರ್ಶಕತೆ, ತಿಳುವಳಿಕೆ ಮತ್ತು ವಿಶ್ವಾಸವೂ ಬೇಕು. ಇದನ್ನು ಸಾಧಿಸುವಂತಹ ಮಾಧ್ಯಮ ಭಾಷೆ. ಆ ದೃಷ್ಟಿಯಿಂದ 1956 ರಲ್ಲಿ ಸಂಸ್ಥಾನಗಳಲ್ಲಿ ಸಣ್ಣಸಣ್ಣ ರಾಜ್ಯಗಳಲ್ಲಿ ಹಂಚಿಹೋಗಿದ್ದ ನಾಡು 'ವಿಶಾಲ ಮೈಸೂರು' ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಾಗ ಅದು ಭಾರತದ ಒಕ್ಕೂಟ ಸ್ವರೂಪದ ಕಡೆಗಿಟ್ಟ ನಿಜವಾದ ಹೆಜ್ಜೆಯಾಗಿತ್ತು.

ಅಂದಿನಿಂದ ಇಂದಿನವರೆಗೆ ಅಧಿಕಾರಕ್ಕೆ ಬಂದ ಯಾವುದೇ ಪಕ್ಷ ಕನ್ನಡದ ಬಗ್ಗೆ ಪದ್ಧತೆ ಪ್ರದರ್ಶಿಸುವಲ್ಲಿ ಹಿಂದೆ ಬಿದ್ದಿಲ್ಲ. 'ಕನ್ನಡ ಕರ್ನಾಟಕದ ಆಡಳಿತ ಭಾಷೆ' ಯೆನ್ನುವ ಘೋಷಣೆ ಎಲ್ಲಾ ದಶಕಗಳಲ್ಲಿಯೂ ಕೇಳಿ ಬರುತ್ತಿದೆ.

ಪ್ರೌಢ ಶಾಲಾ ಪಠ್ಯ ಪುಸ್ತಗಗಳಲ್ಲಿ ಕನ್ನಡಕ್ಕೆ ಪ್ರಥಮ ಸ್ಥಾನವಿರಬೇಕೆಂದು ಶಿಫಾರಸ್ಸು ಮಾಡುವ ಮೂಲಕ ಗೋಕಾಕ್ ಸಮಿತಿಯು ಕನ್ನಡ ಭಾಷೆಗೆ ಸರಿಯಾದ ಸ್ಥಾನ ಕಲ್ಪಿಸಿತು. ಆದರೆ ಅದರ ಅನುಷ್ಠಾನದ ಬಗ್ಗೆ ಗುಂಡೂರಾವ್ ಸರ್ಕಾರ ತಳೆದ ನಿಲುವೆಯು ವಿರುದ್ಧ 1982 ಏಪ್ರಿಲ್‌ನಲ್ಲಿ ಧಾರವಾಡದಲ್ಲಿ 'ಕನ್ನಡ ಕ್ರಿಯಾ ಸಮಿತಿ' ರಚನೆಯಾಗಿ ಚಳುವಳಿಗೆ ನಾಂದಿಯಾಯಿತು.


1983 ರಲ್ಲಿ ಸುಮಾರಿನಲ್ಲಿ ನಡೆದ ಹಲವಾರು ಚಳುವಳಿಗಳು ಗುಂಡೂರಾವ್ ಸರ್ಕಾರವನ್ನು ಸೋಲಿಸಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಸರ್ಕಾರ ಅಧಿಕಾರಕ್ಕೆ ಬಂತು. ಅದು ಆಡಳಿತ ಭಾಷೆಯ ಅನುಷ್ಠಾನಕ್ಕಾಗಿ 'ಕನ್ನಡ ಕಾವಲು ಸಮಿತಿ' ರಚಿಸಿತು. ಅದರ ಮೊದಲ ಅಧ್ಯಕ್ಷರಾಗಿ ಸಿದ್ದರಾಮಯ್ಯ, ಜ್ಞಾನದೇವ ದೊಡ್ಡಮೇಟಿ, ಪಾಟೀಲ ಪುಟ್ಟಪ್ಪ ಮತ್ತು ಕೆ.ಹೆಚ್.ಶ್ರೀನಿವಾಸ್ ಕಾರ್ಯನಿರ್ವಹಿಸಿದರು.

ಆಗಲೇ ಅಸ್ತಿತ್ವದಲ್ಲಿದ್ದ ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನಕ್ಕಾಗಿ ಸರ್ಕಾರಿ ಆದೇಶಗಳಿಗೆ ಬಲ ತುಂಬುವಂತಹ, ಜೀವ ತುಂಬುವಂತಹ ಪ್ರಾಮಾಣಿಕ ಯತ್ನವನ್ನು ಅವರೆಲ್ಲರೂ ಮಾಡಿದರು. ಪ್ರಮುಖವಾಗಿ ಪಾಟೀಲ ಪುಟ್ಟಪ್ಪನವರು. ನಂತರದಲ್ಲಿ ಕೆಲಗೊಂದಲಗಳಿಂದಾಗಿ 'ಕನ್ನಡ ಕಾವಲು ಸಮಿತಿ' ವಿಸರ್ಜನೆಯಾಯಿತು.

**ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ**

ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ 1992 ರಲ್ಲಿ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ರಚನೆ ಯಾಯಿತು. ಅದರ ಮೊದಲ ಅಧ್ಯಕ್ಷರಾಗಿ ಜಿ.ನಾರಾಯಣ ನಂತರ ಖ್ಯಾತ ಶಿಕ್ಷಣ ತಜ್ಞ ಹೆಚ್.ನರಸಿಂಹಯ್ಯ, ಚಂದ್ರಶೇಖರ ಪಾಟೀಲ ಮತ್ತು ಬರಗೂರು ರಾಮಚಂದ್ರಪ್ಪ ಅಧ್ಯಕ್ಷರಾದರು. ಸಾಮಾಜಿಕ ವಾಗಿ, ಸಾಂಸ್ಕೃತಿಕವಾಗಿ ತಮ್ಮದೇ ಆದ ಕೊಡುಗೆ ನೀಡಿದ ಇವರು ತಮ್ಮ ಇತಿ-ಮಿತಿಗಳ ನಡುವೆ ಕನ್ನಡದ ಕೆಲಸ ಮಾಡಿದರು.

**ಆಡಳಿತದಲ್ಲಿ ಕನ್ನಡ ನಿರಾಸೆಗೆ ಕಾರಣಗಳಿಲ್ಲ**



ಇಂದು ಕನ್ನಡದ ಸ್ಥಿತಿ ಚಿಂತಾಜನಕ ಇತ್ಯಾದಿ ಮಾತನಾಡುವುದಕ್ಕೆ ಕಾರಣಗಳಿಲ್ಲ. 'ಆಡಳಿತದಲ್ಲಿ ಕನ್ನಡ' ಎಂದರೆ ಸರ್ಕಾರಿ ಆಡಳಿತದಲ್ಲಿ ಬೇರೆ ಬೇರೆ ಏಳು-ಬೀಳುಗಳಿವೆ.

ತಾಲ್ಲೂಕು, ಜಿಲ್ಲಾ ಮತ್ತು ವಿಭಾಗೀಯ ಮಟ್ಟಗಳಲ್ಲಿ ಕನ್ನಡದ ಬಳಕೆ ಪ್ರಮಾಣ ಶೇ 75-80 ರಷ್ಟಿದೆ. ಇದು ಕ್ರಮೇಣ ಸ್ವಲ್ಪ ಹೆಚ್ಚು ಆಗಲಿದೆ. ಈ ಹಂತಗಳಲ್ಲಿ ಸರ್ಕಾರಿ ಕಛೇರಿಗಳಲ್ಲಿ ಇಂಗ್ಲೀಷ್ ಬೆರಳಚ್ಚು ಯಂತ್ರಗಳಿಗೆ ಜಾಗವೇ ಇಲ್ಲವಾಗಿದೆ. ಬೆರಳಚ್ಚುಗಾರರು ಕನ್ನಡ ಬೆರಳಚ್ಚಿನಲ್ಲಿ ಉತ್ತೀರ್ಣರಾಗಿರಬೇಕೆಂಬ ನಿಯಮವಿದೆ.

ಗ್ರಾಮಾಂತರದ ಕನ್ನಡಿಗರು ಆಡಳಿತ ಭಾಷೆಗೆ ಹತ್ತಿರವಾಗಿದ್ದಾರೆ, ಅಲ್ಲಿ ಸಮಸ್ಯೆ ಇಲ್ಲ. ಆದರೆ ರಾಜಧಾನಿ ಬೆಂಗಳೂರಿಗೆ ಬಂದಾಗ ಕೆಲವು ಕಡೆ ಶೇ 60-65 ರಷ್ಟು ಆಡಳಿತ ಭಾಷೆಯಾಗಿ ಕನ್ನಡ ಬಳಕೆಯಲ್ಲಿದೆ.

ಸಚಿವಾಲಯ ಮತ್ತು ಮಂತ್ರಿಗಳ ಕಛೇರಿಯಲ್ಲಿ ಅವರವರ ಇಷ್ಟಾನುಸಾರ ಕೆಲವರು ಸಂಪೂರ್ಣ, ಕೆಲವೆಡೆ ಅರೆ-ಬರೆ ಬಳಕೆಯಲ್ಲಿದೆ. ಒಟ್ಟಾರೆ ರಾಜ್ಯದ ಆಡಳಿತ ಕೇಂದ್ರ ವಿಧಾನಸೌಧದೊಳಗೆ ಕನ್ನಡ ಬಳಕೆ ಆಗಿಲ್ಲ ಎನ್ನಬಹುದು. ಇದಕ್ಕೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು 'ನಾನು ಕನ್ನಡಕ್ಕೆ ಬದ್ಧ' ಎನ್ನುವ ಆದ್ಯತೆ ಪರಿಗಣಿಸಿಲ್ಲ. ಆದರೆ, ನವೆಂಬರ್ ಬಂದಾಗ ರಾಜ್ಯೋತ್ಸವದ ಭಾಷಣದಲ್ಲಿ ಕನ್ನಡಿಗರಿಗೆ ಒಂದು ಸಂದೇಶ ಕೊಡಬೇಕು ಎಂಬಲ್ಲಿಗೆ ಸೀಮಿತವಾಗಿದ್ದಾರೆ.

**ಪ್ರಾಧಿಕಾರದ ಇತಿ-ಮಿತಿಗಳು**

ಕನ್ನಡ ಕಾವಲು ಸಮಿತಿಗಾಗಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕಾಗಲಿ, ಕನ್ನಡದ ಅನುಷ್ಠಾನಕ್ಕೆ ಬೇಕಾದಂತಹ ಅಧಿಕಾರವಿರಲಿಲ್ಲ. ಆದರೆ ಇವುಗಳಲ್ಲಿ ಕೆಲಸ ನಿರ್ವಹಿಸಿದವರು ಅವರ ಕಾರ್ಯಶೈಲಿ, ಕಾಳಜಿ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಮೇಲೆ ಜಿ.ನಾರಾಯಣ, ಹೆಚ್.ನರಸಿಂಹಯ್ಯ ಮತ್ತು ನಾನು ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರ ಇರದಿದ್ದರೆ ಸರ್ಕಾರಿ ಯಂತ್ರ ಬಗ್ಗುವುದಿಲ್ಲವೆಂದು ಸರ್ಕಾರದ ಮೇಲೆ ಒತ್ತಡ ತಂದೆವು. ನಂತರ ಬರಗೂರುರವರ ಅವಧಿಯಲ್ಲಿ ಸರ್ಕಾರ ಒಂದು ಆದೇಶ ಹೊರಡಿಸಿ ಕನ್ನಡದ ಬಗ್ಗೆ ನಿರ್ಲಕ್ಷ್ಯ, ಸೋಗಲಾಡಿತನ ಉದಾಸೀನತೆ ತೋರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವ ಅಧಿಕಾರವನ್ನು ಪ್ರಾಧಿಕಾರಕ್ಕೆ ನೀಡಿದೆ. ಆದರೂ ಅಲ್ಲಿ ಇರುವವರು ಕಟ್ಟುನಿಟ್ಟಾಗಿ ಕಾನೂನನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತಂದರೆ ಆಡಳಿತ ಭಾಷೆಯಾಗಿ ಕನ್ನಡ ಜಾರಿ ಸಾಧ್ಯವಾಗುತ್ತದೆ.

**ಕಾನೂನು ಕ್ಷೇತ್ರದಲ್ಲಿ**

ನ್ಯಾಯಾಂಗ ಜನಸಾಮಾನ್ಯರ ಬದುಕಿನಲ್ಲಿ ಒಂದು ಪ್ರಮುಖ ಭಾಗವಾಗಿದ್ದು ಕೆಳಹಂತದ ನ್ಯಾಯಾಲಯಗಳಲ್ಲಿ ಅನಿವಾರ್ಯವಾಗಿ ಕನ್ನಡದ ಬಳಕೆಯಾಗುತ್ತಿದೆ. ಆದರೆ ಉಚ್ಚ ನ್ಯಾಯಾಲಯಗಳಲ್ಲಿ ಶೇ 10-20 ರಷ್ಟು ಮಾತ್ರ ಕನ್ನಡ ಬಳಕೆಯಲ್ಲಿದೆ.

**ಶಿಕ್ಷಣ ಕ್ಷೇತ್ರದಲ್ಲಿ**

ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಮಾಧ್ಯಮ ಅನುಷ್ಠಾನಗೊಳ್ಳಬೇಕಾದರೆ ಮಹಿಷಿ ವರದಿ ಜಾರಿಯಾಗಬೇಕಿದೆ. ಗೋಕಾಕ, ಹೆಚ್.ನರಸಿಂಹಯ್ಯ ವರದಿ ಮತ್ತು ಚಂಪಾರವರ ಮಧ್ಯಂತರ ವರದಿಗಳು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿವೆ. ನಂತರ ಬಂದ ಬರಗೂರುರವರು ಈ ಎಲ್ಲಾ ವರದಿಗಳನ್ನು ಅಧ್ಯಯನ ಮಾಡಿ ಆ ಅಂಶಗಳನ್ನು ಒಳಗೊಂಡು ಒಂದು ಸಮಗ್ರ ವರದಿಯನ್ನು ನೀಡಿದ್ದಾರೆ. ಅದರ ಅನುಷ್ಠಾನಕ್ಕಾಗಿ ನಾವೆಲ್ಲರು ಹೋರಾಟ ನಡೆಸಬೇಕಾಗಿದೆ.

**ಶಿಫಾರಸ್ಸುಗಳು ಮತ್ತು ಸರ್ಕಾರದ ಕ್ರಮಗಳು**

ತುಮಕೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರವರು ಬರಗೂರು ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು, ತಾವು ಅದಕ್ಕೆ ಕಟಿಬದ್ಧರೆಂದು ಘೋಷಿಸಿದರು. ಆದರೆ ಇಲ್ಲಿವರೆಗೆ ಆ ಬಗ್ಗೆ ಕ್ರಮ ಕೈಗೊಂಡಿಲ್ಲ . ಈಗಿನ ಶಿಕ್ಷಣ ಮಂತ್ರಿಗಳು ಹೇಳಿಕೇಳಿ ಇಂಗ್ಲಿಷ್ ಪ್ರಿಯರು. ಒಟ್ಟಾರೆ ಸರ್ಕಾರ ಕನ್ನಡದ ಅನುಷ್ಠಾನದಲ್ಲಿ ತನ್ನ ಬದ್ಧತೆ ಪ್ರದರ್ಶಿಸುತ್ತಿಲ್ಲ.




**ಕಾರ್ಖಾನೆಗಳಲ್ಲಿ**

ಸ್ಥಳೀಯರ ಒಡೆತನದ ಕಾರ್ಖಾನೆಗಳಲ್ಲಿ ಕನ್ನಡದ ಬಳಕೆ ಇದ್ದೇ ಇದೆ. ಇನ್ನೂ ಅನ್ಯ ಭಾಷಿಕರ ಮಾಲಿಕತ್ವದ ಕಾರ್ಖಾನೆಗಳಲ್ಲಿ ಕನ್ನಡದ ಬಳಕೆ ಪ್ರಮಾಣ ವೃದ್ಧಿಯಾಗುತ್ತಿದೆ. ಆದರೆ, ಈಗ ಸಮಸ್ಯೆ ಇರುವುದು. ಸರ್ಕಾರಗಳು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ. ಇದರ ಬಗ್ಗೆ ಸರ್ಕಾರ ನಾವು ಕನ್ನಡ -ಕನ್ನಡ ಎಂದರೆ ನಮ್ಮಲ್ಲಿಗೆ ವಿದೇಶಿ ಬಂಡವಾಳ ಬರುವುದಿಲ್ಲವೆಂಬ ಅಘೋಷಿತ ಬೊಬ್ಬೆ ಹಾಕುತ್ತಿದೆ.

ಒಟ್ಟಾರೆ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಒಂದು ಭಾಷೆಯನ್ನು ಹೇಗೆ ಕೊಲ್ಲಬಹುದು ಎಂಬ ಅನುಭವ ನಮಗೆ ಇಂದು ಸ್ಪಷ್ಟವಾಗ ತೊಡಗಿದೆ.

**ಜನರ ಪ್ರತಿಕ್ರಿಯೆ ಹೇಗಿದೆ?**

ರಾಜ್ಯದಲ್ಲಿ ಶೇ 80 ರಷ್ಟು ಜನತೆ ಗ್ರಾಮೀಣ ಪ್ರದೇಶದಲ್ಲಿದ್ದಾರೆ. ಶೇ 20 ಪಟ್ಟಣ ಮತ್ತು ಅರೇ ಪಟ್ಟಣಗಳ ಮಧ್ಯಮವರ್ಗದವರು. ಮೇಲ್ ಮಧ್ಯಮ ವರ್ಗದವರು 'ಅಭಿಪ್ರಾಯ ನಿರ್ಮಾಪಕರು' ಇವರು. ತಮ್ಮ ಹಿಡಿತದಲ್ಲಿರುವ ಮಾಧ್ಯಮಗಳ ಮೂಲಕ 'ಇಂಗ್ಲಿಷ್ ಅಂದರೆ ಕಂಪ್ಯೂಟರ್, ಕಂಪ್ಯೂಟರ್ ಎಂದರೆ ಇಂಗ್ಲೀಷ್' ಎಂದು ಸುಶಿಕ್ಷಿತರಲ್ಲಿ ಮೂಢನಂಬಿಕೆ ಮೂಡಿಸುತ್ತಿದ್ದಾರೆ. ವಾಸ್ತವದಲ್ಲಿ ಕಂಪ್ಯೂಟರ್‌ಗಳಿಗೆ ಯಾವುದೇ ಭಾಷೆಯಿಲ್ಲ. ಅದೊಂದು ತಟಸ್ಥ ಮಾಧ್ಯಮ. ಇಟಲಿ, ಜರ್ಮನಿ, ಫ್ರಾನ್ಸ್ ಇತ್ಯಾದಿ ದೇಶಗಳಲ್ಲಿ ಅಲ್ಲಿಯ ಭಾಷೆಗಳಲ್ಲಿ ಕಂಪ್ಯೂಟರ್‌ಗಳಿವೆ. ಇಂಗ್ಲೀಷ್‌ಗೆ ಅನಧಿಕೃತವಾದ ಅಂತರ್ರಾಷ್ಟ್ರೀಯ ಮನ್ನಣೆ ಇರುವುದರಿಂದ ಇಲ್ಲಿಯ ಉಚ್ಚ ವರ್ಗಕ್ಕೆ ಯಾವಾಗಲೂ ಇಂಗ್ಲಿಷ್‌ನತ್ತ ಒಲವು. (ಸಂಸ್ಕೃತ ಇದ್ದರೆ ಸಂಸ್ಕೃತ. ಹಿಟ್ಲರ್ ಇಲ್ಲಿಗೆ ಬಂದಿದ್ದರೆ ಜರ್ಮನ್ ಭಾಷೆ ಪರ) ಇನ್ನು ಮಧ್ಯಮ ಮತ್ತು ಕೆಳ ಮಧ್ಯಮವರ್ಗದವರು ಹಿರಿಯಕ್ಕನ ಚಾಳಿಗೆ ಬಿದ್ದಿದ್ದಾರೆ.

ಇಂಗ್ಲೀಷ್ ಕಲಿತ ಎಷ್ಟು ಜನರಿಗೆ ಹೊರ ರಾಜ್ಯ ಹೊರ ದೇಶಗಳಲ್ಲಿ ಉದ್ಯೋಗ ದೊರಕಿದೆ? ಮೂರನೇ ಜಗತ್ತಿನ ದೇಶಗಳಲ್ಲಿ ಇಂಗ್ಲಿಷ್ ಅಂತರರಾಷ್ಟ್ರೀಯ ಸಂಪರ್ಕ ಭಾಷೆಗಳಲ್ಲಿ ಒಂದಾಗಿರುವುದರಿಂದ ಅದರ ಜ್ಞಾನ ನಮಗೆ ಬೇಕು ಅಷ್ಟೇ. ಆದರೆ ಶಿಕ್ಷಣದಲ್ಲಿ ಮಾತೃಭಾಷೆ ಇಲ್ಲವೇ ಪರಿಸರ ಭಾಷೆಯಾಗಿರಬೇಕು. ಅದು ವೈಜ್ಞಾನಿಕ ಕೂಡ. ಸುಪ್ರೀಂ ಕೋರ್ಟ್ ಸಹ ಇದನ್ನೇ ಹೇಳಿದೆ.

**ರಾಷ್ಟ್ರ ಭಾಷೆ**

ಹಿಂದಿಯೊಂದೇ ರಾಷ್ಟ್ರ ಭಾಷೆಯಲ್ಲ. ಅದು ರಾಷ್ಟ್ರೀಯ ಭಾಷೆಗಳಲ್ಲೊಂದು. ಹಿಂದಿಯವರು ಹಿಂದಿಯೇತರ ರಾಜ್ಯಗಳ ಮೇಲೆ ಹಿಂದಿ, ಹಿಂದುತ್ವ ಮತ್ತು ಹಿಂದೂಸ್ತಾನಗಳನ್ನು ಬಲವಂತವಾಗಿ ಹೇರುತ್ತಿದ್ದಾರೆ.

**ಸೆಂಟ್ರಲ್ ಸಿಲಬಸ್**

ಕೇಂದ್ರ ಸರ್ಕಾರದ ಸೇವೆಯಲ್ಲಿರುವ ನೌಕರರ ಮಕ್ಕಳು ಸೆಂಟ್ರಲ್ ಸಿಲಬಸ್ ಓದಲಿ ಆದರೆ ಎಲ್ಲರೂ ಸೆಂಟ್ರಲ್ ಸಿಲಬಸ್ ಬಗ್ಗೆ ಗೀಳು ಹತ್ತಿಸಿಕೊಂಡಿದ್ದಾರೆ. ಇದರಿಂದ ಸ್ಥಳೀಯ ಸಂಸ್ಕೃತಿ ಇತಿಹಾಸ ಮತ್ತೆ ಮಾತೃಭಾಷೆಗಳಿಗೆ ಭಾರೀ ಹೊಡೆತವುಂಟಾಗಲಿದೆ. ಕೇಂದ್ರದ ಸೇವೆಯಲ್ಲಿದ್ದು ವರ್ಗಾವಣೆಯಾಗುವಂತಿದ್ದರೆ ಅಂತಹವರು ಕಲಿಯಬಹುದು.

**ಕನ್ನಡದ ಅನುಷ್ಠಾನಕ್ಕಾಗಿ**

ಬರಗೂರುರವರ ವರದಿ 3ನೇ ತರಗತಿಯಿಂದ ಇಂಗ್ಲೀಷ್ ಕಡ್ಡಾಯ ಹಾಗೂ ಸೆಂಟ್ರಲ್ ಸಿಲಬಸ್ ಬಗೆಗಿನ ಒಂದೆರಡು ನ್ಯೂನತೆಗಳನ್ನು ಬಿಟ್ಟರೆ ಒಂದು ಸಮಗ್ರ ವರದಿಯಾಗಿದೆ. ಇದರ ಅನುಷ್ಠಾನಕ್ಕಾಗಿ ಒಂದು ದೊಡ್ಡ ಆಂದೋಲನವಾಗಬೇಕಾಗಿದೆ. ಕನ್ನಡವೆಂದರೆ ಕೇವಲ ಶಿಕ್ಷಣ ಭಾಷೆಯಲ್ಲ. ಕನ್ನಡವೆಂದರೆ ಬದುಕು, ರೈತ, ಕಾರ್ಮಿಕ, ನೌಕರ, ವ್ಯಾಪಾರಿ, ಸಂಸ್ಕೃತಿ ಮತ್ತು ಜನಸಾಮಾನ್ಯ ಎಂದಾಗಬೇಕು.

ಇವೆಲ್ಲವನ್ನು ವೈಚಾರಿಕವಾಗಿ ಅರ್ಥ ಮಾಡಿಕೊಂಡು ಜನಸಾಮಾನ್ಯರನ್ನು ಅಣಿನೆರಸಿದರೆ ಕನ್ನಡ ಆಡಳಿತ ಭಾಷೆಯಾಗಿ ಬರುವುದಕ್ಕಾಗಿ ಹೊರಹೊಮ್ಮಲಿದೆ. ಇದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಜನಾಂದೋಲನವಾಗಬೇಕಾಗಿದೆ. ○

# ಕರ್ನಾಟಕ ಏಕೀಕರಣ..... ಮತ್ತು ಆಡಳಿತ ಭಾಷೆ - ಜಿ.ಎನ್

7ನೇ ಪುಟದಿಂದ

- ಹನುಮಂತ ಗೋವಿಂದ ಕಟ್ಟಿ

ಆದರೆ ಯುರೋಪಿನಲ್ಲಿ ಪ್ರಜಾಪ್ರಭುತ್ವ ಕ್ರಾಂತಿಗಳು ರಾಜಸಾಮ್ರಾಟರುಗಳ ಪಾಳೆಯಗಾರಿ ಪ್ರಭುತ್ವ ಹಾಗೂ ಅದನ್ನು ಬಲಪಡಿಸುವ ಕ್ರಿಶ್ಚಿಯನ್ ಮತನಂಬಿಕೆಗಳು ಹಾಗೂ ಚರ್ಚ್ ಮೊದಲಾದ ಸಂಸ್ಥೆಗಳ ವಿರುದ್ಧ ಸಿಡಿದೆದ್ದು ಒಂದು ವೈಚಾರಿಕ ಕ್ರಾಂತಿ, ತಾತ್ವಿಕ, ಸೈದ್ಧಾಂತಿಕ ಸೆಣಸಾಟ ನಡೆಸಿ ಪಾಳೆಯಗಾರಿ ವ್ಯವಸ್ಥೆಯನ್ನು ನಾಶಪಡಿಸಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದಂತೆ ಭಾರತದ ಸ್ವಾತಂತ್ರ್ಯ ಸಮರದ ಸೇನಾನಿಗಳು ಭಾರತದ ಪಾಳೆಯಗಾರಿ ಪ್ರಭುತ್ವವನ್ನು ನಾಶಪಡಿಸುವ ಕರ್ತವ್ಯವನ್ನು ಪ್ರಜ್ಞಾಪೂರ್ವಕವಾಗಿ ನೆರವೇರಿಸಲಿಲ್ಲ. ಜಾತಿ ವ್ಯವಸ್ಥೆ ಮತ್ತು ಮತಧರ್ಮಗಳ ಕಟ್ಟುಪಾಡುಗಳ ವಿರುದ್ಧ ವೈಚಾರಿಕ ಸಮರವನ್ನು ಹಾಗೂ ಪಾಳೆಯಗಾರಿ ಪ್ರಭುತ್ವ ಮತ್ತು ಭೂ ಸಂಬಂಧಗಳ ವಿರುದ್ಧ ತಮ್ಮ ಸೆಣಸಾಟವನ್ನು ಸಾಗಿಸಲಿಲ್ಲ.

ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾಗಿ ಬೆಳೆದ ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಪಾಳೆಯಗಾರಿ ಪ್ರಭುತ್ವ ಹಾಗೂ ವ್ಯವಸ್ಥೆಯನ್ನು ಗುರಿ ಮಾಡುವ ಬದಲು ಹಿಂದಿನ ರಾಜಪ್ರಭುತ್ವಗಳನ್ನು ಹೊಗಳಿಹಾಡುವ ಆಮೂಲಕ ಏಕೀಕರಣಕ್ಕೆ ಸ್ಫೂರ್ತಿ ಪಡೆಯುವ ಪ್ರತಿಗಾಮಿ ಪ್ರಕ್ರಿಯೆಯನ್ನು ವ್ಯಾಪಕವಾಗಿ ಕಾಣುತ್ತಿದೆ.

*"ಶಕ ವಿಜೇತನ ಮರ ಶಾತವಾಹನಾಜ್ಞನೀ ಶಶಂ*
*ನಿನ್ನೊಳಂದು ತೊಡಗಿ ಸಂದುದರ್ಘ ಭರತ ದೇಶಕಂ*
*ಚಳುಕ್ಯ ರಾಷ್ಟ್ರಕೂಟರಲ್ಲಿ ಗಂಗರಾ ಕದಂಬರಲ್ಲಿ*
*ಹೊಯ್ಸಳ ಕಳಚುರ್ಯರಲ್ಲಿ*
*ವಿಜಯನಗರ ಭೂಪರು*
*ಆಳ್ದರಿಲ್ಲಿಯಲ್ಲದಲ್ಲಿ ತಾಯೆಯೇಣಾಲೂಪರು?*

*- ಗೋವಿಂದ ಪೈ*

*"ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು*
*ರಾಜನ್ನರಿಪು ಪರಶುರಾಮ ನಮ್ಮ ನಾಡು*
*ಆ ಜಲಧಿಯನೆಜಿಗಿದ ಹನುಮನುದಿಸಿದ ನಾಡು*
*ಒಡೆಯ ಮೆರೆದರಸುಗಳ ಸಾಹಸದ ಸೂಡು"*

*- ಹುಯಿಲುಗೋಳ ನಾರಾಯಣ ರಾಯರು*

*"ಕಾಲಭೂತದ ಕಠಿಣ ಕತ್ತಲೆಯ ಸೆರೆಯಲ್ಲಿ*
*ಸಿಲುಕಿರುವ ಪುಲಿಕೇಶಿ ನೃಪತುಂಗ ಬಲ್ಲಾಳ ಹರಿಹರರ*
*ಇಲ್ಲಿಯೇ ಉಸಿರಾಡಿ ಈ ನಾಡು ಕಟ್ಟಿದಾ"*


*- ರಂ.ಶ್ರೀ ಮುಗಳಿ*

ಹೀಗೆ ಇನ್ನೂ ಅನೇಕ ಉದಾಹರಣೆಗಳನ್ನು ನೀಡಬಹುದು. ತಂತಮ್ಮ ರಾಜ್ಯ ಸಾಮ್ರಾಜ್ಯಗಳ ವಿಸ್ತಾರಕ್ಕಾಗಿ ಕನ್ನಡವನ್ನೇ ಮಾತನ್ನಾಡುವ ಇತರ ರಾಜರುಗಳ ವಿರುದ್ಧ ರಾಜ್ಯಗಳ ವಿರುದ್ಧ ಸೆಣಸಾಡಿ ಕನ್ನಡಿಗರ ಮಾರಣ ಹೋಮ ಮಾಡಿದ ಕನ್ನಡ ಮಾತನಾಡುವ ಪ್ರದೇಶಗಳನ್ನು ಹಲವು ತುಂಡುಗಳಾಗಿ ಹರಿದು ಹಂಚಿಕೊಂಡಿದ್ದ ಈ ರಾಜ ಮಹಾರಾಜರ ನೆನಪು 'ಏಕೀಕರಣ' ಪ್ರಕ್ರಿಯೆಗೆ ಹೇಗೆ ಪ್ರಸ್ತುತವಾಗುತ್ತದೆ? ಈ ಎಲ್ಲ ನೆನಪುಗಳಲ್ಲಿ ಎಲ್ಲಿಯೂ ಆದಿಲ್‌ಶಾಹಿಗಳ, ಬೀದರ್‌ನ ಮಹಮ್ಮದ್ ಗವಾನ್‌ನ ಪುಡಿಪುಡಿ ಪಾಳೆಯಗಾರಿಕೆಗಳನ್ನು ನಾಶಮಾಡಿ ಮುಂದೆ ಮಾದರಿ ಮೈಸೂರಿಗೆ ಅಡಿಪಾಯ ಹಾಕಿದ ಹೈದರಾಲಿಯ ಹಾಗೂ ಬ್ರಿಟೀಷರ ಕೈಗೆ ಮೈಸೂರನ್ನು ಒಪ್ಪಿಸಬಾರದೆಂದು ತನ್ನ ಮಕ್ಕಳನ್ನೇ ಅಡವಿಟ್ಟಿದ್ದ, ತನ್ನ ಪ್ರಾಣ ತೆತ್ತ ಟಿಪ್ಪುಸುಲ್ತಾನನ ಪ್ರಸ್ತಾಪವೇ ಬರುವುದಿಲ್ಲ ಎಂಬುದು ಈ ಪ್ರತಿಗಾಮಿ ದೃಷ್ಟಿ ದೋಷಕ್ಕೆ ಒಂದು ಪ್ರಮುಖ ಉದಾಹರಣೆ.

ಕರ್ನಾಟಕತ್ವದ ಮೊದಲ ಉದ್ಘೋಷ ಮಾಡಿದ ಆಲೂರ ವೆಂಕಟರಾಯರಿಂದ ಹಿಡಿದು ಅನೇಕ ಕರ್ನಾಟಕದ ಏಕೀಕರಣದ ಅಧ್ವರ್ಯುಗಳು ವಿಜಯನಗರ ಸಾಮ್ರಾಜ್ಯದಿಂದ ಸ್ಫೂರ್ತಿ ಪಡೆದವರು, ಹಾಳು ಹಂಪೆಗಾಗಿ ಹಲುಬಿದವರು. ಕರ್ನಾಟಕ ಏಕೀಕರಣ ಚಳುವಳಿಯ ಆರಂಭದ ದಿನಗಳಲ್ಲಿ ಹಂಪಿಯಲ್ಲಿಯೇ ಒಂದು ಸಮಾವೇಶ ಸಂಘಟಿಸಿ ಕರ್ನಾಟಕತ್ವದ "ದೀಕ್ಷೆ"ಯನ್ನು ಮಾತ್ರ ತನ್ನ ಸಾಮ್ರಾಜ್ಯದಲ್ಲಿ ಹೊಂದಿದ್ದ ತೆಲುಗುನಾಡು, ತಮಿಳುನಾಡುಗಳನ್ನೆಲ್ಲಾ ಆವರಿಸಿದ್ದ, ಸಾಮ್ರಾಜ್ಯದ ಆರಂಭಕಾಲದ ಹೊರತಾಗಿ ತೆಲುಗು ರಾಜವಂಶಗಳ ಆಳ್ವಿಕೆಯಲ್ಲಿದ್ದ ವಿಜಯನಗರ ಹೇಗೆ ಕರ್ನಾಟಕ ಏಕೀಕರಣಕ್ಕೆ ಸ್ಫೂರ್ತಿ ನೀಡಬಲ್ಲುದು? ವಿಜಯನಗರವನ್ನು ಸ್ಫೂರ್ತಿ ಕೇಂದ್ರವಾಗಿ ಆಯ್ದುಕೊಂಡುದರ ಉದ್ದೇಶ ಮತ್ತು ಪರಿಣಾಮಗಳು ಮುಸ್ಲಿಂ ವಿರೋಧಿ ಎಂಬುದು ಸ್ಪಷ್ಟ.

ಹೀಗೆ ಕರ್ನಾಟಕ ಏಕೀಕರಣ ಪಾಳೆಯಗಾರಿ ವ್ಯವಸ್ಥೆಯ ಪರವಾದ ಹಾಗೂ ಕೋಮುವಾದಿ ಅಂಶಗಳನ್ನು ಒಳಗೊಂಡಿತ್ತು ಎಂಬುದು ಕರ್ನಾಟಕದ ಮುಂದಣ ಬೆಳವಣಿಗೆಯ ಮೇಲಣ ಪರಿಣಾಮದ ದೃಷ್ಟಿಯಿಂದ ಮಹತ್ವದ್ದು.

ಇಂದು ಕೂಡ ಕನ್ನಡ ರಾಜ್ಯೋತ್ಸವಗಳ ಆಚರಣೆಯಲ್ಲಿ 'ವಿಜಯನಗರದ ಹೆಬ್ಬಾಗಿಲು', 'ಪುಲಿಕೇಶಿ ಮಂಟಪ', 'ನೃಪತುಂಗ ಮಂಟಪ', ಮೆರವಣಿಗೆಗಳಲ್ಲಿ ಈ ರಾಜ ವಂಶಗಳ ವೇಷಗಳು, ಟ್ಯಾಬ್ಲೋಗಳು ರಾರಾಜಿಸುತ್ತವೆ. (ಕನ್ನಡ ವಿಶ್ವ ವಿದ್ಯಾನಿಲಯವನ್ನು ಹಂಪಿಯಲ್ಲಿ ಸ್ಥಾಪಿಸಲಾಗಿದೆ ಎಂಬುದನ್ನು ಗಮನಿಸಬೇಕು)



ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭದಲ್ಲಿ ಕರ್ನಾಟಕವನ್ನು ಹರಿದು ಹಂಚು ಮಾಡಿದ್ದ ಪಾಳೆಯಗಾರಿ ವ್ಯವಸ್ಥೆಯನ್ನು ರಾಜ ಪ್ರಭುತ್ವಗಳನ್ನು ಅದರ ಹಿಂದಿನ ಸೈದ್ಧಾಂತಿಕ ಸಾಮಾಜಿಕ ಆಧಾರವಾದ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸದೆ ಇದ್ದದ್ದು ಕನ್ನಡತನದ ಬೆಳವಣಿಗೆಯನ್ನು ಮೊಟಕು ಮಾಡಿತು. ಕರ್ನಾಟಕದ ಏಕೀಕರಣದಲ್ಲಿ ತೊಡಕುಗಳನ್ನೊಡ್ಡಿತು. ಕರ್ನಾಟಕ ಒಂದು ರಾಜ್ಯವಾಗುವ ಸಂದರ್ಭದಲ್ಲಿ ಮೈಸೂರು ಮಹಾರಾಜರು, ಸಂಡೂರು, ಅತ್ರ, ಅಕ್ಕಲಕೋಟೆ ಮೊದಲಾದ ಪಾಳೆಯಗಾರರು ತಾವು ಸ್ವತಂತ್ರವಾಗಿರಬೇಕೆಂದು ಹವಣಿಸಿ ಒಡ್ಡಿದ ಅಡ್ಡಿ ಆತಂಕಗಳ ಬಗ್ಗೆ ಈಗಾಗಲೇ ಐಕ್ಯರಂಗದಲ್ಲಿ ಓದಿದ್ದೀರಿ. ಮೈಸೂರು ಮಹಾರಾಜರ ಈ ಪ್ರಯತ್ನಕ್ಕೆ ಈ ಪ್ರದೇಶದಲ್ಲಿ ಪ್ರಧಾನವಾಗಿದ್ದ 'ಒಕ್ಕಲಿಗ' ಜಾತಿಯ ಪ್ರಬಲ ಮುಖಂಡರುಗಳ ಬೆಂಬಲವೂ ಇತ್ತು. ಅಂದಿನ (ಹಳೆಯ) ಮೈಸೂರು ವಿಧಾನಸಭೆಯಲ್ಲಿ ಏಕೀಕರಣ ನಿರ್ಣಯವನ್ನು ಅಂಗೀಕರಿಸುವುದು ಒಂದು ದೊಡ್ಡ ಹೋರಾಟವೇ ಆಯಿತು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿ ಪಟ್ಟವನ್ನು ಏಕೀಕರಣಕ್ಕಾಗಿ ಬಲಿಕೊಡಬೇಕಾಯಿತು. ಇನ್ನುಳಿದ ಅನೇಕ ಕಾಂಗ್ರೆಸ್ ನಾಯಕರ ರಾಜಸೇವಾಸಕ್ತಿಗೆ ವಿರುದ್ಧವಾಗಿ ಕೆಂಗಲ್ ಹನುಮಂತಯ್ಯನವರು ರಾಜತ್ವಕ್ಕೆ ಬದ್ಧ ವಿರೋಧವನ್ನು ವ್ಯಕ್ತಪಡಿಸುತ್ತಿದ್ದ ಪ್ರಜಾಪ್ರಭುತ್ವವಾದಿಗಳು ಎಂಬುದು ಆಕಸ್ಮಿಕವೇನಲ್ಲ. ಇಂದಿಗೂ ಕರ್ನಾಟಕದ ಐಕ್ಯತೆಯನ್ನು ಛಿದ್ರ ಮಾಡಬಯಸುವ ಶಕ್ತಿಗಳು ಕೊಡಗು, ಹೈದರಾಬಾದ್ ಕರ್ನಾಟಕಗಳ ಪಾಳೆಯಗಾರಿ ಶಕ್ತಿಗಳು ಎಂಬುದು ಇದರೊಂದಿಗೆ ಜಾತಿರಾಜಕಾರಣವೂ ಬೆರೆತಿದೆ ಎಂಬುದನ್ನು ಗಮನಿಸಬೇಕು. ಈ ಎಲ್ಲ ಪಾಳೆಯಗಾರಿಶಕ್ತಿಗಳನ್ನು ಬದಿಗೊತ್ತಿ ಕರ್ನಾಟಕ ಒಂದಾಯಿತು ಎಂಬುದು ಪ್ರಜಾಪ್ರಭುತ್ವಕ್ಕೆ ಒಂದು ಗಮನಾರ್ಹ ವಿಜಯ. ಇದರಿಂದ ಕನ್ನಡ ಮಾತನಾಡುವವರೆಲ್ಲ ಒಂದಾಗಿ ಸಾವಿರಾರು ವರ್ಷಗಳ, ಸಾಮ್ರಾಜ್ಯಗಳ ಗಡಿಗೆರೆಗಳನ್ನು ನಾಶಪಡಿಸಿ ಹೊಸ ಭೂಪಟವನ್ನು ರೂಪಿಸಿದರು. ಆದರೆ ಪಾಳೆಯಗಾರಿ ಮನೋಭಾವ ಕೊನೆಗೂ ಈ ಪ್ರಕ್ರಿಯೆಯ ಮೇಲೆ ತನ್ನ ಅಚ್ಚನ್ನೊತ್ತಿತು. ಹೀಗೆ ಒಂದಾದ ರಾಜ್ಯ ಕರ್ನಾಟಕವಾಗಲಿಲ್ಲ. ವಿಶಾಲ ಮೈಸೂರು ರಾಜ್ಯವಾಯಿತು. ಮೈಸೂರು ಮಹಾರಾಜರ ಒತ್ತಡದಿಂದಾಗಿ ಕರ್ನಾಟಕಕ್ಕೆ ಕರ್ನಾಟಕ ಎಂದು ನಾಮಕರಣವಾಗಲು ಮತ್ತೆ 17 ವರ್ಷಗಳ ಕಾಲ ಕಾಯಬೇಕಾಯಿತು.

**ಆಡಳಿತ ಭಾಷೆಯ ಪ್ರಶ್ನೆ ಮತ್ತು ಪ್ರಜಾಪ್ರಭುತ್ವದ ಸ್ವರೂಪ**

ಸ್ವಾತಂತ್ರ್ಯ ಚಳುವಳಿ ಹಾಗೂ ಏಕೀಕರಣ ಚಳುವಳಿಯ ಜೊತೆಜೊತೆಗೆ ಪಾಳೆಯಗಾರಿ ವ್ಯವಸ್ಥೆ ಹಾಗೂ ಸಿದ್ಧಾಂತಗಳ ವಿರುದ್ಧ ಜಾತಿವ್ಯವಸ್ಥೆಯ ವಿರುದ್ಧ ಸೆಣಸಾಟ ನಡೆಯದ ಹಿನ್ನೆಲೆಯಲ್ಲಿ ನಾವು ಸ್ವಾತಂತ್ರ್ಯಾನಂತರ ಮತ್ತು ಏಕೀಕರಣಾನಂತರದಲ್ಲಿ ಆ ಚಳುವಳಿಗಳ ಉನ್ನತ ಧ್ಯೇಯಗಳು ಈಡೇರಿವೆಯೇ ಎಂಬುದನ್ನು ವಿಮರ್ಶಿಸಬೇಕು. ಅದರಲ್ಲಿ ಒಂದು ಪ್ರಧಾನ ಅಂಶ ಆಡಳಿತ ಭಾಷೆ. ಆಡಳಿತ ಭಾಷೆಯ ಪ್ರಶ್ನೆ ಒಟ್ಟಾರೆಯಾಗಿ ಸಾಕ್ಷರತೆ ಸಾರ್ವತ್ರಿಕ ಶಿಕ್ಷಣ, ಶಿಕ್ಷಣದ ಭಾಷೆ, ಕಾನೂನು ಮತ್ತು ನಿಯಮಾವಳಿ ಗಳ ಸ್ವರೂಪ ಮತ್ತು ಉದ್ದೇಶ ಆಡಳಿತದ ನೀತಿ ಮತ್ತು ಧೋರಣೆ ಪ್ರಭುತ್ವದ ಸ್ವರೂಪ ಮೊದಲಾದ ಅಂಶಗಳೊಡನೆ ಸಾವಯವ ಮತ್ತು ಅಂತರಂಗಿಕ ಸಂಬಂಧವುಳ್ಳದ್ದು. ಆದುದರಿಂದ ಆಡಳಿತ ಭಾಷೆಯೊಂದನ್ನೇ ಪ್ರತ್ಯೇಕಗೊಳಿಸಿ ವಿಶ್ಲೇಷಿಸುವುದು ಮಿಕ್ಕೆಲ್ಲಾ ಜನ ವಿರೋಧಿ ಸ್ವರೂಪವುಳ್ಳದ್ದಾದರೆ ಆಡಳಿತ ಭಾಷೆಯ ವಿಷಯದಲ್ಲಿ ಜನಪರವಾಗಿರಲು ಸಾಧ್ಯ ಎಂಬ ಪ್ರಶ್ನೆಯೇ ಅಸಂಗತವಾದದ್ದು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುತ್ವದ ಹೊಣೆಯನ್ನು ನಿರ್ವಹಿಸಬೇಕಾದರೆ ಅವರಿಗೆ ಅದಕ್ಕೆ ಸಂಬಂಧಿಸಿದ ಎಲ್ಲಾ ಅರಿವನ್ನೂ, ಮಾಹಿತಿಯನ್ನು ಒದಗಿಸಬೇಕು. ಅದು ಅವರ ಮಾತೃಭಾಷೆಯಲ್ಲಿ ಆದರೆ ಮಾತ್ರ. ಪ್ರಜೆಗಳಿಗೆ ಅರ್ಥವಾಗಲು, ಅವರ ಅರಿವು ವಿಸ್ತಾರವಾಗಲು ಸಾಧ್ಯ. ವಿಕೇಂದ್ರೀಕೃತ ಪ್ರಜಾಪ್ರಭುತ್ವವನ್ನು ಪ್ರತಿಪಾದಿಸುತ್ತಿರುವ ಅನೇಕ ಯೋಜನೆ ಮತ್ತು ಹೊಣೆಗಾರಿಕೆಗಳನ್ನು ಕೆಳಹಂತದ ಆಡಳಿತ ಸಂಸ್ಥೆಗಳಿಗೆ ವರ್ಗಾಯಿಸುವ ಸಂದರ್ಭದಲ್ಲಿ ಹಾಗೂ ಗ್ರಾಮ ಸಭೆಗಳ ಮೂಲಕ ಚುನಾಯಿತ ಪ್ರತಿನಿಧಿ ಹಾಗೂ ಅಧಿಕಾರಿಗಳು ಪ್ರಜೆಗಳಿಗೆ ಜವಾಬ್ದಾರರಾಗಿರುವ ಅವರ ಮುಂದೆ ತಮ್ಮ ಕೆಲಸವನ್ನು ಒಪ್ಪಿಸಬೇಕೆನ್ನುವ ಬಗ್ಗೆ ನಿಯಮಗಳು ರೂಪಿತವಾಗುತ್ತಿರುವ ಸನ್ನಿವೇಶದಲ್ಲಿ ಆಡಳಿತ ಭಾಷೆ ಅವರ ಮಾತೃಭಾಷೆಯಲ್ಲಿರಬೇಕಾದದ್ದು ಅನಿವಾರ್ಯ. ಹೀಗೆ ಸ್ವಾತಂತ್ರ್ಯ ಚಳುವಳಿಯ ವಿಚಾರಗಳನ್ನು ಜನರ ಭಾಷೆಯಲ್ಲಿ ಮಂಡಿಸಿದ್ದ ರಿಂದಲೇ ಜನಸಮುದಾಯ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು ಸಾಧ್ಯವಾಯಿತು. ಆದ್ದರಿಂದಲೇ ಜನರ ಮಾತೃ ಭಾಷೆಯಲ್ಲಿ ಆಡಳಿತ ನಡೆಸಲು ಅನುಕೂಲವಾಗಬೇಕೆಂದು ಭಾಷಾವಾರು ಪ್ರಾಂತ್ಯಗಳನ್ನು ರಚಿಸಲಾಯಿತು.

1956 ರಲ್ಲಿ ಕರ್ನಾಟಕ ಒಂದು ರಾಜ್ಯವಾದ ಕೂಡಲೇ ಹೊರಡಬೇಕಾಗಿದ್ದ ಮೊದಲ ಆಜ್ಞೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸುವುದು ಮತ್ತು ಅದನ್ನು ತಕ್ಷಣದಿಂದಲೇ ಜಾರಿಗೊಳ್ಳುವಂತ ಕ್ರಮಗಳನ್ನು ಕೈಗೊಳ್ಳುವುದು. ಅದೇ ಸಮಯದಲ್ಲಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ ಮಾತೃಭಾಷೆಯನ್ನು - ಕರ್ನಾಟಕದಲ್ಲಿ ಕನ್ನಡವನ್ನು ಪ್ರಧಾನ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ನ್ಯಾಯಾಂಗದಲ್ಲಿ, ಉತ್ಪಾದನೆ, ವಾಣಿಜ್ಯ ರಂಗಗಳಲ್ಲಿ - ಕೃಷಿ, ಕೈಗಾರಿಕಾರಂಗಗಳಲ್ಲಿ, ಬ್ಯಾಂಕ್, ಅಂಚೆ ಕಛೇರಿಗಳಲ್ಲಿ ರೈಲು, ಬಸ್ ಮೊದಲಾದ ಸಾರ್ವಜನಿಕ ಸಂಪರ್ಕದ ಎಲ್ಲಾ ವಿಭಾಗಗಳಲ್ಲಿ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿ ವ್ಯವಹಾರ ಭಾಷೆಯನ್ನಾಗಿ ಮಾಡುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿತ್ತು ಹಾಗೂ ಕೇಂದ್ರ ಸರ್ಕಾರದ ಹೊಣೆಯಾಗಿತ್ತು. ಜನರ ಭಾಷೆಯನ್ನು ಎಲ್ಲಾ ಆಡಳಿತದ, ಎಲ್ಲ ವ್ಯವಹಾರದ ಭಾಷೆಯನ್ನಾಗಿ ಮಾಡುವುದು ಸ್ವಾತಂತ್ರ್ಯ ಚಳುವಳಿಯ ಮುಂದುವರಿಕೆಯಾಗಿ, ಏಕೀಕರಣ ಚಳುವಳಿಯ ಮುಂದುವರಿಕೆಯಾಗಿ ಒಂದು ಚಳುವಳಿಯೇ ಆಗಬೇಕಾಗಿತ್ತು. ಇದು ಪ್ರಜಾಪ್ರಭುತ್ವವೆಂದು ಕರೆಸಿಕೊಳ್ಳುವ ಯಾವುದೇ ಪ್ರಭುತ್ವ ಮಾಡಬೇಕಾದ ಕೆಲಸ.

ಆದರೆ ಏನಾಯಿತು? ರಾಜ್ಯ ಸರ್ಕಾರ ಕನ್ನಡವನ್ನು ಆಡಳಿತ ಭಾಷೆ ಎಂದು ಘೋಷಿಸುವುದಕ್ಕೆ 7 ವರ್ಷಗಳ ಕಾಲ ತೆಗೆದುಕೊಂಡಿತು. ಮತ್ತು ಘೋಷಿಸಿದ ಕೂಡಲೇ ಅದು ಜಾರಿಯಾಗತೊಡಗಲಿಲ್ಲ. 70 ರ ದಶಕದಲ್ಲಿ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಕೆಲವು ವಿಭಾಗಗಳಲ್ಲಿ ಕನ್ನಡವನ್ನು ಬಳಸಬೇಕು ಎಂದು ಆಜ್ಞೆ ಹೊರಡಿಸಿದರು. ನಂತರ 1983 ರಲ್ಲಿ ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಏಕೀಕರಣವಾದ 27 ವರ್ಷಗಳ ನಂತರ ರಾಜ್ಯ ಮಟ್ಟದಲ್ಲಿ ಕನ್ನಡ ವನ್ನು ಆಡಳಿತ ಭಾಷೆಯನ್ನಾಗಿ ಪರಿಗಣಿಸಿದರು. ಅದು ಇನ್ನೂ ಜಾರಿಯಾಗುತ್ತಲೇ ಇದೆ.

ಇನ್ನು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ನ್ಯಾಯಾಂಗದಲ್ಲಿ, ಕೈಗಾರಿಕೆಗಳಲ್ಲಿ ಸಾಲದ ವಾಣಿಜ್ಯ ಸಂಸ್ಥೆಗಳಲ್ಲಿ, ಆಸ್ಪತ್ರೆಗಳಲ್ಲಿ, ಇನ್ನೂ ಅನೇಕ ರಂಗಗಳಲ್ಲಿ ಕನ್ನಡವನ್ನು ಆಡಳಿತದ, ವ್ಯವಹಾರದ ಭಾಷೆಯನ್ನಾಗಿ ಮಾಡುವ ಬಗ್ಗೆ ಆಜ್ಞೆಗಳೇ ಆಗಿಲ್ಲ. ಅಲ್ಲೊಂದು, ಇಲ್ಲೊಂದು ಸ್ವಂತ ಆಸಕ್ತಿಯ ಮೇಲೆ ಮಾಡುವ ಅಪರೂಪದ ಪ್ರಯತ್ನಗಳು ಇನ್ನೂ ಆದರ್ಶಗಳಾಗಿವೆ ಅಷ್ಟೆ.

ಕೇಂದ್ರ ಸರ್ಕಾರದ ನಿಯಂತ್ರಣದ ಇಲಾಖೆ, ಉದ್ಯಮಗಳಲ್ಲಿ, ರೈಲ್ವೆ, ಬ್ಯಾಂಕ್ ಮೊದಲಾದ ಸಾರ್ವಜನಿಕರು ಬಹಳವಾಗಿ ಉಪಯೋಗಿಸುವ ವ್ಯವಹಾರಗಳಲ್ಲಿ ಜನ ಭಾಷೆಯ ಬಳಕೆ ಇಲ್ಲ. ಇಂದಿಗೂ ಕೂಡಾ ಕನ್ನಡಿಗರ, ಕರ್ನಾಟಕದ ಜನತೆಯ ಅಷ್ಟೇ ಅಲ್ಲ 19 ಜನಭಾಷೆಯ ಪ್ರತಿನಿಧಿಗಳಾಗಿ ಲೋಕಸಭೆಗೆ ರಾಜ್ಯ ಸಭೆಗೆ ಹೋಗುವ ಸಂಸತ್ ಸದಸ್ಯರಿಗೆ ತಮ್ಮ ಭಾಷೆಯಲ್ಲಿ ಮಾತನಾಡುವ ಸೌಕರ್ಯವಿಲ್ಲ. ತಮ್ಮ ಭಾಷೆಯಲ್ಲಿ ಪ್ರಶ್ನೆಗಳನ್ನು ಹಾಕುವ, ಹಾಗೂ ತಮಗೆ ಅರ್ಥವಾಗುವಂತೆ ಉತ್ತರವನ್ನು ಪಡೆಯುವ, ಅದಕ್ಕೆ ಮರುಸವಾಲು ಹಾಕುವ ಸೌಕರ್ಯಗಳಿಲ್ಲ. ಕೇಂದ್ರ ಸರ್ಕಾರದ ಆಜ್ಞೆಗಳು, ಕಾನೂನುಗಳು, ನಿಯಮಾವಳಿಗಳು, ನೀತಿಗಳು, ಧೋರಣೆಗಳು, ಯೋಜನೆಗಳು ಹಿಂದಿಯನ್ನು ಬಿಟ್ಟು ಉಳಿದ ಜನಭಾಷೆಗಳಲ್ಲಿ ಲಭ್ಯವಿಲ್ಲ.


ಹೀಗಾಗಿ ಜನ ಭಾಷೆಗಳನ್ನು ಆಡಳಿತ ಭಾಷೆಯನ್ನಾಗಿ ಮಾಡುವುದೆಂದರೆ ರಾಜ್ಯ ಸರ್ಕಾರದ ಹಲವು ಇಲಾಖೆಗಳ ಬಹಳಷ್ಟು ಪತ್ರವ್ಯವಹಾರಗಳು, ಕಡತಗಳು ಕನ್ನಡದಲ್ಲಿರುವುದು ಎಂಬಷ್ಟಕ್ಕೆ ಸಂಕುಚಿತಗೊಂಡಿದೆ. ಇಷ್ಟೊಂದು ಸಂಕುಚಿತ ಅರ್ಥದಲ್ಲಿ ಕನ್ನಡ ಆಡಳಿತದ ಭಾಷೆಯಾಗಲೂ ಕೂಡ ಸ್ವಾತಂತ್ರ್ಯ ಬಂದ 55 ವರ್ಷಗಳವರೆಗೆ ಏಕೀಕರಣವಾದ 48 ವರ್ಷಗಳವರೆಗೆ ಕಾಯಬೇಕಾಗಿ ಬಂದಿದೆ ಎಂಬುದೇ ನಮ್ಮ ಪ್ರಜಾಪ್ರಭುತ್ವ ನಿಜ ಸ್ವರೂಪವನ್ನು ಬಿಚ್ಚಿತೋರಿಸುತ್ತದೆ.

# ಬ್ರೆಜಿಲ್‌ನಲ್ಲಿ ಎಡಪಂಥೀಯ ಲೂಲಾಗೆ ಅಧ್ಯಕ್ಷರಾಗಿ ಪ್ರಚಂಡ ವಿಜಯ




ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯ ಎರಡನೇ ಸುತ್ತಿನಲ್ಲಿ ಎಡಪಂಥೀಯ ವರ್ಕರ್ಸ್ ಪಾರ್ಟಿ ಅಭ್ಯರ್ಥಿ ಲೂಯಿಸ್ ಇನಾಸಿಯೊ ಲೂಲಾ ಡ ಸಿಲ್ವಾ ಪ್ರಚಂಡ ವಿಜಯ ಸಾಧಿಸಿದ್ದಾರೆ. ಜನ ಅವರನ್ನು ಬರಿ 'ಲೂಲಾ' ಎಂದು ಕರೆಯುತ್ತಾರೆ. ಶೇಕಡಾ 60 ಕ್ಕಿಂತಲೂ ಹೆಚ್ಚು ಮತ ಗಳಿಸಿದ ಲೂಲಾ ಬ್ರೆಜಿಲ್ ಅಧ್ಯಕ್ಷರಾಗಿ ಆಯ್ಕೆಯಾದ ಮೊದಲ ಎಡಪಂಥೀಯ ಆಗುವುದರೊಂದಿಗೆ ಇತಿಹಾಸ ಸೃಷ್ಟಿಸಿದ್ದಾರೆ. ಈ ವಿಜಯ ಜಾಗತೀಕರಣ-ವಿರೋಧಿ ಶಕ್ತಿಗಳ ಪ್ರಚಂಡ ವಿಜಯ. ಸಾಮ್ರಾಜ್ಯಶಾಹಿ ಶಕ್ತಿಗಳ ಕೆನ್ನೆಗೆ ಬಿಗಿದ ಏಟು. 1973 ರಲ್ಲಿ ಚಿಲಿಯಲ್ಲಿ ಎಡಪಂಥೀಯ ಅಧ್ಯಕ್ಷ ಅಲೆಂದೆ ವಿಜಯದೊಂದಿಗೆ ಹೋಲಿಸಬಹುದಾದ ಐತಿಹಾಸಿಕ ಘಟನೆ.

ಬ್ರೆಜಿಲ್ ಸಂವಿಧಾನದ ಪ್ರಕಾರ, ಅಧ್ಯಕ್ಷ ಸ್ಥಾನಕ್ಕೆ ನೇರ ಚುನಾವಣೆ ಆಗುತ್ತದೆ. ಯಾವುದೇ ಅಭ್ಯರ್ಥಿಗೆ ಶೇಕಡಾ 50 ಕ್ಕಿಂತ ಹೆಚ್ಚು ಮತ ಸಿಗದಿದ್ದರೆ, ಅತ್ಯಂತ ಹೆಚ್ಚು ಮತಗಳಿಸಿದ ಎರಡು ಅಭ್ಯರ್ಥಿಗಳು ಮಾತ್ರ ಇರುವ ಎರಡನೇ ಸುತ್ತಿನ ಚುನಾವಣೆ ನಡೆಯುತ್ತದೆ. ಈ ಬಾರಿ ಅದೇ ಆಗಿದ್ದು. ಲೂಲಾ ಮತ್ತು ಹಿಂದಿನ ಆಳುವ ಕೂಟದ ಅಭ್ಯರ್ಥಿ ಜೋಸ್ ಸೆರಾ ನಡುವೆ ಎರಡನೇ ಸುತ್ತನ ಹಣಾಹಣಿ ನಡೆದು, ಲೂಲಾ ವಿಜಯಿಯಾದರು. ಆಸಕ್ತಿಕಾರಕ ವಿಷಯವೆಂದರೆ ಮೊದಲ ಸುತ್ತಿನಲ್ಲಿ ಜೋಸ್ ಸೆರಾಗೆ ಕೇವಲ ಶೇಕಡಾ 23.2 ಮತ ಸಿಕ್ಕಿತ್ತು. ಗಮನಾರ್ಹ ಮತಗಳಿಸಿದ ಇತರ ಇಬ್ಬರು ಅಭ್ಯರ್ಥಿಗಳೂ (ಶೇಕಡಾ 18, ಶೇಕಡಾ 12) ಎಡಪಕ್ಷಗಳ ಅಭ್ಯರ್ಥಿಗಳೇ. ಅಂದರೆ ಮೊದಲ ಸುತ್ತಿನಲ್ಲಿ ಒಟ್ಟಾರೆ ಎಡಪಕ್ಷಗಳಿಗೆ ಶೇಕಡಾ 75




ಮತ ಬಿದ್ದಿತು. ಇದು ಬ್ರೆಜಿಲ್ ದಕ್ಷಿಣ ಅಮೆರಿಕಾದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಅಭೂತಪೂರ್ವ ಸಾಧನೆ.

ಲೂಲಾ ಕಳೆದ ಮೂರು ಚುನಾವಣೆಗಳಿಂದ ಎಡ-ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದು, ಈ ಬಾರಿ ಪ್ರಮುಖ ಎಡಪಕ್ಷಗಳಾದ ವರ್ಕರ್ಸ್ ಪಾರ್ಟಿ ಮತ್ತು ಕಮ್ಯುನಿಸ್ಟ್ ಪಾರ್ಟಿ ಅವರನ್ನು ತಮ್ಮ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿದ್ದರು. ಲೂಲಾ ಸ್ವತಃ ಕಾರ್ಮಿಕರಾಗಿದ್ದು, ಟ್ರೇಡ್ ಯೂನಿಯನ್

## 'ಭಯವನ್ನು ಮೆಟ್ಟಿ ಭರವಸೆ ಹೊತ್ತು ನಿಂತ ಬ್ರೆಜಿಲ್'

ಕಾರ್ಯಕರ್ತನಾಗಿ, ನಾಯಕನಾಗಿ ಕೆಲಸ ಮಾಡಿದ್ದು ಅತ್ಯಂತ ಜನಪ್ರಿಯ ನಾಯಕ. ಕಳೆದ ಎಂಟು ವರ್ಷಗಳಿಂದ ಮಾಜಿ ಅಧ್ಯಕ್ಷ ಕಾರ್ಡಸೊ ಐಎಂಎಫ್-ನಿರ್ದೇಶಿತ ನೀತಿಗಳನ್ನು ಚಾಚೂ ಪಾಲಿಸಿ ಬ್ರೆಜಿಲ್ ಜನತೆ ಸಂಕಷ್ಟಗಳನ್ನು ಸಹಿಸಲಾಗದ ಮಟ್ಟಕ್ಕೆ ತಂದಿದ್ದರು. ಅರ್ಜೆಂಟಿನಾದ ಥರಹ ಬ್ರೆಜಿಲ್‌ನ ಆರ್ಥಿಕ ಪೂರ್ಣ ಕುಸಿದು ಹೋದಿತು ಎಂಬ ಭಯದಿಂದ, ಐಎಂಎಫ್ 30 ಶತಕೋಟಿ ಡಾಲರುಗಳ ಅಭೂತಪೂರ್ವ ಹೊಸ ಸಾಲ ಬ್ರೆಜಿಲ್‌ಗೆ ಮಂಜೂರು ಮಾಡಿತ್ತು. ಅಧ್ಯಕ್ಷೀಯ ಚುನಾವಣೆಯಲ್ಲಿ ಆಳುವ ಬಲಪಂಥೀಯ ಕೂಟದ ಅಧ್ಯಕ್ಷೀಯ ಅಭ್ಯರ್ಥಿಯನ್ನು ಪುನಃ ಗೆಲ್ಲಿಸುವುದೂ ಇದರ ಉದ್ದೇಶವಾಗಿರಬಹುದು. ಇದರ ಜತೆಗೆ ಕಳೆದ ಒಂದು ದಶಕದಿಂದ ವರ್ಕರ್ಸ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ, ಬ್ರೆಜಿಲ್ ತುಂಬಾ ಸಾಮ್ರಾಜ್ಯಶಾಹಿ- ಜಾಗತೀಕರಣಕ್ಕೆ ಬದಲಿಯಾಗಿ ರಾಷ್ಟ್ರೀಯ ಬೆಳವಣಿಗೆಯ ಯೋಜನೆಯನ್ನು ಮುಂದಿಡುತ್ತಾ ಬಂದಿದೆ. ಹಲವು ರಾಜ್ಯಗಳಲ್ಲಿ ವರ್ಕರ್ಸ್ ಪಾರ್ಟಿಯ ಸರ್ಕಾರಗಳು ಉತ್ತಮ ಕೆಲಸ ಸಹ ಜನರಲ್ಲಿ ಬದಲಿ ಕಣ್ಣೋಟ ಮೂಡಿಸಿದೆ. ಈ ಅವಧಿಯಲ್ಲಿ ಈಗ ವಿಶ್ವವಿಖ್ಯಾತವಾಗಿರುವ ಭೂರಹಿತ ಕೃಷಿಕಾರ್ಮಿಕರ ಭೂಗ್ರಹಣ ಹೋರಾಟ ಮುಂತಾದ ಜನತಾ ಹೋರಾಟಗಳು ಪ್ರಬಲವಾಗಿವೆ. ಲೂಲಾರ ಪ್ರಚಂಡ ವಿಜಯ ಇವೆಲ್ಲದರ ಫಲ.

**- ಶರತ್‌ಚಂದ್ರ**

### ಇದೊಂದು ಚಾರಿತ್ರಿಕ ವಿಜಯ - ಬ್ರೆಜಿಲ್ ಕಮ್ಯುನಿಸ್ಟ್ ಪಾರ್ಟಿ

ಲೂಲಾರ ವಿಜಯ ಬ್ರೆಜಿಲ್‌ನ್ನು ಇನ್ನೊಂದು ಹಾದಿಯಲ್ಲಿ ಕೊಂಡು ಹೋಗಬಯಸುವ ರಾಜಕೀಯ ಮತ್ತು ಸಾಮಾಜಿಕ ಶಕ್ತಿಗಳ ವಿಜಯ. ಜನಸಾಮಾನ್ಯರ ಮತ್ತು ಮಧ್ಯಮವರ್ಗಗಳು ಬ್ರೆಜಿಲ್ ಕೇಂದ್ರ ಸರ್ಕಾರದಲ್ಲಿ ಯಾವತ್ತೂ ಪ್ರಾತಿನಿಧ್ಯ ಗಳಿಸಿರಲಿಲ್ಲ. ಕಾರ್ಮಿಕರ ಚಳುವಳಿ,ಜನಪರ ಸಂಘಟನೆಗಳು ಮತ್ತು ಪ್ರಜಾಸತ್ತಾತ್ಮಕ ದೇಶಪ್ರೇಮಿ ಶಕ್ತಿಗಳೂ ಲೂಲಾರ ವಿಜಯದ ಬೆನ್ನೆಲುಬಾಗಿದ್ದರು. ಈ ಚಾರಿತ್ರಿಕ ವಿಜಯದ ಸದ್ದು ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸಲಿದೆ....

ಬ್ರೆಜಿಲ್ ಒಂದು ನಿರ್ಣಾಯಕ ಮತ್ತು ವಿಶಿಷ್ಟ ಘಟ್ಟವನ್ನು ಪ್ರವೇಶಿಸುತ್ತಿದೆ. ಈ ವಿಜಯ ಬದಲಾವಣೆಯ ಹೊಸ ಯುಗಕ್ಕೆ ನಾಂದಿ ಹಾಡಲಿದೆ..... ಈ ಬದಲಾವಣೆಯನ್ನು ತರಲು ಅಗತ್ಯವಾದ ಬ್ರೆಜಿಲ್‌ನ ಬಹುಸಂಖ್ಯಾತ ಜನರ ರಾಜಕೀಯ ಬೆಂಬಲ ಲೂಲಾರಿಗಿದೆ.


ಈ ಮಹಾನ್ ಬದಲಾವಣೆಯನ್ನು ತರುವ ಕಾರ್ಯವೇನೂ ಸುಲಭಸಾಧ್ಯ ಎಂಬ ಅರಿವು ನಮಗಿದೆ... ನಮ್ಮ ಜನರ ಶಕ್ತಿಯಲ್ಲಿ ದೃಢನಂಬಿಕೆ, ಬ್ರೆಜಿಲ್‌ನ ಅಗಾಧ ಸಾಧ್ಯತೆಗಳು ಮತ್ತು ಶಕ್ತಿಯ ಆಳವಾದ ತಿಳುವಳಿಕೆಯೇ ನಮ್ಮನ್ನು ಸಾರ್ವಭೌಮತ್ವ, ಪ್ರಜಾಸತ್ತೆ ಮತ್ತು ಸಾಮಾಜಿಕ ನ್ಯಾಯದ ಈ ಮಹಾನ್ ಕಾರ್ಯದಲ್ಲಿ ತೊಡಗಿಸಲಿದೆ. ನಾವೊಂದು ಹೊಸ ಯುಗದ ಹೊಸ್ತಿಲಲ್ಲಿ ನಿಂತಿದ್ದೇವೆ. ಇದು ನಮ್ಮ ನಂಬಿಕೆ.

- ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಹೇಳಿಕೆ

ಬ್ರೆಜಿಲ್‌ನಲ್ಲಿ, ಇಡೀ ದಕ್ಷಿಣ ಅಮೆರಿಕದಲ್ಲಿ ಮಾತ್ರವಲ್ಲ ಸಾಮ್ರಾಜ್ಯಶಾಹಿ ಜಾಗತೀಕರಣದ ಶಕ್ತಿಗಳ ವಿರುದ್ಧ ಹೋರಾಡುತ್ತಿರುವ ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ರೋಮಾಂಚನ ತಂದ ವಿಜಯ.

ಬ್ರೆಜಿಲ್‌ನ ಅಧ್ಯಕ್ಷೀಯ ಚುನಾವಣೆ ಲೂಲಾ ಗೆಲ್ಲುವ ಸಾಧ್ಯತೆ ಬಲವಾಗಿ ಇದ್ದದ್ದರಿಂದ ಇಡೀ ಜಗತ್ತು ಈ ಚುನಾವಣೆಯನ್ನು ಆಸಕ್ತಿಯಿಂದ ನೋಡುತ್ತಿತ್ತು. ಎರಡು-ಮೂರು ವಾರಗಳ ಹಿಂದೆ ಮೊದಲ ಸುತ್ತಿನಲ್ಲಿ ಲೂಲಾ ಶೇಕಡಾ 46 ಗಳಿಸಿದ್ದು, ಎರಡನೇ ಸುತ್ತಿನಲ್ಲಿ ಮತಗಳಿಕೆ ಹೆಚ್ಚಿಸಿಕೊಂಡಿದ್ದಾರೆ. ಬ್ರೆಜಿಲ್‌ನಲ್ಲಿ ಅತ್ಯಂತ ಹೆಚ್ಚು ಮತಗಳಿಸಿದ ಅಧ್ಯಕ್ಷೀಯ ಅಭ್ಯರ್ಥಿ ಲೂಲಾ.

### 'ನಿಮ್ಮ ವಿಜಯ ನಮಗೆ ಸ್ಫೂರ್ತಿ ತಂದಿದೆ' - ಸುರ್ಜಿತ್



ಈ ವಿಜಯ ಜಾಗತೀಕರಣ-ವಿರೋಧಿ ಹೋರಾಟಗಳ ಮನೋಬಲ ಹೆಚ್ಚಿಸಿದೆ. ಲೂಲಾರ ವಿಜಯಕ್ಕೆ ಎಲ್ಲಾ ಎಡ, ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ದೊಡ್ಡ ವಿಭಾಗವನ್ನು ಅಣಿನೆರೆಸುವುದರಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ನಿಮ್ಮ ಪಕ್ಷದ 10 ನೇ ಲೂಲಾರ ವರ್ಕರ್ಸ್ ಪಾರ್ಟಿಯ ನಾಯಕತ್ವದಲ್ಲಿ ರಾಷ್ಟ್ರೀಯ ಪುನರ್ರಚನೆ, ಪ್ರಜಾಸತ್ತೆಯ ಆಳಗೊಳಿಸುವ, ಸಾಮಾಜಿಕ ನ್ಯಾಯಕ್ಕಾಗಿ ಜನತಾ ಹೋರಾಟಗಳ ಮುನ್ನಡೆ ಸಾಧಿಸಲು ಸಂಯುಕ್ತ ರಂಗವನ್ನು ಕಟ್ಟುವ ನಿರ್ಧಾರ ಇದರಲ್ಲಿ ಪ್ರಧಾನ ಪಾತ್ರವಹಿಸಿದೆ.....

ಜನರ ನಿರೀಕ್ಷೆಗಳನ್ನು ಗಗನಕ್ಕೇರಿಸಿರುವ ಈ ವಿಜಯದ ನಂತರ, ಲೂಲಾರ ಹೊಸ ಸರ್ಕಾರ ಮುಂದೆ ಇರುವ ಗಂಭೀರ ಸವಾಲುಗಳ ಬಗೆ ಸಿಪಿಐ(ಎಂ)ಗೆ ಅರಿವಿದೆ. ಚುನಾವಣೆಯಲ್ಲಿ ಮೂಗು ತೂರಿಸಲು ಪ್ರಯತ್ನಿಸಿ ವಿಫಲವಾದ ಸಾಮ್ರಾಜ್ಯಶಾಹಿ ಶಕ್ತಿಗಳು, ಹೊಸ ಸರ್ಕಾರಕ್ಕೆ ನಿಶ್ಚಯವಾಗಿ ಗಂಭೀರ ಸಮಸ್ಯೆಗಳನ್ನು ತಂದಿಡುತ್ತಾರೆ. ಐಎಂಎಫ್ ಈಗಾಗಲೇ ಅಭೂತ ಪೂರ್ವ 30 ಶತಕೋಟಿ ಡಾಲರಿನ ಸಾಲದ ಉಳಿದ 24 ಶತಕೋಟಿ ಡಾಲರುಗಳನ್ನು, ಹಿಂದಿನ ಕಾರ್ಡೋನೊ ಸರ್ಕಾರ ಒಪ್ಪಿದ ಶರತ್ತುಗಳನ್ನು ಹೊಸ ಸರ್ಕಾರ ಪಾಲಿಸಲಿದ್ದರೆ ಕೊಡುವುದಿಲ್ಲ ಎಂದು ಬೆದರಿಕೆ ಹಾಕಿದೆ.

ಇವೆಲ್ಲ ಸಂಕಷ್ಟಗಳ ನಡುವೆ, ನೀವು ಹೇಳಿದಂತೆ ನಿಜವಾಗಿಯೂ ಬ್ರೆಜಿಲ್ ಹೊಸ ಯುಗದ ಹೊಸ್ತಿಲಲ್ಲಿ ನಿಂತಿದೆ. 'ಲ್ಯಾಟಿನ್ ಅಮೆರಿಕದ ಅತಿದೊಡ್ಡ ದೇಶದಲ್ಲಿ ಜಾಗತೀಕರಣ ವಿರೋಧವಾದ ಒಂದು ಸರ್ಕಾರದ ರಚನೆಯಾಗುವುದೇ ಲ್ಯಾಟಿನ್ ಅಮೆರಿಕಕ್ಕೆ ಮಾತ್ರವಲ್ಲ ಇಡೀ ಜಗತ್ತಿನ ಮೇಲೆ ಉತ್ತಮ ಪರಿಣಾಮ ಬೀರಲಿದೆ" ಎಂದು ನಿಮ್ಮ 10ನೇ ಮಹಾಧಿವೇಶನದಲ್ಲಿ ಹೇಳಿದ್ದು ನಿಜವಾಗಿದೆ.

ಇಡೀ ಜಗತ್ತು ನಿಮ್ಮತ್ತ ನೋಡುತ್ತಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ಏಜೆಂಟರು ಜಗತ್ತಿನೆಲ್ಲೆಡೆ ಇನ್ನಷ್ಟು ಆಕ್ರಮಣ ನೀತಿಗಳನ್ನು ಹೊರಿಸುತ್ತಿರುವ ಸನ್ನಿವೇಶದಲ್ಲೂ, ಪ್ರಜಾಸತ್ತಾತ್ಮಕ ಚುನಾವಣೆಲ್ಲಿ ಅವರನ್ನು ಸೋಲಿಸ ಬಹುದು ಎಂದು ತೋರಿಸಿದ್ದೀರಿ. ಸಾಮ್ರಾಜ್ಯ ಶಾಹಿ ಜಾಗತೀಕರಣದ ವಿರುದ್ಧ ನಿಮ್ಮ ಹೋರಾಟಗಳಿಗೆ ನಿಮ್ಮ ವಿಜಯ ಹೊಸ ಸ್ಫೂರ್ತಿ ತುಂಬಿದೆ.

ನಿಮಗೆ ಶುಭ ಹಾರೈಸುತ್ತಾ ಸೌಹಾರ್ದ ವಂದನೆಗಳೊಂದಿಗೆ,

**- ಹರಿಕಿಶನ್ ಸಿಂಗ್ ಸುರ್ಜಿತ್**

(ಲೂಲಾರ ವಿಜಯದಲ್ಲಿ ಪ್ರಧಾನ ಪಾತ್ರ ವಹಿಸಿದ ಬ್ರೆಜಿಲ್ ಕಮ್ಯುನಿಸ್ಟ್ ಪಾರ್ಟಿಗೆ ಕಳಿಸಿರುವ ಅಭಿನಂದನಾ ಸಂದೇಶದಲ್ಲಿ)

### ಇಟಲಿಯಲ್ಲಿ ಎರಡನೇ ಸಾರ್ವತ್ರಿಕ ಮುಷ್ಕರ

ಇಟಲಿಯ ಕಾರ್ಮಿಕರು ಅಲ್ಲಿನ ಬಲಪಂಥೀಯ ಸರ್ಕಾರದ ವಿರುದ್ಧ ಯುದ್ಧ ಸಾರಿದ್ದಾರೆ. ಆರು ತಿಂಗಳೊಳಗೆ ಎರಡನೇ ಬಾರಿ ಸಾರ್ವತ್ರಿಕ ಮುಷ್ಕರ ನಡೆದಿದೆ. ಅಕ್ಟೋಬರ್ 18 ರಂದು ಹತ್ತು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಮುಷ್ಕರ ನಡೆಸಿದ್ದಲ್ಲದೆ, ದೇಶದ 120 ಪಟ್ಟಣಗಳಲ್ಲಿ ಭಾರಿ ರ‍್ಯಾಲಿಗಳನ್ನು ತೆಗೆದರು. ಇದು ಇಟಲಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿರುವ ಸಿಜಿಐಎಲ್ ಎಂಬ ಕೇಂದ್ರೀಯ ಟ್ರೇಡ್ ಯೂನಿಯನ್ ಸಂಘಟಿಸಿದ ಚಳುವಳಿ.

ಇಟಲಿ ಸರ್ಕಾರ 'ಕಾರ್ಮಿಕ ಕಾನೂನುಗಳ ಸುಧಾರಣೆ' ಹೆಸರಲ್ಲಿ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳು, ಆರೋಗ್ಯ ಮತ್ತು ಶಿಕ್ಷಣದಲ್ಲಿರುವ ಸವಲತ್ತುಗಳ ಕಡಿವನ್ನು ಅವರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ರೈಲು, ಬಸ್ಸು, ವಿಮಾನ ಮುಂತಾದ ಸಾರ್ವಜನಿಕ ಸಾಗಾಣಿಕೆ ಸ್ತಬ್ಧವಾಗಿತ್ತು. ಈ ಮುಷ್ಕರದ ರ‍್ಯಾಲಿಗಳಲ್ಲೇ ಅತ್ಯಂತ ದೊಡ್ಡ ರ‍್ಯಾಲಿ 'ಫಿಯಟ್' ಕಾರು ಕಂಪನಿಯ ಮುಖ್ಯ ಕಾರ್ಖಾನೆ ಇರುವ ಮಿಲಾನ್‌ನಲ್ಲಿ ನಡೆಯಿತು. ರೋಮ್‌ನಲ್ಲಿ ನಡೆದ ಎರಡು ಪ್ರತ್ಯೇಕ ರ‍್ಯಾಲಿಗಳಲ್ಲಿ ತಲಾ ಒಂದೂವರೆ ಲಕ್ಷ ಜನ ಭಾಗವಹಿಸಿದ್ದರು.

ಟಿವಿ ದೊರೆ ಪ್ರಧಾನಿ ಬೆಲುಕ ಸ್ಕೋನಿ 'ಕಾರ್ಮಿಕ ಸುಧಾರಣೆ'ಗಳ ಬಗ್ಗೆ ಹಠ ಹಿಡಿದು ಕೂತಿದ್ದಾನೆ. ಕಾರ್ಮಿಕರು 1994 ರಲ್ಲಿ ಆತ ಸರ್ಕಾರ ಮಾಡಿದ್ದಾಗ, ಆತನ ಸರ್ಕಾರವನ್ನು ಉರುಳಿಸಿದ್ದರ ಬಗ್ಗೆ ನೆನಪು ಮಾಡುತ್ತಿದ್ದಾರೆ. ಆತನ ಹಠಮಾರಿತನ ನಡೆಯುವುದಿಲ್ಲ ಎಂದು ಮುಷ್ಕರಗಳ ಮಹಾಪೂರದಿಂದ ಹೇಳುತ್ತಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಮುಷ್ಕರದಿಂದ ನಷ್ಟವಾದ ಗಂಟೆಗಳ ಸಂಖ್ಯೆ 5 ಪಟ್ಟು ಆಗಿದೆ. ಇನ್ನೂ ಬೆಲುಕಸ್ಕೋನಿ ಸರ್ಕಾರ ತನ್ನ ಹಠಮಾರಿತನ ಮುಂದುವರೆಸಿದರೆ, ಹಿಂದಿನ ಬಾರಿ ಆದಂತೆ ಮುಷ್ಕರಗಳ ಮಹಾಪೂರದಲ್ಲಿ ಆತ ಕೊಚ್ಚಿ ಹೋಗಲಿದ್ದಾನೆ.

ಐಕ್ಯರಂಗ

ಸಿನಿಮಾ

# ವ್ಯಕ್ತಿ ತೇಜೋವಧೆಯ ಚಿತ್ರ 'ಕಂಬಾಲಹಳ್ಳಿ'

**ದಲಿತರ ಮಾರಣಹೋಮ ನಡೆದ ಕಂಬಾಲಪಲ್ಲಿಯ ಹೆಸರನ್ನಿಟ್ಟು ಕೆಳದರ್ಜೆಯ, ಕೀಳು ಅಭಿರುಚಿಯ ಕಥಾವಸ್ತು ಹೊಂದಿದೆ. ಹೆಗಡೆ-ದೇವೇಗೌಡರ ಸಂಬಂಧಗಳನ್ನು ಎಳೆದುತಂದಿರುವ ಸಿನಿಮಾ ಯಾರನ್ನೋ ಖುಷಿಗೊಳಿಸಿ ರಾಜಕೀಯವಾಗಿ ವಿಕೃತಗೊಳಿಸಲು ಗುರಿ ಇಟ್ಟಂತಿದೆ.**

'ಕಂಬಾಲಹಳ್ಳಿ' ಸಿನಿಮಾ ನೋಡಲು ಕಾತುರದಿಂದ ಹೋದೆ. ಚಿತ್ರನೋಡಿದ ಮೇಲೆ ತುಂಬಾ ನಿರಾಶೆಯಾಯಿತು. 'ಕಂಬಾಲಪಳ್ಳಿ' ಕೋಲಾರ ಜಿಲ್ಲೆಯ ಕುಗ್ರಾಮ. ಅಲ್ಲಿ ಜಾತಿ ವೈಶ್ಯಮ್ಯದಿಂದ ದಲಿತರ ಸಜೀವದಹನ ನಡೆದಿತ್ತು. ಈ ಹತ್ಯಾಕಾಂಡ ಸ್ವಾತಂತ್ರ ಭಾರತದಲ್ಲಿ ಕಪ್ಪುಚುಕ್ಕೆಯಾಗಿ ರಾಷ್ಟ್ರದ ಗಮನ ಸೆಳೆದಿತ್ತು. ಅದೊಂದು ಜಾತಿ ಪದ್ದತಿ ಕ್ರೌರ್ಯದ ಘಟನೆ.

ಇಂತಹ 'ಕಂಬಾಲಪಳ್ಳಿ' ಹೆಸರು ಬಳಸಿ ಜನರಿಂದ ಹಣ ಬಾಚುವ ನಿರ್ಮಾಪಕರದು. ಈ ಹೆಸರಿಗೂ ಆ ಘಟನೆಗೂ ಏನೇನೂ ಸಂಬಂಧವಿಲ್ಲದೆ ಚಿತ್ರ ಹಳೇ ಮಸಾಲೆಗಳ ಕಥಾವಸ್ತುವಾಗಿದೆ. ಅಲ್ಲದೆ ದೇವೆಗೌಡ, ರಾಮಕೃಷ್ಣ ಹೆಗಡೆ, ಬೊಮ್ಮಾಯಿಯವರ ವ್ಯಕ್ತಿಗತ ತೇಜೋವಧೆ ಮೂಲಕ ಸಿನಿಮಾ ಹೊರಬರುವ ಮೊದಲೆ ವಿವಾದದ ಅಲೆ ಎಬ್ಬಿಸಿ ಪ್ರಚಾರ ಗಿಟ್ಟಿಸಲು ಈ ಕಥಾವಸ್ತು ಸಹಾಯಕ ವಾಗಿದೆ. ಈ ಎಲ್ಲಾ ಅಂಶಗಳು ಒಟ್ಟಾರೆ ಜನರ ಜೇಬಿಗೆ ಕನ್ನ ಹಾಕುವುದಾಗಿದೆ.

ಮಲ್ಲಯ್ಯ ಮತ್ತು ಐದು ಜನರ ತೀವ್ರಗಾಮಿ ಗುಂಪನ್ನು ಚಿತ್ರಿಸಿ ಆಕರ್ಷಕಗೊಳಿಸಲಾಗಿದೆ. ಈ ಜನ ಕೋಲಾರದ ಜಿಲ್ಲೆ ಚಿಂತಾಮಣಿಯ ಅಕ್ಕಪಕ್ಕ ಹಳ್ಳಿಯವರೆಂದು ಹೆಸರಿಸಲಾಗಿದೆ. ಈ ಹಳ್ಳಿಯಲ್ಲಿ ರಾಮಯ್ಯ ಮತ್ತು ಕುರುಡು ಹೆಂಡತಿ ಮತ್ತು ಮೂರು ಗಂಡುಮಕ್ಕಳ ಜೀತಗಾರ ದಲಿತ ಕುಟುಂಬ. ಊರ ಜಮೀನ್ದಾರ ದೊಡ್ಡೇಗೌಡರ ಜಮೀನಿನಲ್ಲಿ ಜೀತ ಮಾಡಿಕೊಂಡು ಜೀವನ ನಡೆಸುತ್ತಿರುತ್ತದೆ. ದೊಡ್ಡೇಗೌಡ(ದೊಡ್ಡಣ್ಣ) ರಾಮಕೃಷ್ಣ ಅಡಿಗ (ಜಿ.ಕೆ ಗೋವಿಂದರಾವ್), ಬ್ರಹ್ಮಪ್ಪ (ಮುಖ್ಯಮಂತ್ರಿ ಚಂದ್ರು) ರಾಜಕೀಯ ದಾಳಿಗಳಿಗೆ ಸಿಕ್ಕಿ ಬ್ರಹ್ಮಪ್ಪನ ಶಕುನಿ ಬುದ್ದಿಯ ಮಾರ್ಗಸೂಚಿಯಂತೆ ದೊಡ್ಡೇಗೌಡ ರಾಮಯ್ಯನ ಗುಡಿಸಲಿಗೆ ಬೆಂಕಿ ಹಾಕಿ ಸುಟ್ಟು ಭಸ್ಮಮಾಡುತ್ತಾನೆ. ಇದರಲ್ಲಿ ರಾಮಯ್ಯ ಮಗ ಮಲ್ಲಯ್ಯ (ದೇವರಾಜು) ಹೊರಗೆ ಸಿನಿಮಾ ನೋಡಲು ಹೋದುದರಿಂದ ಬದುಕುಳಿಯುತ್ತಾನೆ. ತನ್ನ ಕಣ್ಣೆದುರೇ ನಡೆದ ಈ ವಿದ್ರಾವಕ ಘಟನೆ ಯಿಂದ ವ್ಯಾಘ್ರನಾಗಿ 5 ಜನ ಗುಂಪುಕಟ್ಟಿಕೊಂಡು ಈ ಶ್ರೀಮಂತರನ್ನು ಮಟ್ಟಹಾಕಲು ಕಾಡನ್ನು ಸೇರಿ ಪ್ರತಿಕಾರ ತೀರಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಶ್ರೀಮಂತರಿಂದ ಹಣ ದೋಚಿ ಹಳ್ಳಿ ಬಡವರಿಗೆ ನೀಡಿ ಜನೋಪಕಾರಿಯಾಗಿ ಹಳ್ಳಿಯ ಜನರ ಮೆಚ್ಚುಗೆ ಗಳಿಸುತ್ತಾನೆ. ಕಾಡಿನಲ್ಲಿ ಮದುವೆಗಾಗಿ ಬರುತ್ತಿದ್ದ ಶ್ರೀಮಂತರ ಕುಟುಂಬ ಮದುಮಗಳು ಚನ್ನಮ್ಮ (ಪ್ರೇಮ) ಇತರರನ್ನು ಅಟ್ಟಿಗಟ್ಟಿ ಮದುಮಗಳಿಂದ ಹಣ, ಚಿನ್ನದ ಆಭರಣ ಕಸಿಯುತ್ತಾನೆ. ಇಂತಹ ಸಂದರ್ಭದಲ್ಲಿ ಮದುವೆ ಗಂಡು ಸೇರಿದಂತೆ ಎಲ್ಲರೂ ಪರಾರಿಯಾಗಿ ಮದುಮಗಳಾದ ಚನ್ನಮ್ಮ ಒಬ್ಬೊಂಟಿಯಾಗಿ ಉಳಿಯುತ್ತಾಳೆ. ಮಲ್ಲಯ್ಯ ಮದುಮಗಳು ಚನ್ನಮ್ಮನಿಗೆ ಯಾವುದೇ ತೊಂದರೆ ಮಾಡದೇ ತಾಳಿ ವಸ್ತ್ರದ ಗಂಟು ನೀಡಿ "ನಿನ್ನ ಬಿಟ್ಟು ಹೋದ ಇಂತಹ ನಪುಂಸಕ ಗಂಡನಿಂದ ತಾಳಿ ಕಟ್ಟಿಸಿಕೊಳ್ಳಬೇಡ ನಿನ್ನನ್ನು ಜೀವನ ಪೂರ್ತಿ ರಕ್ಷಿಸುವ ಗಂಡನಿಗೆ ತಾಳಿ ಕಟ್ಟು" ಎಂದು ಎಚ್ಚರಿಕೆ ಮಾತು ಹೇಳಿ ತನ್ನ ಸ್ನೇಹಿತನ ಜೊತೆಯಲ್ಲಿ ಕಳುಹಿಸಿ ಹಳ್ಳಿಗೆ ಜೋಪಾನವಾಗಿ ಬಿಟ್ಟಿ ಬರುತ್ತಾನೆ. ಇಡೀ ರಾತ್ರಿ ಮಲ್ಲಯ್ಯ ಜೊತೆಗೆ ಇದ್ದೆ ಎಂದು ಹೀಯಾಳಿಸುವ ಮದುವೆ ಗಂಡು ನೀನು ನೀತಿಗೆಟ್ಟವಳು ನಿನ್ನನ್ನು ಮದುವೆಯಾಗುವುದಿಲ್ಲವೆಂದು ಹೀನಾಯವಾಗಿ ಬಯ್ಯುತ್ತಾನೆ. ಆದಕ್ಕೆ ಸವಾಲಾಗಿ ಮದುಮಗಳು ಚನ್ನಮ್ಮ ನಿನ್ನಂತ ಹೇಡಿಯನ್ನು ಮದುವೆಯಾಗುವುದಿಲ್ಲವೆಂದು ಛೀಮಾರಿ ಹಾಕಿಹೋಗುತ್ತಾಳೆ.



ಕೊನೆಗೆ ಮಲ್ಲಯ್ಯನ ಆಶ್ರಯ ಪಡೆಯುತ್ತಾಳೆ ಮಲ್ಲಯ್ಯನನ್ನು ಮದುವೆಯಾಗಲು ಇಚ್ಛಿಸುತ್ತಾಳೆ.

ಈ ಮಧ್ಯೆ ರಾಜಕೀಯದ ವೈಷಮ್ಯಗಳನ್ನು ಬಿಂಬಿಸುವ ರಾಜಕೀಯ ಸನ್ನಿವೇಶಗಳು, ಚುನಾವಣೆ, ಎಂ.ಎಲ್.ಎ ಸೀಟಿಗಾಗಿ ಕುತಂತ್ರ ಇತ್ಯಾದಿಗಳು ತೆರೆಯ ಮೇಲೆ ತೇಲಿಹೋಗುತ್ತವೆ. ರಾಮಕೃಷ್ಣ ಅಡಿಗರ ನರಿಬುದ್ಧಿ - ದೊಡ್ಡೇಗೌಡರ ವೈಯಕ್ತಿಕ ವೈಷಮ್ಯಗಳು, ದೊಡ್ಡೇಗೌಡ ಅವರ ಅಣ್ಣನೊಂದಿಗೆ ಭೂವಿವಾದ. ದೊಡ್ಡೇಗೌಡರ ಹೆಂಡತಿಗೆ ಆಸಿಡ್ ಎರಚುವ ಪ್ರಸಂಗ, ಬ್ರಹ್ಮಯ್ಯ ಈ ಇಬ್ಬರ ರಾಜಕೀಯದಲ್ಲಿ ಮೂಗು ತೂರಿಸಿ ಗದ್ದುಗೆ ಏರುವುದು ನಡೆಯುತ್ತದೆ. ದಲಿತ ಕುಟುಂಬದ ಮಲ್ಲಯ್ಯ ಅಸ್ಪ್ರಶ್ಯತೆ, ಜಾತಿಪದ್ಧತಿಯ ಸಂಕೇತವಾಗಿ ಕಾಣಿಸಿಕೊಳ್ಳುತ್ತಾನೆ. ಪ್ರತೀಕಾರದ ಹೆಗ್ಗುರುತಾಗಿ ಬಿಂಬಿಸುತ್ತಾನೆ. ಒಟ್ಟಾರೆ ಜನರನ್ನು ಈ ಕಥಾವಸ್ತುವಿನ ಪೇಚಿಗೆ ಸಿಲುಕಿಸಿ ಚಿತ್ರಮಂದಿರದ ಒಳ ಹೋದವರನ್ನು ಹೊರದಬ್ಬಲಾಗುತ್ತದೆ.

ಯುವಜನ ಆಕರ್ಷಣೆಗಾಗಿಯೇ ಹಾಡುಗಳನ್ನು ಸೇರಿಸಿ ಚಿತ್ರ ನಾಯಕಿಯರಿಗೆ ಅರಬೆತ್ತಲೆ ಉಡುಗೆ, ತೊಡುಗೆ ಹಾಕಿ ಕುಣಿಸುವುದು ಅದಕ್ಕೆ ತಕ್ಕಂತೆ ಸಂಗೀತ ಇತ್ಯಾದಿ ಸೇರಿಸುವಲ್ಲಿ ನಿರ್ದೇಶಕ ತುಂಬಾ ಪ್ರಯಾಸ ಪಟ್ಟಿದಂತೆ ಕಾಣುತ್ತದೆ. ಅಲ್ಲಲ್ಲಿ ಬೇಕಿಲ್ಲದ ಮಸಾಲೆಯಂತೆ ಪೋಲೀಸ್ ಮತ್ತು ಬಾಕ್ಸಿಂಗ್ ಸೇರಿಸಿ ಎರಡುವರೆ ಗಂಟೆ ಪ್ರೇಕ್ಷಕರನ್ನು ಹಣಿಯಲು ಸರ್ವಪ್ರಯತ್ನ ಮಾಡಿದ್ದಾರೆ.

ದೇವರಾಜು, ಪ್ರೇಮ, ದೊಡ್ಡಣ್ಣ, ಜಿ.ಕೆ.ಗೋವಿಂದರಾವ್, ಮುಖ್ಯಮಂತ್ರಿ ಚಂದ್ರು ಪಾತ್ರಗಳಿಗೆ ಜೀವ ತುಂಬಿದ್ದಾರೆ.

ಇಂತಹ ಚಿತ್ರಗಳು ಪ್ರೇಕ್ಷಕರಿಗೆ ಯಾವ ಮನರಂಜನೆ ನೀಡುತ್ತವೆ? ಯಾವುದೇ ಗುಣಮಟ್ಟದ ಸಂದೇಶವನ್ನು ನೀಡದ ಅಸಂಬದ್ದತೆ ಮತ್ತು ವ್ಯಕ್ತಿಗತ ರಾಜಕೀಯ ಸೇಡಿನ ಈ ಚಿತ್ರ ಕಂಬಾಲಪಳ್ಳಿಯಾಗಿದೆ. ಪತ್ರಿಕೆಗಳಲ್ಲಿ ವಿವಾದ ಸುದ್ದಿಗಳು, ಪೋಸ್ಟರ್ಸ್‌ನಲ್ಲಿ ಕಾನೂನು ಮಧ್ಯೆ ಪ್ರವೇಶ, ಕಂಬಾಲಪಳ್ಳಿ ಟೈಟಲ್ ಜನರು ಚಿತ್ರ ನೋಡಲು ಬರುವಂತೆ ಯೋಜನೆ ರೂಪಿಸಿಕೊಂಡು ಈ ಚಿತ್ರ ತಯಾರಿಸಲಾಗಿದೆ. ಬೆಳ್ಳಿ ತೆರೆಗೆ ಹೊರಾಂಗಣ ಚಿತ್ರೀಕರಣ ಒಪ್ಪುವಂತೆ ಆಯ್ಕೆ ಮಾಡಿಕೊಡಲಾಗಿದೆ. ಡಿ.ಸಿ.ಪಿ ಯಾಗಿ ಶಾಸಕ ಯೋಗೇಶ್ವರ್ ಮೆಚ್ಚುವ ಹಾಗಿಲ್ಲ. ಕೊನೆಯಲ್ಲಿ ಎಲ್ಲಾ ಖಳನಾಯಕ, ನಾಯಕರಟರನ್ನು ಸಾಯಿಸಿ ರಾಮಕೃಷ್ಣ ಅಡಿಗನನ್ನು ಕೊಲ್ಲುವ ಸಿನಿಮಾದ ಅಂತ್ಯದಲ್ಲಿ ಮುಸ್ಲಿಂ ಬಾಂದವರನ್ನು ಬಳಸಿ ಹಿಂದೂ ಕೋಮು ಭಾವನೆ ಬರುವಂತೆ ಚಿತ್ರವನ್ನು ಮುಗಿಸಲಾಗಿದೆ. ಇದು ಆತಂಕದ ಸನ್ನಿವೇಶ. ಅಲ್ಲಾ ಓ ಅಕ್ಬರ್ ಗೀತೆಯೊಂದಿಗೆ ಸಿನಿಮಾ ಕೊನೆಗೊಳ್ಳುತ್ತದೆ.

ಈ ಚಿತ್ರದ ಕಥೆಗಾರ, ನಿರ್ಮಾಪಕ ಮುನಿರತ್ನನದ್ದು ಕುಖ್ಯಾತ ಇತಿಹಾಸವೇ ಇದೆ. ಗುಜರಾತ್ ಗಲಭೆ ಹೊತ್ತಿ ಉರಿಯುವಾಗಲೇ ಅದನ್ನೇ ಬಂಡವಾಳ ಮಾಡಿಕೊಳ್ಳಲು ಮುಂದಾದ ಈತ ಅರೆ ಹುಚ್ಚನ ನಟನೆಗೆ ಪಕ್ವವಾಗಿರುವ ಉಪೇಂದ್ರನಿಗೆ ಅಯೋಧ್ಯ ರಾಮನ ವೇಷ ಹಾಕಿಸಿ, ಗೋದ್ರಾ ರೈಲಿಗೆ ಬೆಂಕಿ ಇಟ್ಟು, 'ಹಿಂದೂ' ಸಿನಿಮಾ ಮಾಡುವುದಾಗಿ ಸುದ್ದಿ ಮಾಡಿ, ಛೀಮಾರಿ ಹಾಕಿಸಿಕೊಂಡಿದ್ದ. ಈಗ ದಲಿತರ ಅಮಾನವೀಯ ಹತ್ಯೆಯ ಹಿನ್ನೆಲೆಯಲ್ಲಿ ಬೆಳಕಿಗೆ ಬಂದ 'ಕಂಬಾಲಪಳ್ಳಿ'ಯನ್ನೇ ಬಂಡವಾಳ ವಾಗಿರಿಸಿ, ದಲಿತರ ಕುರಿತು ತನ್ನ ಹೀನ ಭಾವನೆಯನ್ನು ಪ್ರಕಟಿಸಿದ್ದಾನೆ. ಈತ ಮುಂದೆ ಬಾಳಠಾಕ್ರೆಯ ಸಿನಿಮಾ ಮಾಡುವನಂತೆ.

ಇಂತಹವರಿಗೆ ಜನ ಸರಿಯಾಗಿ ಬುದ್ದಿ ಕಲಿಸಬಾರದೆ?

**- ಗೋಪಾಲಕೃಷ್ಣ ಅರಳಹಳ್ಳಿ**

## ನಮಗೆ ನಮ್ಮ ಇತಿಹಾಸ ಬೇಕು, ನನ್ನ ಇತಿಹಾಸ ಬೇಕು - ಡಾ.ಪೂಣಚ್ಚ

**ಇತಿಹಾಸದ ವೈಜ್ಞಾನಿಕ ಅಧ್ಯಯನಕ್ಕೆ ಅಗತ್ಯವಾದ ದೃಷ್ಟಿಕೋನದ ಬಗ್ಗೆ ನಡೆದ ವಿಚಾರಸಂಕಿರಣದ ಮುಂದುವರಿದ ವರದಿ ಇಲ್ಲಿದೆ**

'ಇತಿಹಾಸ ಅಧ್ಯಯನಕ್ಕೆ ಅಗತ್ಯವಾದ ವೈಜ್ಞಾನಿಕ ದೃಷ್ಟಿ'

ನಾವು ಕಲಿಯುತ್ತಿರುವ ಇತಿಹಾಸ 'ನಮ್ಮ' ಇತಿಹಾಸವಲ್ಲ. 'ನನ್ನ' ಇತಿಹಾಸವೂ ಅಲ್ಲ. ಇತಿಹಾಸದ ನಿರೂಪಣೆಗೆ ಇಂದು ಆಧಾರ ವಾಗಿರುವುದೇನು? 'ರಾಜ-ಮಹಾರಾಜರು' ಕೆತ್ತಿಸಿದ ಶಾಸನಗಳು. ರಾಜ ಮಹಾರಾಜರ ಅಸ್ಥಾನ ಕವಿಪುಂಗವರು ರಚಿಸಿದ ಭಟ್ಟಂಗಿ ಸಾಹಿತ್ಯ ಕೃತಿಗಳು. ಅರಮನೆ, ಕೋಟೆ ಕೊತ್ತಲಗಳು.

ಇವುಗಳಲ್ಲಿ ಜನರ ಬದುಕಿನ ನೈಜ ಇತಿಹಾಸ ಸಿಗುವುದಿಲ್ಲ. 'ನಮ್ಮ ಇತಿಹಾಸ ನನ್ನ ಇತಿಹಾಸ ದೊರೆಯುವುದಿಲ್ಲ'. ಜನಪದ ಕಾವ್ಯದಲ್ಲಿ ಚರಿತ್ರೆ ಇದೆ. ಅದನ್ನು ಹೆಕ್ಕಿ ತೆಗೆಯುವ ಕೆಲಸ ಆಗಬೇಕಿದೆ. ಆಧುನಿಕ ಇತಿಹಾಸದ ಪ್ರಮುಖ ಆಧಾರಗಳಾಗಿರುವ ಬ್ರಿಟಿಷರ ಗೆಜೆಟಿಯರ್‌ಗಳು ಇತಿಹಾಸ ದಾಖಲೆಯ ಉದ್ದೇಶದಿಂದೇನು ರಚಿತವಾದವಲ್ಲ. ಬ್ರಿಟಿಷರ ಆಡಳಿತದಲ್ಲಿ ಆಡಳಿತಗಾರರ ಅನುಕೂಲಗಳಿಗಾಗಿ ಮಾಹಿತಿ, ಅಂಕಿಅಂಶಗಳ್ನು ಒದಗಿಸುವ ಕ್ರಮವಾಗಿ ಗೆಜೆಟಿಯರ್‌ಗಳು ರೂಪುಗೊಂಡಿವೆ. ಹೀಗೆ ಡಾ. ಪೂಣಚ್ಚ ಇತಿಹಾಸ ನಿರೂಪಣೆಗೆ ಆಧಾರವಾಗಿರುವ ಆಕರ-ಆಧಾರಗಳನ್ನು ವಿಮರ್ಶಿಸಿದರು.

**ಕರ್ನಾಟಕದ ಇತಿಹಾಸವನ್ನು ಪುನರ್ ನಿರೂಪಿಸಬೇಕಿದೆ - ಜಿ.ಎನ್.ನಾಗರಾಜ್**

ನಮ್ಮ ಇತಿಹಾಸವನ್ನು ಆರಂಭಿಕ ಹಂತದಲ್ಲಿ ನಿರೂಪಿಸಿದ ಬ್ರಿಟಿಷ್ ಇತಿಹಾಸಕಾರರಿಗೆ ಜನಪರ ಸಾಹಿತ್ಯ, ಜಾನಪದ ಜ್ಞಾನ ಇರಲಿಲ್ಲ. ಜಾನಪದೀಯ ಅಧ್ಯಯನ - ಜ್ಞಾನವಿಲ್ಲದ ಇತಿಹಾಸ ನಿರೂಪಣೆಯಿಂದಾಗಿ ನಮ್ಮ ಇತಿಹಾಸ ನಿರೂಪಣೆ ಸಾಕಷ್ಟು ಕೊರತೆ-ಲೋಪಗಳಿಂದ ಕೂಡಿದೆ.

ಶಿಲಾಯುಗದ ಕಾಲದಲ್ಲಿ ಕಲ್ಲಿನ ಆಯುಧಗಳೊಂದಿಗೆ ಬೇಟೆಯಾಡಿ ಜೀವಿಸುತ್ತಿದ್ದ ಜನರು ಒಂದು 'ಲೋಹ'ದ ಆಯುಧ - ಕೊಡಲಿಯನ್ನು ತಯಾರಿಸಲು ಸಾಧ್ಯವಾಗಿದ್ದು ಸಮಾಜದ ಬೆಳವಣಿಗೆಯ ದಾರಿಯಲ್ಲಿ ದೊಡ್ಡ ನೆಗೆತವಾಗಿತ್ತು.

ಇಂತಹ ಲೋಹದ ಕೊಡಲಿಯ ಸಹಾಯದಿಂದ ದಟ್ಟ ಕಾಡುಗಳ ಪ್ರದೇಶಕ್ಕೆ ಪ್ರವೇಶ ಮಾಡಲು, ಕಾಡುಗಳನ್ನು ಕಡಿದು ಹಳ್ಳಿ, ಊರುಗಳನ್ನು ನಿರ್ಮಿಸಲು ಸಾಧ್ಯವಾಯಿತು. ಮಾನವ ಸಮಾಜದ ವಿಕಾಸದ ಹಾದಿಯಲ್ಲಿ ಪ್ರಮುಖ ನೆಗೆತವಾದ 'ಲೋಹದ ಕೊಡಲಿ' ಸಂಶೋಧನೆ, 'ನಾಡನ್ನು ಸೃಷ್ಟಿಸಿದ ಪರಶು(ಕೊಡಲಿ)ರಾಮ'ನ ಕತೆಯ ರೂಪದಲ್ಲಿ ಜನಸಮುದಾಯದ ಸ್ಮೃತಿಯಲ್ಲಿ ದಾಖಲಾಗಿದೆ. (ವೇದಗಳು ಸಹ ಆರ್ಯರ ಜನಾಂಗದ ಅಂದಿನ ಸಮಾಜದ ಜನಪದ ಕಾವ್ಯಗಳಾಗಿವೆ). ಇಂತಹ ಜನ ಸಮುದಾಯದ ಸ್ಮೃತಿ-ಜನಪದ ಸಾಹಿತ್ಯ-ಜನಪದವನ್ನು ಇತಿಹಾಸ ನಿರೂಪಣೆಯ ದೃಷ್ಟಿಯಿಂದ ಆಳವಾಗಿ ಅಧ್ಯಯನ ನಡೆಸಬೇಕಾದ ಹಾಗೂ ಕರ್ನಾಟಕ ಇತಿಹಾಸವನ್ನು ಪುನರ್ ರಚಿಸಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಇತಿಹಾಸದ ಕುರಿತು ಸಾಕಷ್ಟು ಸಂಶೋಧನೆಗಳನ್ನು ನಡೆಸಿರುವ ಜಿ.ಎನ್.ನಾಗರಾಜ್‌ರವರು ತಿಳಿಸಿದರು.

**- ರಾಮಕೃಷ್ಣ ಆರ್**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH